ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿಗಾಗಿ
ಸಲ್ಲಿಸಿದ ಸಂಶೋಧನಾ ಪ್ರಬಂಧ

"ಯಂತ್ರಗಳನ್ನು ಕಳಚೋಣ ಬನ್ನಿ" ಕೃತಿಯ ಸಂಸ್ಕೃತಿ ಪರಿಶೀಲನೆ

ಶಶಿಕಲಾ ಎನ್
ಸಂಶೋಧನಾ ವಿದ್ಯಾರ್ಥಿನಿ
ರಿ.ನಂ. **KVMBKS-00680**

ಮಾರ್ಗದರ್ಶಕರು

ಡಾ|| ಬಿ.ಯು. ಸುಮ
ಕನ್ನಡ ಸ್ನಾತಕೋತ್ತರ ಕೇಂದ್ರ
ಸರ್ಕಾರಿ ಪ್ರಥಮದರ್ಜೆ ಕಾಲೇಜು
ವಿಜಯನಗರ, ಬೆಂಗಳೂರು-560 040

ಕಾವ್ಯಮಂಡಲ
ಬೆಂಗಳೂರು 2013-14

1138

ದೃಢೀಕರಣ ಪತ್ರ

ಶಶಿಕಲಾ ಎನ್ ಇವರು ಯಂತ್ರಗಳನ್ನು ಕಳಚೋಣ ಬನ್ನಿ ಕೃತಿಯ ಸಂಸ್ಕೃತಿ ಪರಿಶೀಲನೆ ಎಂಬ ಶೀರ್ಷಿಕೆಯ ಈ ಎಂ.ಫಿಲ್ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧ ಪಡಿಸಿರುತ್ತಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ವಿಶ್ವ ವಿದ್ಯಾಲಯದ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

23/7/14

ಡಾ|| ಬಿ. ಯು. ಸುಮಾ, ಎಂ.ಎ., ಪಿಹೆಚ್.ಡಿ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ವಿಜಯನಗರ, ಬೆಂಗಳೂರು – 560 104

ದಿನಾಂಕ : 23/7/14
ಬೆಂಗಳೂರು

ಮಾರ್ಗದರ್ಶಕರು
ಕನ್ನಡ ಸ್ನಾತಕೋತ್ತರ ಕೇಂದ್ರ
ಸರ್ಕಾರಿ ಪ್ರಥಮ ದರ್ಜೆ
ಕಾಲೇಜು
ವಿಜಯನಗರ,
ಬೆಂಗಳೂರು 560040

1138

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸಿರುವ ಯಂತ್ರಗಳನ್ನು ಕಳಚೋಣ ಬನ್ನಿ ಕೃತಿಯ ಸಂಸ್ಕೃತಿ ಪರಿಶೀಲನೆ ಎಂಬ ಶೀರ್ಷಿಕೆಯ ಈ ನಿಬಂಧವನ್ನು ಡಾ|| ಬಿ.ಯು. ಸುಮಾ, ಸಹ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು 560040 ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಯಾವುದೇ ವಿಶ್ವ ವಿದ್ಯಾಲಯದ ಪದವಿ ಅಥವಾ ಇತರ ಉದ್ದೇಶಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ 24.7.2014
ಬೆಂಗಳೂರು

ಶಶಿಕಲಾ ಎನ್
ಸಂಶೋಧನಾ ವಿದ್ಯಾರ್ಥಿನಿ

ಪರಿವಿಡಿ

ಅಧ್ಯಾಯ – 1

ಪೀಠಿಕೆ

ನಮ್ಮ ಸಂಸ್ಕೃತಿ ಮತ್ತು ಪರಂಪರೆ ಪ್ರಾಚೀನವಾದವು. ಬಹುಮುಖಿಯಾದವು. ಜಾಗತೀಕರಣದಿಂದ ಅವುಗಳ ಮೇಲೆ ಆಕ್ರಮಣವಾಗುತ್ತಿದೆ. ನಾವು ಅದನ್ನು ರಕ್ಷಿಸಬೇಕು. ಇಂತಹ ಮಾತುಗಳನ್ನು ನಾವು ಸಾಮಾನ್ಯವಾಗಿ ಕೇಳುತ್ತೇವೆ. ಇದನ್ನು ಧಾರ್ಮಿಕ ನಾಯಕರು, ರಾಜಕಾರಣಿಗಳು ಮಾತ್ರವಲ್ಲ ವಿದ್ವಾಂಸರು ಸಹ ಆಡುತ್ತಿದ್ದಾರೆ.[1]

ನಾಗರೀಕತೆ ಬೆಳೆದಂತೆಲ್ಲಾ, ಸಂಸ್ಕೃತಿ ಎಂಬ ಪರಿಕಲ್ಪನೆಯೂ ಸಹ ಮಾರ್ಪಡುತ್ತಲೇ ಇದೆ. ಒಂದು ಕಾಲದಲ್ಲಿ ಸಾಂಸ್ಕೃತಿಕ ಅಧ್ಯಯನ, ಸಾಂಸ್ಕೃತಿಕ ಪರಿಶೀಲನೆ ಎಂದರೆ ಸಂಗೀತ, ಕಲೆ, ಸಾಹಿತ್ಯ, ಧರ್ಮ ಮುಂತಾದವನ್ನು ಗುರುತಿಸುವುದು ಎಂಬ ಪರಿಪಾಠವಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ, ನೈತಿಕವಾಗಿ ಕೇಡುಗಳೆಂದು ತಿಳಿಯಲಾಗಿರುವ ಬೈಗುಳ, ವೇಶ್ಯಾವಾಟಿಕೆ ಇತ್ಯಾದಿಗಳನ್ನೆಲ್ಲಾ ಸಂಸ್ಕೃತಿಯ ಚೌಕಟ್ಟಿನಲ್ಲಿಟ್ಟು ಅಧ್ಯಯನ ಮಾಡಲಾಗುತ್ತಿದ್ದು, ಅದರ ವ್ಯಾಪ್ತಿ ವಿಸ್ತಾರಗೊಳ್ಳುತ್ತಲೇ ಇದೆ.

ಸಂಸ್ಕೃತಿ ಎಂಬ ಶಬ್ದದ ಅರ್ಥವನ್ನು, ಚರಿತ್ರೆಯನ್ನು ಗಮನಿಸಿದರೆ, ಸಂಸ್ಕೃತದಲ್ಲಿ ಅದು ಸಂಸ್ಕಾರ ಎಂಬರ್ಥದಲ್ಲಿ ಬಳಕೆಯಾಗುತ್ತಿದ್ದು, ಸಂಸ್ಕಾರ ಎಂದರೆ ಸುಧಾರಿಸಿದ, ನಯಗೊಳಿಸಿದ, ಪವಿತ್ರಗೊಳಿಸಿದ, ಶ್ರೇಷ್ಟವಾದ ಎಂಬ ಅರ್ಥವಿದೆ.[2] ಇದು ನಂತರದಲ್ಲಿ ಬದಲಾವಣೆ ಹೊಂದಿ ಸಮುದಾಯ ಒಂದರ ಸಮಗ್ರ ಜೀವನವಿಧಾನಗಳ ಮೊತ್ತ ಎಂದು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಲಾಗಿದೆ. ಸಮುದಾಯ ಒಂದರ ಜೀವನ ವಿಧಾನವೆಂದರೆ ಉಡುವ ಬಟ್ಟೆ, ಉಣ್ಣುವ ಊಟ, ಆಡುವ ಮಾತು, ಮಾಡುವ ಆಚರಣೆ, ನಂಬಿದ ನಂಬಿಕೆ ಇತ್ಯಾದಿ ಬದುಕಿನ ವಿವರಗಳನ್ನು ಒಳಗೊಳ್ಳುತ್ತದೆ. ಆದರೆ ದುರದೃಷ್ಟವಶಾತ್, ಒಂದು ಸಮುದಾಯದಲ್ಲಿ ಬದುಕುವ ಜನರ ಭಾಷೆ, ಹುಟ್ಟಿದಜಾತಿ, ಧರ್ಮ, ವಾಸಿಸುವ ಪ್ರದೇಶದ ಆಧಾರದಮೇಲೆ ಸಂಸ್ಕೃತಿಯು ನಿಂತಿರವುದರಿಂದ ಏಕ ರೀತಿಯ ವಿಧಾನ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಇದೇ ಸಂಸ್ಕೃತಿಗೆ ಸಂವಾದಿಯಾಗಿ ಇಂಗ್ಲೀಷಿನಲ್ಲಿ 'ಕಲ್ಚರ್' ಎಂಬ ಶಬ್ದವೂ ಬಳಕೆಯಲ್ಲಿದ್ದು ಲ್ಯಾಟಿನ್ ಭಾಷೆಯ ಕಲ್ಟ್, ಕಲ್ಟಸ್ ಎಂಬ ಪದದಿಂದ ಬಂದಿದೆ. ಕಲ್ಟಸ್ ಎಂದರೆ ಪೈರು ಬೆಳೆಯುವುದು. ಭೂಮಿದೈವದ ಆರಾಧನೆ. ಕೃಷಿ ಮಾಡುವಿಕೆಗೆ ಸಂಬಂಧಿಸಿದಂತೆ ಈ ಪದವನ್ನು ಬಳಸಲಾಗಿದೆ.[3] ಈ ಅಂಶಗಳ ಆಧಾರದಮೇಲೆ ಸಂಸ್ಕೃತಿ ಪರಿಶೀಲನೆ ಎಂಬುದು ಒಂದು ಸಮುದಾಯ. ಬದುಕುವ, ಆಲೋಚಿಸುವ ಮತ್ತು ಸಮಸ್ತ ಆಯಾಮಗಳನ್ನು ಒಳಗೊಳ್ಳುತ್ತದೆ. ಆದರೆ ಅದು ಏಕರೂಪಿ ಗುಣವನ್ನು ಹೊಂದಿಲ್ಲ. ಬಹುರೂಪೀ ಆಯಾಮವನ್ನು ಒಳಗೊಂಡಿದೆ ಎಂಬುದು ಈ ಮೂಲಕ ತಿಳಿದು ಬರುತ್ತದೆ.

ಇಪ್ಪತ್ತನೇ ಶತಮಾನದ ಬೌದ್ಧಿಕ ಚರ್ಚೆಗಳಲ್ಲಿ ಅಪಾರವಾಗಿ ಬಳಕೆಯಾದ ಶಬ್ದಗಳಲ್ಲಿ ಸಂಸ್ಕೃತಿಯೂ ಒಂದು. ಬಹುತೇಕ ಇವತ್ತಿನ ದಿನಮಾನಗಳಲ್ಲಿ, ಭಾಷೆಯ ಆಧಾರದ ಮೇಲೆ ಸಂಸ್ಕೃತಿಯನ್ನು ಪರಿಶೀಲಿಸವುದು, ಜಾತೀಯ ಆಧಾರದ ಮೇಲೆ, ದೇಶದ ಆಧಾರದ ಮೇಲೆ, ಅಷ್ಟೇ ಏಕೆ ಪ್ರಾಂತ್ಯಗಳ ಆಧಾರದ ಮೇಲೆ ಸಂಸ್ಕೃತಿಯನ್ನು ಪರಿಶೀಲಿಸುವ ಕಾರ್ಯ ಜರುಗುತ್ತಿದೆ. ಬಹುತೇಕ ಕೃತಿಗಳನ್ನು ಅವಲೋಕಿಸಿದಾಗ, ಅಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಸಂಸ್ಕೃತಿಯು ತನ್ನ ವರ್ಚಸ್ಸನ್ನು ಬೀರಿದೆ. ಎಂಬುದು ಗೊತ್ತಾಗುತ್ತದೆ.

ಇಂತಹ ಸಂದರ್ಭದಲ್ಲಿ ಸಂಸ್ಕೃತಿಯ ಪರಿಶೀಲನೆ ಮಾಡುವಾಗ ಈ ಕೆಳಕಂಡ ಅಂಶಗಳು ನಮಗೆ ಗೋಚರವಾಗುತ್ತದೆ. ಅವುಗಳು ಯಾವುದೆಂದರೆ, ಅದು ಜೀವನಕ್ರಮ, ಯಾವುದೋ ಒಂದು ಸಭ್ಯ, ಸಂಸ್ಕಾರ, ಮೌಲ್ಯಪ್ರಜ್ಞೆ, ಸಾಹಿತ್ಯಕ, ಸಾಮಾಜಿಕ, ಭಾಷಿಕ, ಆರ್ಥಿಕ, ರಾಜಕೀಯ ಮುಂತಾಗಿ ಬಹು ಶಿಸ್ತೀಯ ಆಯಾಮಗಳಲ್ಲಿ ಪರಿಶೀಲನೆ ಮಾಡುವುದು. ಸಾಮಾಜಿಕವಾಗಿ ನೆಲೆಗೊಂಡಿರುವ ವರ್ತನೆ, ಸಹಜ ಸ್ವಭಾವ, ಸಾಮಾಜಿಕ ಹೊಣೆಗಾರಿಕೆ ಹೀಗೆ ಹತ್ತು ಹಲವು ವಿಚಾರಗಳನ್ನು ಒಳಗೊಂಡ ಒಂದು ಸಮಗ್ರ ಪರಿಕಲ್ಪನೆ ಎಂದು ತಿಳಿಯಬಹುದಾಗಿದೆ. ಇನ್ನು ಪಾಶ್ಚಾತ್ಯ ಸಂಸ್ಕೃತಿ ಚಿಂತನೆಯ ಕ್ರಮಗಳನ್ನು ಗಮನಿಸಿದಾಗ, ನೈತಿಕವಾದಿಯಾದ ಮ್ಯಾಥ್ಯೂ ಅರ್ನಾಲ್ಡ್‌ರವರ ಪ್ರಕಾರ ಜಗತ್ತಿನಲ್ಲಿ ಈ ವರೆಗಿನ ಅತ್ಯುತ್ತಮವಾದ ಆದರ್ಶಗಳ ಚಿಂತನೆ ಬೋಧೆ; ಅದು ಮಾನವರ ಅಂತರಂಗಕ್ಕೆ ಸಂಬಂಧಿಸಿದ್ದು ಎನ್ನುತ್ತಾರೆ. ಮಾರ್ಕ್ಸ್‌ವಾದಿ ಚಿಂತಕರು ರಾಜಕಾರಣದ ದೃಷ್ಟಿಕೋನದಿಂದ ನೋಡುತ್ತಾರೆ. ಪೌರ್ವಾತ್ಯವಾದಿಗಳು ಗತಕಾಲದ ಚರಿತ್ರೆಯ ಹಿನ್ನೆಲೆಯಲ್ಲಿ ನೋಡಿದರೆ, ಸಮಾಜವಾದಿಗಳು, ಜಾತಿ, ಧರ್ಮ, ವ್ಯವಸ್ಥೆ, ಇತ್ಯಾದಿಗಳನ್ನು ಆಧಾರವಾಗಿಟ್ಟುಕೊಳ್ಳುತ್ತಾರೆ. ಸಾಹಿತಿಗಳು ಕಲೆ, ಸಂಗೀತ, ನೃತ್ಯ, ನಾಟಕ, ಇತ್ಯಾದಿ ಪರಿಕಲ್ಪನೆಗಳ ಆಧಾರದಮೇಲೆ ಸಂಸ್ಕೃತಿಯನ್ನು ಗ್ರಹಿಸುತ್ತಾರೆ.

ಆದ್ದರಿಂದಲೇ, ಸಾಂಸ್ಕೃತಿಕ ಅಧ್ಯಯನದ ಪರಿಧಿಯು ವಿಸ್ತಾರಗೊಂಡಿದ್ದು, ಏಕದೃಷ್ಟಿಕೋನದಿಂದಾಗಲಿ ಅಥವಾ ಏಕ ರೀತಿಯ ಧ್ಯೇಯೋದ್ದೇಶಗಳಿಂದಾಗಲಿ ನೋಡಲು ಸಾಧ್ಯವಾಗುವುದಿಲ್ಲ. ಅದು ಭಾರತದಂತಹ 'ವಿವಿಧತೆಯಲ್ಲಿ ಏಕತೆ' ಹೊಂದಿರುವ ದೇಶದಲ್ಲಿ ಸಂಸ್ಕೃತಿಯನ್ನು ಒಂದು ಚೌಕಟ್ಟಿನಲ್ಲಿ ಅಧ್ಯಯನ ಮಾಡುವುದು ಸಾಧ್ಯವಾಗುವುದಿಲ್ಲ. ಕಾಲಕ್ಕೆ ತಕ್ಕಹಾಗೆ, ಪರಿಸ್ಥಿತಿಗೆ ತಕ್ಕಂತೆ, ಸಂಸ್ಕೃತಿಯು ಪರಿವರ್ತನೆಗೊಳ್ಳುತ್ತಾ ಹೋದರೂ ಸಹ, ತನ್ನ ಮೂಲ ಸ್ವರೂಪವನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಲು ಸಾಧ್ಯವಾಗುತ್ತಿಲ್ಲ. ಬಹುರೂಪೀ ಗುಣವನ್ನು ಎಳ್ಳಷ್ಟೂ ಕಳೆದುಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದರ ಆಧಾರದಮೇಲೆ ಸಂಸ್ಕೃತಿ ಪರಿಶೀಲನೆ ಮಾಡುವುದು ಇಲ್ಲಿನ ಅಧ್ಯಾಯಗಳ ಮುಖ್ಯಧೋರಣೆಯಾಗಿದೆ.

ಅಧ್ಯಯನದ ವಿಷಯ :

ಕಳೆದ ಅರ್ಧಶತಮಾನದ ಕನ್ನಡದ ಸಾಂಸ್ಕೃತಿಕ ಅಧ್ಯಯನದ ಮಾದರಿಗಳನ್ನು ಎರಡು ಬಗೆಯಲ್ಲಿ ವಿಂಗಡಿಸಿ ನೋಡಬಹುದು. ಮೊದಲನೆಯದಾಗಿ, ಚಾರಿತ್ರಿಕ, ಸಾಹಿತ್ಯಿಕ, ಜಾನಪದ, ಸಾಮಾಜಿಕ, ಮತ್ತು ಬುಡಕಟ್ಟು ಮುಂತಾಗಿ ಇದು ಜ್ಞಾನ ಶಿಸ್ತುಗಳನ್ನು ಆಧರಿಸಿದ ವಿಂಗಡಣೆ. ಎರಡನೆಯದಾಗಿ ಕಲಾಕೇಂದ್ರಿತ, ಮೌಲ್ಯಕೇಂದ್ರಿತ ಮುಂತಾಗಿ ಸಂಸ್ಕೃತಿಯ ವ್ಯಾಖ್ಯಾನಗಳನ್ನು ಆಧರಿಸಿದ ವಿಂಗಡಣೆ.[4]

ಸಂಸ್ಕೃತಿ ಪರಿಶೀಲನೆ ಕುರಿತು ಇತ್ತೀಚಿನ ಬೆಳವಣಿಗೆ ಮತ್ತು ಹೊಸ ಸಾಧ್ಯತೆಗಳ ಬಗ್ಗೆ ಅವಲೋಕಿಸಿದರೆ, ಸಂಸ್ಕೃತಿ ಕುರಿತ ಹಲವಾರು ವ್ಯಾಖ್ಯಾನಗಳು ಅಧ್ಯಯನದ ವಿಧಾನಗಳು ಹುಟ್ಟಿವೆ, ಬದಲಾಗಿವೆ, ವಾಗ್ವಾದಗಳು ಎದ್ದಿವೆ ಮತ್ತು ಅನೇಕ ವಿಭಿನ್ನ ಘಟನೆಗಳು ಜರುಗಿವೆ ಇವೆಲ್ಲವೂ ವರ್ಗಗಳ, ಸಿದ್ಧಾಂತಗಳ ಆಶೋತ್ತರಗಳನ್ನು ಪ್ರತಿನಿಧಿಸುತ್ತಾ ಕರ್ನಾಟಕದ ಸಾಮಾಜಿಕ – ರಾಜಕೀಯ – ಚರಿತ್ರೆಯನ್ನು ಪರೋಕ್ಷವಾಗಿ ಹೇಳಲು ಹವಣಿಸುತ್ತಿದೆ. ಈಚೆಗೆ ಸಾಂಸ್ಕೃತಿಕ ಪರಿಕಲ್ಪನೆ ಅಧ್ಯಯನಗಳಲ್ಲಿ ಹೊಸ ಆಯಾಮಗಳು ಕಾಣಿಸಿಕೊಂಡಿವೆ. ಇವುಗಳ ಹಿಂದೆ ಕೆಲವು ಮುಖ್ಯ ಚಾರಿತ್ರಿಕ ಒತ್ತಡಗಳು ಕೆಲಸ ಮಾಡಿವೆ ಅವೆಂದರೆ, ಜಾತಿ ಸಮುದಾಯಗಳಲ್ಲಿ ನಡೆದಿರುವ ಸಂಘಟನೆ, ಕೋಮುವಾದ ಹಾಗೂ ಅದಕ್ಕೆ ಹುಟ್ಟಿರುವ ಪ್ರತಿರೋಧಗಳು, ಜಾಗತೀಕರಣ ಮತ್ತು ಅದಕ್ಕೆ ಬಂದಿರುವ ಬರುತ್ತಿರುವ ಪ್ರತಿಕ್ರಿಯೆಗಳು, ಪ್ರಾದೇಶಿಕ ಅಸಮಾನತೆಯಿಂದ ಹುಟ್ಟುತ್ತಿರುವ ಹೊಸ ಆಶೋತ್ತರಗಳು. ಇವು ಸದ್ಯದ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಮುಖ್ಯವಾದ ಚಲನೆಗಳನ್ನು ಎಬ್ಬಿಸಿರುವ ಚಾರಿತ್ರಿಕ ಒತ್ತಡಗಳು. ಇವೆಲ್ಲವನ್ನು 'ಸಾಂಸ್ಕೃತಿಕ ಪರಿಶೀಲನೆ' ಎಂಬ ಶೈಕ್ಷಣಿಕ ಚಟುವಟಿಕೆಯ ಸ್ವರೂಪವನ್ನು ಅಂತಿಮವಾಗಿ ನಿಯಂತ್ರಿಸುತ್ತಿವೆ.

ಆದರೆ, ಇಷ್ಟು ದೀರ್ಘಕಾಲದ ಬಳಿಕವೂ ಸಾಂಸ್ಕೃತಿಕ ಪರಿಶೀಲನೆಯ ಸ್ವರೂಪ, ಖಚಿತತೆ ಪಡೆದಿಲ್ಲ. ಖಚಿತತೆ ಇಲ್ಲಾ ಎನ್ನುವುದು ಬರೀ ದೋಷವಾಗಿ ನೋಡಬೇಕಿಲ್ಲ. ತಾತ್ವಿಕ ಖಚಿತತೆ ಎನ್ನುವುದು ಒಮ್ಮೆಗೆ ಸರ್ವಮಾನ್ಯವಾದ ಒಂದು ಖಾಯಂ ವ್ಯಾಖ್ಯಾನ ಪಡೆದು ಕೊಳ್ಳುವ ರೂಪ ಸಿದ್ಧಿಯಲ್ಲ. ಅದು ನಿರಂತರ ಬದಲಾಗುತ್ತಿರವ ಜಾಗತಿಕ ಹಾಗೂ ಸ್ಥಳೀಯ ಸನ್ನಿವೇಶಗಳನ್ನು ಬೆನ್ನಟ್ಟುತ್ತಾ, ಬದಲಾಗುತ್ತಿರುವ ಬದುಕನ್ನು ಅರಿಯುವುದಾಗಿ ಪಡೆದುಕೊಳ್ಳಬೇಕಾದ ಜ್ಞಾನವಾಗಿದೆ. ಇದು ವರ್ತಮಾನದ ಜೀವಂತ ಮತ್ತು ನಿರಂತರ ಪ್ರಕ್ರಿಯೆಯಾಗಿ ಮುಂದುವರೆಯುತ್ತಲೇ ಇರುತ್ತದೆ ಎಂದು 2010 ರಲ್ಲಿ ರಹಮತ್ ತರೀಕೆರೆ ಹೇಳಿದರೆ,ರಾಜಾರಾಂ ಹೆಗಡೆಯ ಗತಕಥನ ನವಚಾರಿತ್ರಿಕತೆ ಮತ್ತು ನಿರಚನಾವಾದ ಎಂಬ ಎರಡು ವಿಧಾನಗಳನ್ನು ಖಚಿತವಾಗಿ ಬಳಸಿಕೊಳ್ಳುತ್ತದೆ.ಅದೇ ರೀತಿ ಡಿ.ಆರ್.ನಾಗರಾಜರವರ ಅಲ್ಲಮಪ್ರಭು ಮತ್ತು ಶೈವಪ್ರತಿಭೆ,ಕೇಶವಶರ್ಮರವರ ವಸಹತುಶಾಹಿ ಅನುಭವ ಎಂಬ ಕೃತಿಗಳು ಸಂಸ್ಕೃತಿಯ ಸ್ಪಷ್ಟರೂಪ ನೀಡುತ್ತವೆ.

ಸಾಂಸ್ಕೃತಿಕ ಪರಿಶೀಲನೆಯನ್ನು ಸಂಸ್ಕೃತಿಯ ವ್ಯಾಖ್ಯಾನುಸಾರವಾಗಿ ಏಳು ಭಾಗಗಳಲ್ಲಿ ಕ್ರೂಢೀಕರಿಸಿ ಚರ್ಚಿಸಬಹುದು. ಅವೆಂದರೆ ಮೌಲ್ಯದರ್ಶದ ಪರಿಶೀಲನೆ, ಕಲಾಕೇಂದ್ರಿತ ಅಧ್ಯಯನ, ಸಮುದಾಯವಾದಿ ಪರಿಶೀಲನೆ, ಅನನ್ಯತಾವಾದಿ ಅಧ್ಯಯನಗಳು, ದೇಶಿವಾದಿ ಅಧ್ಯಯನಗಳು, ಸಾಮರಸ್ಯವಾದಿ ಅಧ್ಯಯನಗಳು, ವರ್ಗವಾದಿ ವಿಚಾರಧಾರೆಗಳು ಇಲ್ಲಿನ ಅಧ್ಯಯನದ ಹಿನ್ನಲೆ ಯಾವುದೆಂದು ವಿಷಯವನ್ನು ಸ್ಪಷ್ಟಪಡಿಸುವ ಸೈದ್ಧಾಂತಿಕ ಚಿಂತನೆಗಳು ಹಾಗೂ ಅವನ್ನು ಅನ್ವಯಿಸಿ ಮಾಡಲಾಗುವ ವಿಶ್ಲೇಷಣೆಗಳು ಮುಖ್ಯವಾಗುತ್ತವೆ.

ಈ ಸಂಶೋಧನಾ ಪ್ರಬಂಧದ ಅಧ್ಯಯನಕ್ಕೆ ಇಪ್ಪತ್ತೊಂದನೆ ಶತಮಾನದಲ್ಲಿ ಹೊರಬಂದ ಪ್ರಸನ್ನಾರವರ 'ಯಂತ್ರಗಳನ್ನು ಕಳಚೋಣ ಬನ್ನಿ' ಕೃತಿಯ 'ಸಾಂಸ್ಕೃತಿಕ

ಪರಿಶೀಲನೆ'ಯ ಒಟ್ಟು ಸ್ವರೂಪವನ್ನು ಅರಿಯುವುದು ಈ ಅಧ್ಯಯನದ ಮುಖ್ಯ ಆಶಯವಾಗಿದೆ.

ಅಧ್ಯಯನದ ಉದ್ದೇಶ:

ಇಪ್ಪತ್ತೊಂದನೇ ಶತಮಾನದ ಕನ್ನಡ ಸಾಹಿತ್ಯದಲ್ಲಿ ಅನೇಕ ಭಿನ್ನ ವಸ್ತುಗಳು,ಕಾಳಜಿಗಳು ಮತ್ತು ತತ್ವಗಳು ವ್ಯಕ್ತವಾಗುತ್ತವೆ. ಏಕೆಂದರೆ, ಸಾಮಾಜಿಕ ವಿನ್ಯಾಸದಲ್ಲಿ ಉಂಟಾದ ಪಲ್ಲಟ ಜಾಗತೀಕರಣದ ಆರ್ಥಿಕನೀತಿ, ಮೌಲ್ಯ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನುಂಟುಮಾಡಿದೆ. ಇದಕ್ಕೆ ಕಾರಣವೇನೆಂದರೆ ಮೂಲತಃ ಜಾಗತೀಕರಣ ಮತ್ತು ಜಾಗತೀಕರಣ ಸೃಷ್ಟಿಸಿದ ಪ್ರಕ್ರಿಯೆಗಳು ಎಂಬುದನ್ನು ಪ್ರಸನ್ನ ದೃಢ ನಿಲುವಿನಿಂದ ಹೇಳುತ್ತಾರೆ.

ನವ್ಯ ಸಾಹಿತ್ಯ ಕಾಲಘಟ್ಟದಲ್ಲಿ ಹುಟ್ಟಿಬೆಳೆದ ಪ್ರಸನ್ನರವರು ಪರಂಪರೆಯ ಬಗ್ಗೆ ದೇವರು ದಿಂಡರನ್ನು ಕೂಡ ಮೌಲ್ಯಮಾಪನಮಾಡುವ ವ್ಯಕ್ತಿ – ಅವರ ಈ ಗುಣದಿಂದ ಅವರ ಸುತ್ತಲಿನ ಸಮಾಜವನ್ನು ನಿಷ್ಠುರವಾಗಿ ಮೌಲ್ಯಮಾಪನ ಮಾಡುತ್ತಾರೆ ಇದಕ್ಕೆ ಕಾರಣವೇನೆಂದರೆ ಪಾಶ್ಚಾತ್ಯ ಜೀವನ ಶೈಲಿಯು, ಸ್ಥಳೀಯ ಜನರ ಜೀವನದಲ್ಲಿ ಸಾಕಷ್ಟು ಪ್ರಭಾವ ಬೀರಿದ್ದು ದೇಸಿ ಚಿಂತನೆಯ ಕ್ರಮಗಳು ಕಣ್ಮರೆಯಾಗುತ್ತಿರುವುದರ ಬಗ್ಗೆ ಆತಂಕವನ್ನು ವ್ಯಕ್ತಪಡಿಸುತ್ತಾರೆ. ಪಾಶ್ಚಾತ್ಯ ಜಗತ್ತು ಅಭಿವೃದ್ಧಿ ಹೊಂದಿದ್ದು, ನಾವು ಸಹ ಅಭಿವೃದ್ಧಿ ಹೊಂದಬೇಕು ಎಂಬ ನಿಲುವಿನಿಂದ ದೇಶದ ಇತರ ಪರಿಕಲ್ಪನೆಗಳಾದ ಬಡತನ, ನಿರುದ್ಯೋಗ, ಶಿಕ್ಷಣ, ಆರೋಗ್ಯ, ಇತ್ಯಾದಿಗಳನ್ನು ಕಡೆಗಣಿಸುತ್ತಿದ್ದೇವೆ. ಅಥವಾ ಅವೆಲ್ಲವನ್ನೂ ಸಹ ಮಾರುಕಟ್ಟೆಯ ವಸ್ತುವಾಗಿ ನಿರ್ಮಿಸಿದ್ದೇವೆ ಎಂಬುದನ್ನು ತಿಳಿಯಬಹುದಾಗಿದೆ.

ಯಂತ್ರನಾಗರೀಕತೆಯು – ಸಮಾಜವಾದ, ಸಮತಾವಾದ, ಮಹಿಳಾ ಸಬಲೀಕರಣ ಮತ್ತು ಮಕ್ಕಳಕಲ್ಯಾಣ, ಆರ್ಥಿಕನ್ಯಾಯ, ವಿಶ್ವಭ್ರಾತೃತ್ವ ಹೊಂದುವ ಸಲುವಾಗಿ ರೂಪುಗೊಂಡ ವ್ಯವಸ್ಥೆಯಾಗಿದ್ದು, ಬಹುತೇಕ ಈ ಎಲ್ಲಾ ಅಂಶಗಳನ್ನು ಗಾಳಿಗೆ ತೂರಿ, ಬಂಡವಾಳಶಾಹಿ ವ್ಯವಸ್ಥೆಯ ಕೈಸೆರೆಯಾಗಿವೆ. ಈ ಸಂದರ್ಭದಲ್ಲಿ ಇಂದು ತನ್ನದೇ ಆದ ಸಂಸ್ಕೃತಿ ಪರಂಪರೆಯನ್ನು ಸ್ಥಾಪಿಸಿಕೊಳ್ಳಲು ಹವಣಿಸುತ್ತಿದ್ದು, ಸ್ಥಳೀಯ ಸಂಸ್ಕೃತಿಗೆ ಧಕ್ಕೆಯನ್ನು ತರುತ್ತದೆ ಎಂಬ ವಾದವನ್ನು ಪ್ರಸನ್ನ ಯಂತ್ರಗಳನ್ನು ಕಳಚೋಣ ಬನ್ನಿ ಕೃತಿಯಲ್ಲಿ ಅಭಿವ್ಯಕ್ತಿಸುತ್ತಾರೆ.

ಈ ಕೃತಿಯಲ್ಲಿ ಕಂಡುಬರುವ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ವಿಚಾರಧಾರೆಗಳು ಪ್ರಕೃತಿಯ ಮೇಲೆ, ಮನುಷ್ಯ ಜೀವಿಯ ಮೇಲೆ ಎಂತಹ ಪರಿಣಾಮ ಉಂಟುಮಾಡಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ನನ್ನ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ:

2009ರಲ್ಲಿ ಪ್ರಕಟವಾಗಿರುವ 'ಯಂತ್ರಗಳನ್ನು ಕಳಚೋಣ ಬನ್ನಿ' ಕೃತಿಯ ಸಾಂಸ್ಕೃತಿಕ ಪರಿಶೀಲನೆಯನ್ನು ನಾನು ನನ್ನ ಎಂ.ಫಿಲ್. ಪ್ರಬಂಧದ ಅಧ್ಯಯನಕ್ಕಾಗಿ

ಆಯ್ಕೆ ಮಾಡಿಕೊಂಡಿರುತ್ತೇನೆ. ಶೈಕ್ಷಣಿಕವಾಗಿ, ನೋಡಿದಾಗಲೂ, ಈ ಕೃತಿಯಮೇಲೆ ಯಾವುದೇ ರೀತಿಯ ಸಂಶೋಧನೆ ಇದುವರೆಗೆ ನಡೆದಿರುವುದಿಲ್ಲ. ಕನ್ನಡ ಸಾಹಿತ್ಯದಲ್ಲಿ ಬಂದಿರುವ ಸಾಂಸ್ಕೃತಿಕ ಅಧ್ಯಯನದ ವಿಧಾನಗಳ ಮೂಲಕ ಕೃತಿಯ ವಸ್ತುವನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದಾಗಿದೆ.

1. ನೇರವಾಗಿ ಒಂದು ಪ್ರದೇಶದ ಜನಾಂಗದ ಜನರ ಬದುಕಿನ ರೀತಿ-ರಿವಾಜುಗಳನ್ನು ಅಧ್ಯಯನ ಮಾಡುವುದು.

2. ಕೃತಿಯಲ್ಲಿ ಕಂಡುಬಂದಿರವ ಸಾಂಸ್ಕೃತಿಕ ಅಂಶಗಳನ್ನು ಕಂಡುಕೊಳ್ಳುವುದು.

3. ನಮ್ಮ ಕಾಲಘಟ್ಟದ ಮುಖ್ಯ ಚಿಂತನೆಗಳ ಹಿನ್ನಲೆಯಲ್ಲಿ ಕೃತಿಯನ್ನು ಅಧ್ಯಯನ ಮಾಡುವುದು.

ಪ್ರಸ್ತುತ ಪ್ರಬಂಧ ಕೃತಿಯಲ್ಲಿ ಬಂದಿರುವ ಸಾಂಸ್ಕೃತಿಕ ಅಂಶಗಳನ್ನು ಕಂಡು ಕೊಳ್ಳುವಲ್ಲಿ ಇತರ ಜ್ಞಾನ ಶಾಖೆಗಳು ನೆರವನ್ನು ನೀಡುತ್ತವೆ. ಅವುಗಳಾವುವೆಂದರೆ; ಸಮಾಜ ಶಾಸ್ತ್ರೀಯ, ಮನಶಾಸ್ತ್ರೀಯ, ಭಾಷಾ ಅಧ್ಯಯನ, ಅರ್ಥಶಾಸ್ತ್ರ, ರಾಸಾಯನ ಶಾಸ್ತ್ರ, ಜೀವಶಾಸ್ತ್ರೀಯ ಅಂಶ ಇತ್ಯಾದಿಗಳು ಒಂದರೊಳಗೊಂದು ಹೆಣೆದುಕೊಂಡಿರುತ್ತವೆ. ಭಾಗಶಃ ಈ ಅಧ್ಯಯನವು 'ಬಹು ಶಿಸ್ತೀಯ' ಅಧ್ಯಯನ ಮಾದರಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತದೆ.

ಪ್ರಸನ್ನರವರು ರಂಗಭೂಮಿಯ ಹಿನ್ನಲೆಯಿಂದ ಬಂದಿದ್ದಾರೆ. ವಿಜ್ಞಾನದ ವಿದ್ಯಾರ್ಥಿಯಾದ್ದರಿಂದ ಪ್ರಕೃತಿಯ ಬಗ್ಗೆ, ಜೀವ ವೈವಿಧ್ಯದ ಬಗ್ಗೆ ಅಷ್ಟೇ ಅಲ್ಲ ಪರಂಪರೆಯ ಬಗ್ಗೆಯೂ ಕಾಳಜಿ ಹೊಂದಿದ ವ್ಯಕ್ತಿ ಎಂಬುದು ಅವರ ಕೃತಿಯ ಹಿನ್ನಲೆಯಿಂದ ತಿಳಿಯಬಹುದಾಗಿದ್ದು, ಮಾನವ ಸಂಪನ್ಮೂಲಗಳ ಬಳಕೆ ಎಂದಿನಿಂದ ಪ್ರಾರಂಭವಾಯಿತೋ ಅಂದಿನಿಂದ ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆಯಾಗುತ್ತಿದೆ. ಮುಂದೊಂದು ದಿನ ಈ ಸಂಪನ್ಮೂಲಗಳು ಬರಿದಾಗುವ ಅಥವಾ ನಾಶವಾಗುವ ಹಂತ ತಲುಪಬಹುದಾಗಿದ್ದು ಅವುಗಳನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕು ಎಂಬ ತವಕ ಇವರ ಕೃತಿಯಲ್ಲಿ ಅಭಿವ್ಯಕ್ತಗೊಂಡಿದೆ.

ಸೃಜನಶೀಲತೆಯು ಕಾರ್ಯೋನ್ಮುಖವಾಗುತ್ತಿರವ ಪ್ರಸ್ತುತ ಸಂದರ್ಭದಲ್ಲಿ, ಹಳೆಯ ವಿಚಾರಧಾರೆಗಳನ್ನು ಕೈಬಿಡದೆ ಅವುಗಳ ಆಳದಲ್ಲಿರುವ ಜೀವಪರವಾದ ಕಾಳಜಿಗಳನ್ನು ಗುರುತಿಸುವ ಪ್ರಯತ್ನವನ್ನು ಈ ಕೃತಿ ಮಾಡುತ್ತದೆ ಎಂಬುದು ಅವರ ಚಿಂತನೆಯಾಗಿದ್ದು ಅಧ್ಯಯನದ ವ್ಯಾಪ್ತಿ, ವಿಸ್ತಾರ, ಹರವು ಎಲ್ಲಾವಲಯಗಳನ್ನು ಅದು ಪ್ರವೇಶಿಸಿದೆ ಎಂಬುದು ನಮ್ಮ ಅರಿವಿಗೆ ಬರುವ ಸಂಗತಿಯಾಗಿದೆ.

ಅಧ್ಯಯನದ ಮಹತ್ವ:

ಕನ್ನಡ ಸಾಹಿತ್ಯದಲ್ಲಿ ನಡೆದ ಅಧ್ಯಯನಗಳು ಕಾಲದಿಂದ ಕಾಲಕ್ಕೆ ಭಿನ್ನ ಸ್ವರೂಪ ಪಡೆದು ಕೊಳ್ಳುತ್ತಿವೆ. ಇಪ್ಪತ್ತು ಮತ್ತು ಇಪ್ಪತೊಂದನೆ ಶತಮಾನದಲ್ಲಿ

ನಡೆದ, ನಡೆಯುತ್ತಿರುವ ಸಂಸ್ಕೃತಿ ಕುರಿತ ಪರಿಶೀಲನೆಗಳು ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿವೆ.

ಸಂಸ್ಕೃತಿಯ ಅಧ್ಯಯನವು ಒಂದು ಜನಾಂಗದ ರೂಢಿ – ಸಂಪ್ರದಾಯ, ಆಚಾರ, ವಿಚಾರ, ಪರಂಪರೆ ಮತ್ತು ಪದ್ಧತಿಗೆ ಮಾತ್ರ ಸೀಮಿತವಾಗಿರದೆ, ಅದು ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ, ಜನಾಂಗಿಕ ಮತ್ತು ಭಾಷಿಕ ಇತ್ಯಾದಿ ಅಂಶಗಳ ಮೂಲಕ ಪರಿಶೀಲಿಸುವುದು ಇಂದಿನ ಅಧ್ಯಯನದ ಹಿನ್ನಲೆಯಾಗಿದೆ.

ಕನ್ನಡದ ಪ್ರಮುಖ ಸಂಸ್ಕೃತಿ ಚಿಂತನೆಗಳನ್ನು ಮಾಸ್ತಿ, ದೇವುಡು, ಶಂಬಾ, ಅನಂತಮೂರ್ತಿ, ಬರಗೂರು, ಡಿ.ಆರ್. ನಾಗರಾಜ ಹೀಗೆ ವ್ಯಕ್ತಿ ಆಧಾರಿತವಾಗಿಯೂ ಸಹ ಗುರುತಿಸಬಹುದು. ಮಾಸ್ತಿಯವರು ಸಂಸ್ಕೃತಿಯನ್ನು ಕುರಿತು ಸಭ್ಯತೆ, ಸಂಸ್ಕಾರ ಎಂದು ಹೇಳುತ್ತಾರೆ. ಆದರೆ, ಅದು ನೇರವಾಗಿ ಎಲ್ಲಿಯೂ ಸಂಸ್ಕೃತಿ ಎಂಬ ಪದದಲ್ಲಿ ಬಳಕೆಯಾಗುವುದಿಲ್ಲ. ಹಾಗೆಯೇ, ಡಿ.ವಿ.ಜಿ. ಯವರು ತಮ್ಮ ಸಂಸ್ಕೃತಿ ಎಂಬ ಪುಸ್ತಕದಲ್ಲಿ 'ಪ್ರಕೃತಿ ಸಿದ್ಧವಾದ ಪದಾರ್ಥ'ವನ್ನು ಮನುಷ್ಯ ತನ್ನ ವಿವೇಕದಿಂದ ಸೊಗಸುಗೊಳಿಸಿದರೆ ಅದು ಸಂಸ್ಕೃತಿ ಎನ್ನುತ್ತಾರೆ. ದೇವುಡುರವರು 'ಮಾನವ ಕಾರ್ಯ ಪ್ರಪಂಚದಲ್ಲಿ ಆತನ ಮನೋವಿಕಾಸದ ಸ್ಥಿತಿಯು ಪದೇ ಪದೇ ತೋರಿಬರುತ್ತದೆ'. ಹಾಗೆ ತೋರಿಬರುವ ಮನೋವಿಕಾಸವನ್ನೇ ನಾವು ಸಂಸ್ಕೃತಿ ಎನ್ನುವುದು.

ಗಮನಾರ್ಹ ಸಂಗತಿ ಎಂದರೆ, ಮಾಸ್ತಿ, ದೇವುಡು, ಡಿ.ವಿ.ಜಿ. ಅವರು ಸಂಸ್ಕೃತಿಯನ್ನು ಗತಕಾಲದ ಚರಿತ್ರೆಯಲ್ಲಿ ಮಾತ್ರ ಹುಡುಕದೆ ಸಮಕಾಲೀನ ಬದುಕಿನಲ್ಲು ಕಂಡುಕೊಂಡರು.

ವಿಚಾರವಾದಿ ಘಟ್ಟದಲ್ಲಿ ಶಂಬಾಜೋಶಿ, ಶಿವರಾಮ ಕಾರಂತ ಹಾಗೂ ಶ್ರೀರಂಗರು ಸಾಂಸ್ಕೃತಿಕ ಶೋಧಕ್ಕೆ ಕನ್ನಡ ಸಾಹಿತ್ಯ ಕಲೆ, ನೈತಿಕ ಮೌಲ್ಯಗಳನ್ನು ಬಿಟ್ಟು, ಕನ್ನಡಿಗ ಸಮುದಾಯಗಳ ಭಾಷೆ, ದೈವಾಚರಣೆ, ಆರ್ಥಿಕ ಸಾಮಾಜಿಕ ಚಟುಕಟಿಕೆ, ವಲಸೆಗಳನ್ನು ಆರಿಸಿಕೊಂಡರು. ಏಕೀಕರಣಗೊಂಡ ರಾಜಕೀಯ ಕರ್ನಾಟಕಕ್ಕೆ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಡುವ ಉದ್ದೇಶವೂ ಅವರಿಗಿತ್ತು. ಇಲ್ಲಿ ಸಂಸ್ಕೃತಿಯನ್ನು ಗತಕಾಲಕ್ಕೆ, ಧರ್ಮಕ್ಕೆ ಸೇರ್ಪಡೆ ಮಾಡದಿದ್ದು ಕಂಡು ಬರುತ್ತದೆ.

ವಸಾಹತೊತ್ತರ ವಾದಿ ಘಟ್ಟದಲ್ಲಿ ವಿವಿಧ ಸಮುದಾಯಗಳು ಅಥವಾ ಗುಂಪುಗಳು ಎಚ್ಚೆತ್ತ ಘಟ್ಟಗಳು ನಿರಂತರವಾಗಿ ಬರುವುದು, ಅದರಲ್ಲಿಯೂ ಪಾಶ್ಚಿಮಾತ್ಯ ಪ್ರಭಾವಕ್ಕೆ ತನ್ನನ್ನು ಅತಿಯಾಗಿ ತೆರೆದುಕೊಂಡು, ಅದು ತಪ್ಪೆಂದು ಅನಿಸಿ, ಒಂದು ಬಗೆಯ ಜ್ಞಾನೋದಯದ ಮನಸ್ಥಿತಿಯಲ್ಲಿದ್ದ ಈ ವರ್ಗಕ್ಕೆ ಎರಡು ಸಂಗತಿಗಳಿಂದ ಬಿಡುಗಡೆ ಪಡೆಯಬೇಕೆನಿಸಿತು. ಇಂತಹ ಸಂಕೀರ್ಣ ಅವಸ್ಥೆಯಲ್ಲಿ ಸಂಸ್ಕೃತಿ, ಚಿಂತನೆ ಮಾಡಿದವರಲ್ಲಿ ಯು. ಆರ್. ಅನಂತಮೂರ್ತಿ, ಗೋಪಾಲಕೃಷ್ಣ ಅಡಿಗರು ಪ್ರಮುಖರು.

ಪಾಶ್ಚಾತ್ಯರಲ್ಲೂ ಸಹ ಮಾರ್ಕ್ಸ್, ಲೆನಿನ್, ಕಾಲ್ಡ್‌ವೆಲ್ಡ್, ಎಡ್ವರ್ಡ್‌ಸೈದ್, ಟಿ.ಎಸ್. ಎಲಿಯೆಟ್, ಕಾಫ್ಕಾ, ಎರ್ಜಾಫೌಂಡ್ ಮುಂತಾದವರು, ತಮ್ಮ ಕಾಲದಲ್ಲಿ ಪ್ರಚಲಿತದಲ್ಲಿದ್ದ ಸಂಸ್ಕೃತಿಯ ಸಾರವನ್ನು ತಮ್ಮ ಕೃತಿಯಲ್ಲಿ ವಿವರಿಸುವ ಪ್ರಯತ್ನ ಮಾಡಿದರು.

ಈ ಎಲ್ಲಾ ಅಂಶಗಳನ್ನು ಆಧಾರವಾಗಿಟ್ಟುಕೊಂಡು, ವಿಮರ್ಶಕರಾದ ಡಿ.ಆರ್.ನಾಗರಾಜ ಅವರ ಸಂಸ್ಕೃತಿ ಕಥನ ಮತ್ತು ಸಾಹಿತ್ಯ ಕಥನದಲ್ಲಿನ ಸಂಸ್ಕೃತಿಯ ಪರಿಶೀಲನೆ, ಆಶಿಶ್‌ನಂದಿ, ಎಡ್ವರ್ಡ್‌ಸೈದ್‌ರವರ ಸಂಸ್ಕೃತಿ ಚಿಂತನೆಯ ಸ್ವರೂಪ, ಚಿದಾನಂದಮೂರ್ತಿ, ಹೆಚ್.ತಿಪ್ಪೆರುದ್ರಸ್ವಾಮಿರವರ ಸಂಸ್ಕೃತಿಯ ಸ್ವರೂಪ ಹಾಗೂ ಪ್ರಸನ್ನಾರವರು ಹೇಳುವ ಸಂಸ್ಕೃತಿ ಚಿಂತನೆಗೂ ಹೋಲಿಕೆ, ಸಾಮ್ಯತೆ, ಸಾದೃಶ್ಯಗಳಿವೆ ಎಂಬುದು ಸುಸ್ಪಷ್ಟವಾಗುತ್ತದೆ.

ಈ ನೆಲೆಗಟ್ಟಿನಲ್ಲಿ ಯಂತ್ರಗಳನ್ನು ಕಳಚೋಣ ಬನ್ನಿ ಕೃತಿಯ ಸಂಸ್ಕೃತಿ ಪರಿಶೀಲನೆ ಮಾಡಿದಾಗ ಅಲ್ಲಿ ಈ ಎಲ್ಲಾ ವಿಚಾರಗಳು ಅಡಕವಾಗಿವೆ ಎಂಬುದು ನಮಗೆ ತಿಳಿದು ಬರುತ್ತದೆ.

ಮೊದಲನೆಯದಾಗಿ; ಇಲ್ಲಿ ಬಡತನ, ಅಭಿವೃದ್ಧಿಯ ಪರಿಕಲ್ಪನೆಯ ಸ್ವರೂಪ ಬದಲಾವಣೆಗೊಳ್ಳುತ್ತಿರುವುದು ಹಾಗೂ ಧಾರ್ಮಿಕ ಅಂಧಃಶ್ರದ್ಧೆಯನ್ನು ಸಾಮಾಜಿಕ ಹಿನ್ನಲೆಯಲ್ಲಿ ವಿವೇಚಿಸಲಾಗುವುದು.

ಎರಡನೆಯದಾಗಿ; ಮಾನವ ಮತ್ತು ಜೀವ ಪರಿಸರದ ನಡುವೆ ಹಿಂದೆ ಇದ್ದ ಸಾಮರಸ್ಯತೆ, ಹೊಂದಾಣಿಕೆಯ ಮನೋಭಾವ ಇಂದು ಕ್ಷೀಣಿಸುತ್ತಿರುವುದಕ್ಕೆ ಕಾರಣ ಪರಿವರ್ತನೆ ಸರಿಯಾದ ರೀತಿಯಲ್ಲಿ ಆಗದೇ ಇರುವುದು.

ಮೂರನೆಯದಾಗಿ: ದೇಸಿ ಜೀವನಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಿ, ತನ್ಮೂಲಕ ಹೊಸ ಪರ್ಯಾಯ ವ್ಯವಸ್ಥೆಯನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಯ ಬಗ್ಗೆ ವಿವರಿಸುತ್ತಾರೆ.

ಒಟ್ಟಾರೆಯಾಗಿ ಈ ಅಧ್ಯಯನವು ಸಮಾಜ ಕೇಂದ್ರಿತ ನಿಲುವನ್ನು ಹೊಂದಿದ್ದು, ಜಾಗತೀಕರಣಗೊಳ್ಳುತ್ತಿರುವ ಸಂದರ್ಭದಲ್ಲಿ ಮೂಲೆ ಗುಂಪಾಗುತ್ತಿರುವ ನಮ್ಮ ಸಂಸ್ಕೃತಿ ಮತ್ತು ಪಾರಂಪರಿಕ ಉತ್ಪಾದನಾ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಸಲುವಾಗಿ ಕೃತಿಯ ಉದ್ದಕ್ಕೂ ಪ್ರಸನ್ನರವರು ಆತಂಕ ಮತ್ತು ತಲ್ಲಣವನ್ನು ವ್ಯಕ್ತಪಡಿಸುತ್ತಾರೆ. ಏಕೆಂದರೆ ಬಂಡವಾಳಶಾಹಿ ವರ್ಗದ ಜನರು ಬಡವರ್ಗದ ಜನರ ಬದುಕನ್ನು ನಿಯಂತ್ರಿಸುತ್ತಿದ್ದು, ಮಾರುಕಟ್ಟೆಗಳು ದಿನೇ ದಿನೇ ತಮ್ಮ ಅಧಿಪತ್ಯವನ್ನು ಸ್ಥಾಪಿಸುತ್ತಿವೆ ಇದರಿಂದ ಕೂಲಿ ಕಾರ್ಮಿಕರ ಸ್ಥಿತಿ ಮತ್ತಷ್ಟು ಶೋಚನೀಯವಾಗಿರವ ಸಂದರ್ಭದಲ್ಲಿ ಮುಂದಿನ ಅವರ ಬದುಕಿನ ಸ್ಥಿತಿ ಯಾವ ಹಂತ ತಲುಪಬಹುದೆಂಬ ಅನುಮಾನ ಅವರ ಕೃತಿಯಲ್ಲಿ ವ್ಯಕ್ತವಾಗಿದೆ.

ಅಧ್ಯಯನದ ವಿಧಾನ :

ಕನ್ನಡದಲ್ಲಿ ಈಗಾಗಲೆ ಸಾಕಷ್ಟು ಅಧ್ಯಯನದ ವಿಧಾನಗಳು ರೂಪುಗೊಂಡಿದ್ದು, ಆಯಾಯ ಕಾಲ, ದೇಶ, ಭಾಷೆ, ಜನಾಂಗ, ಸಂಸ್ಕೃತಿಗೆ ತಕ್ಕಂತೆ

ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದ್ದು, ಕೃತಿಯನ್ನು ಓದಲು ನೆರವನ್ನು ನೀಡುತ್ತವೆ. ಒಂದು ಕೃತಿಯನ್ನು ಓದಿ ಅದರೊಳಗೆ ವ್ಯಕ್ತವಾಗಿರುವ ಮತ್ತು ಹೊರಗಿನ ಅಂಶಗಳನ್ನು ತಿಳಿದು ಕೊಳ್ಳಲು ಆಂತರಿಕ ಮತ್ತು ಬಾಹ್ಯ ವಿಮರ್ಶಾ ಮಾದರಿಯನ್ನು ಬಳಸಿಕೊಳ್ಳಲಾಗುತ್ತದೆ.

ಸಾಹಿತ್ಯ ಕೃತಿಯೊಂದರ ಸ್ವಭಾವ ಮತ್ತು ಬೆಲೆಯನ್ನು ಸಾಹಿತ್ಯಿಕವಾಗಿ ನಿರ್ಧರಿಸಲು ಪ್ರಯತ್ನಿಸುವುದು ಆಂತರಿಕ ಅಧ್ಯಯನ ವಿಧಾನವಾದರೆ, ಸಾಹಿತ್ಯ ಕೃತಿಗಳನ್ನು ಸಾಹಿತ್ಯೇತರ ಕಾರಣ ಮತ್ತು ಉದ್ದೇಶಗಳಿಗೆ ಬಳಸಿಕೊಂಡು ಕವಿಯ ಮನೋಧರ್ಮ, ಓದುಗ ಅಥವಾ ಕವಿಯ ಸಮಾಜ, ಮನಃಶಾಸ್ತ್ರ, ನೀತಿ, ಧರ್ಮ ಇತ್ಯಾದಿಗಳ ಬಗ್ಗೆ ಸಾಹಿತ್ಯ ಕೃತಿಗಳ ಮೂಲಕ ಹೊಸ ದೃಷ್ಟಿಯನ್ನು ಪಡೆಯಲು ಬಾಹ್ಯ ವಿಮರ್ಶ ಮಾದರಿ ಯತ್ನಿಸುತ್ತದೆ.

ಕನ್ನಡ ಸಾಹಿತ್ಯ ಲೋಕಕ್ಕೆ ಪಾದಾರ್ಪಣೆ ಮಾಡಿದ ಮೊದಲ ಅಧ್ಯಯನ ವಿಧಾನವೆಂದರೆ, ಚಾರಿತ್ರಿಕ ವಿಧಾನ ಈ ವಿಧಾನದಲ್ಲಿ ಒಂದು ಜನತೆ ತಾನು ಬಾಳಿ ಬದುಕಿದ ಪರಿಯನ್ನು ಆ ಜನತೆಯ ಮನೋಭಾವ ಅದನ್ನು ನಿರ್ದಿಷ್ಟ ರೀತಿಯಲ್ಲಿ ಅಧ್ಯಯನ ಮಾಡುವುದು. ಉದಾ: ಇತ್ತೀಚೆಗೆ 'ಪ್ರಜಾವಾಣಿ'ಯಲ್ಲಿ ಕರ್ನಾಟಕದ ಪ್ರಾಚೀನ ಧರ್ಮ ಯಾವುದೆಂದು ಹೇಳಲು ಪ್ರೊ॥ ಎಂ.ಎಂ.ಕಲಬುರ್ಗಿ ಮತ್ತು ಹಂಪನಾ ನಡುವೆ ವಾದ ನಡೆದಿತ್ತು. ಇಲ್ಲಿ ಚಾರಿತ್ರಿಕ ವಿಧಾನ ಬಳಸಲಾಗಿದೆ. ಚಾರಿತ್ರಿಕ ಅಧ್ಯಯನ ವಿಧಾನ ಹೆಚ್ಚು ಬಳಕೆಯಾಗಿರುವ ನವೋದಯ ಕಾಲಘಟ್ಟದಿಂದ ಬಳಕೆಯಲ್ಲಿರುವ ಒಂದು ವಿಧಾನ ಎಂದರೆ ಕೃತಿಯಲ್ಲಿರುವ ವಸ್ತುವನ್ನು ವಿಶ್ಲೇಷಿಸಲು ಅದು ರಚನೆಯಾದ ಕಾಲಘಟ್ಟದ ಚರಿತ್ರೆಯ ನೆರವನ್ನು ಪಡೆಯಲಾಗುತ್ತದೆ. ಉದಾ: ರಂ.ಶ್ರೀ. ಮುಗುಳಿಯವರ ಕನ್ನಡ ಸಾಹಿತ್ಯ ಚರಿತ್ರೆ. ಹಾಗೆಯೇ ವಸ್ತುವನ್ನು ಸಮಾಜ ಶಾಸ್ತ್ರೀಯ, ಮನಃಶಾಸ್ತ್ರೀಯ ಹಿನ್ನಲೆಯಿಂದ ನೋಡವುದನ್ನು ಅಂತರ್ ಶಿಸ್ತೀಯ ವಿಧಾನ ಎಂದು ಕರೆಯುತ್ತೇವೆ.

ನವ್ಯದ ಕಾಲಘಟ್ಟದಲ್ಲಿ ಕೃತಿಯ ಹೊರಗಿನ ವಿವರಗಳಿಂದ ಕೃತಿಯನ್ನು ಓದುವುದು, ಸಾಹಿತ್ಯದ ಸ್ವಯತ್ತತೆಗೆ ಧಕ್ಕೆ ತಂದಂತೆ ಎಂಬ ವಾದ ಪ್ರಬಲವಾಗಿದ್ದರಿಂದ ನವ್ಯ ಕೃತಿಯ ಒಳಗೆ ರೂಪುಗೊಳ್ಳುವ ರೂಪಕ, ಪ್ರತಿಮೆ, ಒಂದು ಪದಕ್ಕಿರಬಹುದಾದ ವಿಭಿನ್ನ ಅರ್ಥಗಳು ಇವುಗಳ ಹಿನ್ನಲೆಯಲ್ಲಿ ಕೃತಿಯನ್ನು ಓದುವ ಪರಿಪಾಠವನ್ನು ಬೆಳಸಿಕೊಂಡರು. ಇದನ್ನು ಕೃತಿಕೇಂದ್ರಿತ ವಿಧಾನ ಎನ್ನುತ್ತಾರೆ. ನಂತರ ಎಪ್ಪತ್ತರ ದಶಕದಲ್ಲಿ ಮಾರ್ಕ್ಸ್ ವಾದದ ಸಿದ್ಧಾಂತಗಳ ಹಿನ್ನಲೆಯಲ್ಲಿ ಕೃತಿಯನ್ನು ಓದುವ ವಿಧಾನ ಬಳಕೆಗೆ ಬಂದಿತು. ಬರಗೂರು ರಾಮಚಂದ್ರಪ್ಪನವರು ಸಂಪಾದಿಸಿರುವ ಕನ್ನಡ ಸಾಹಿತ್ಯ ಪುನರ್ ಮೌಲಿಕರಣಮಾಲೆ ಮತ್ತು ಉಪ ಸಂಸ್ಕೃತಿಮಾಲೆ ಮಾರ್ಕ್ಸ್ ವಾದದ ಹಿನ್ನಲೆಯಲ್ಲಿ ಸಾಹಿತ್ಯ ಚರಿತ್ರೆಯನ್ನು ಕರ್ನಾಟಕದಲ್ಲಿರುವ ವಿವಿಧ ಜಾತಿ ಬುಡಕಟ್ಟುಗಳ ಅಧ್ಯಯನವನ್ನು ಮಾಡಿತು.

ಸ್ತ್ರೀ ವಾದವು ಸ್ತ್ರೀ ವಾದಿ ಚಿಂತನೆಯ ದೃಷ್ಟಿಯಿಂದ ಸಾಹಿತ್ಯ, ಸಂಸ್ಕೃತಿ ಮತ್ತು ಚರಿತ್ರೆಯನ್ನು ಮರು ಮೌಲ್ಯಮಾಪನ ಮಾಡಲಾರಂಭಿಸಿತು. ಸ್ತ್ರೀ ವಾದದ ಮುಖ್ಯ ಗ್ರಹಿಕೆ ಏನೆಂದರೆ ಸಮಾಜದಲ್ಲಿರುವ ಎಲ್ಲವೂ ಕೂಡ ಸಾಹಿತ್ಯವಾಗಲಿ,

ಚರಿತ್ರೆಯಾಗಲಿ, ಪುರಾಣಗಳಾಗಲಿ ಪುರುಷನ ದೃಷ್ಟಿಕೋನದಿಂದಲೇ ರಚಿತವಾಗಿದ್ದು, ಯಾವುದೇ ಸಾಹಿತ್ಯ ಚರಿತ್ರೆ, ಪುರಾಣದಲ್ಲಿ ಮಹಿಳೆ ಕೇಂದ್ರಕ್ಕೆ ಬಂದಿರುವುದೇ ಇಲ್ಲ. ಆದ್ದರಿಂದ ಮಹಿಳೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪಿತೃಪ್ರಾಧಾನ್ಯತೆಯ ಮೌಲ್ಯಗಳನ್ನು ವಿರೋಧಿಸಿ ಅಧ್ಯಯನ ಮಾಡುವುದಕ್ಕೆ ಸ್ತ್ರೀ ವಾದಿ ಅಧ್ಯಯನ ವಿಧಾನ ಎನ್ನುತ್ತಾರೆ.

ಎಂಬತ್ತರ ದಶಕದ ನಂತರ ಕಂಡುಬರುತ್ತಿರುವ ಅಧ್ಯಯನ ವಿಧಾನಗಳನ್ನು ಸಾಂಸ್ಕೃತಿಕ ಅಧ್ಯಯನ ಎನ್ನುತ್ತಾರೆ. ಸಾಂಸ್ಕೃತಿಕ ಅಧ್ಯಯನ ವಿಧಾನವು ನವೋದಯದವರಂತೆ ಕೃತಿಯನ್ನು ಗ್ರಹಿಸುವುದಕ್ಕೆ ಚರಿತ್ರೆಯನ್ನು ಹಿನ್ನಲೆಯಾಗಿಟ್ಟು ಕೊಳ್ಳುವುದಿಲ್ಲ. ಬದಲಿಗೆ ಪಠ್ಯವೇ ಒಂದು ಚರಿತ್ರೆ ಎಂದು ಹೇಳುತ್ತದೆ. ಹಾಗೂ ಅಧ್ಯಯನದ ಮೂಲಕ ತಕ್ಕ ದಾಖಲೆ ಮತ್ತು ಪುರಾವೆಗಳಿಂದ ಸಮರ್ಥಿಸುತ್ತದೆ. ಹಾಗೆಯೇ ಅಂತರ್ ಶಿಸ್ತೀಯ ವಿಧಾನವನ್ನು ಅದು ಬಳಸುವುದಿಲ್ಲ ಏಕೆಂದರೆ ಒಂದು ಪಠ್ಯದ ಒಳಗೆ ಎಲ್ಲಾ ಶಿಸ್ತುಗಳು ಒತ್ತೊತ್ತಾಗಿ ಹೆಣೆದುಕೊಂಡು ಬಿಟ್ಟಿರುತ್ತವೆ ಎನ್ನುವುದು ಇದರ ವಾದವಾಗಿದೆ. ಅಥವಾ ನವ್ಯದವರ ಹಾಗೆ ಪಠ್ಯವನ್ನು ಎಲ್ಲದರಿಂದ ಬೇರ್ಪಡಿಸಿ ಪ್ರತ್ಯೇಕವಾಗಿಟ್ಟು ನೋಡುವುದು ಇಲ್ಲ ಏಕೆಂದರೆ ಸಮಾಜ ಎನ್ನುವುದು ಏಕಕಾಲಕ್ಕೆ ರಾಜಕೀಯ, ಚರಿತ್ರೆ, ಧರ್ಮ, ಸಂಸ್ಕೃತಿ, ಜಾತಿ ವ್ಯವಸ್ಥೆ ಮತ್ತು ಆರ್ಥಿಕ ವ್ಯವಸ್ಥೆ ಎಲ್ಲದರಿಂದಲೂ ಪ್ರಭಾವಿತವಾಗಿ ರೂಪುಗೊಳ್ಳುತ್ತಿರುತ್ತದೆ ಅಥವಾ ಎಲ್ಲೋ ಇರುವ ಸಿದ್ಧಾಂತವನ್ನು ತಂದು ಕೃತಿಗಳ ಮೇಲೆ ಹೇರುವುದೂ ಇಲ್ಲ.

ಸಂಸ್ಕೃತಿ ಚಿಂತಕರು ಬಳಸುವ ವಿಧಾನವು ಬಹು ಶಿಸ್ತೀಯ, ನವಚಾರಿತ್ರಿಕತೆ ಮತ್ತು ನಿರಚನಾವಾದ ಎಂಬ ಹೆಸರುಗಳ ಮೂಲಕ ಸೂಚಿಸಲಾಗಿದೆ. ಬಹು ಶಿಸ್ತೀಯ ಎಂದರೆ ಪಠ್ಯವು ಹೇಗೆ ಎಲ್ಲಾ ಶಿಸ್ತುಗಳಿಂದ ರೂಪುಗೊಂಡಿರುತ್ತದೆ ಎನ್ನುವುದನ್ನು ಹೇಳುತ್ತಲೆ ಅದರೊಳಗೆ ಸೇರಿ ಹೋಗಿರುವ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಜಾತ್ಯಾತೀತ, ಸಾಂಸ್ಕೃತಿಕ ಈ ಎಲ್ಲಾ ವಿಷಯವನ್ನು ಬೇರ್ಪಡಿಸಿ ಗ್ರಹಿಸಿ ಮತ್ತೆ ಇದೆಲ್ಲದರ ಪ್ರಭಾವದಿಂದ ಯಾವ ರೀತಿ ರೂಪುಗೋಡಿದೆ ಎನ್ನುವುದನ್ನು ವಿವರಿಸುತ್ತದೆ.

ಸಾಂಸ್ಕೃತಿಕ ಅಧ್ಯಯನವು ಪಠ್ಯವನ್ನು ವಿವರಿಸುವುದಕ್ಕೆ,ಚರಿತ್ರೆಯನ್ನು ಅದರ ಹಿನ್ನಲೆಯಲ್ಲಿರುವ ಆಕರವಾಗಿ ಬಳಸಿಕೊಳ್ಳುವುದಿಲ್ಲ,ಬದಲಿಗೆ ಪಠ್ಯವೇ ಚರಿತ್ರೆ ಎನ್ನುವುದನ್ನು ಸಾಬೀತುಪಡಿಸುತ್ತದೆ. ಸಾಂಸ್ಕೃತಿಕ ಅಧ್ಯಯನದ ಮತ್ತೊಂದು ವಿಧಾನ ನಿರಚನಾ ವಾದ. ನಿರಚನಾ ವಾದ ಎಂದರೆ ಈಗಾಗಲೇ ಕಟ್ಟಿರುವುದನ್ನು ಮುರಿದು ಅದರೊಳಗೆ ಬಚ್ಚಿಟ್ಟುಕೊಂಡಿರುವಂತಹ ಅರ್ಥವನ್ನು ವಿಶ್ಲೇಷಣೆ ಮಾಡಿ ಮತ್ತೆ ಕಟ್ಟುವುದು. ಈಗ ಬಚ್ಚಿಟ್ಟುಕೊಂಡಿರುವ ಅರ್ಥಗಳನ್ನು ಹೊರಗೆಳೆಯುವುದು ಹೇಗೆ ಎನ್ನುವ ಪ್ರಶ್ನೆ ಬರುತ್ತದೆ. ಎಂದರೆ ಪಠ್ಯವು ಯಾವ ವಿಷಯದ ಬಗ್ಗೆ ಮಾತನಾಡುತ್ತಿರುತ್ತದೋ ಆ ವಿಷಯವನ್ನು ಗಮನಿಸುವುದು ಎಷ್ಟು ಮುಖ್ಯವೋ ಹಾಗೆಯೇ ಕೃತಿಯು ಯಾವ ವಿಷಯದ ಬಗ್ಗೆ ಮೌನವಹಿಸಿದೆ ಎಂಬುದನ್ನು ಗ್ರಹಿಸುವುದು ಕೂಡ ಅಷ್ಟೇ ಮುಖ್ಯವಾಗಿರುತ್ತದೆ. ಮೊದಲನೇ ವಿಧಾನ ಕೃತಿಯ ಮೌನವನ್ನು ಓದುವುದು ಎನ್ನುತ್ತಾರೆ. ನಿರಚನಾವಾದವು ದ್ವಿಮಾನ ವೈರುಧ್ಯಗಳಲ್ಲಿ ಮಾತನಾಡುವುದಿಲ್ಲ. ದ್ವಿಮಾನ ವೈರುಧ್ಯ ಎಂದರೆ ನಾಯಕ – ಖಳನಾಯಕ, ಕೇಂದ್ರ

– ಪರಿಧಿ ಎನ್ನುವ ವಿಭಜನೆಯನ್ನು ಬಿಟ್ಟು ಪಠ್ಯದ ಸಮಗ್ರ ವಿವರಗಳನ್ನು ಮುಖ್ಯ – ಅಮುಖ್ಯ ಎನ್ನುವ ಧೋರಣೆಯನ್ನು ಇಟ್ಟುಕೊಳ್ಳದೆ ಗ್ರಹಿಸುತ್ತದೆ. ಹೀಗೆ ಮಾಡಿದಾಗ ರಚನೆಯನ್ನು ನಿರಚನೆಗೊಳಿಸುವುದು ಸಾಧ್ಯವಾಗುತ್ತದೆ.

ಈ ಸಂಶೋಧನಾ ಅಧ್ಯಯನವು ಸಾಂಸ್ಕೃತಿಕ ಅಂದರೆ ಬಹು ಶಿಸ್ತೀಯ ಅಧ್ಯಯನ ಮಾದರಿಯನ್ನು ಅಳವಡಿಸಿ ಕೊಂಡಿರುವುದಾಗಿ ವಿವರಿಸುತ್ತದೆ.

ಕೊನೆ ಟಿಪ್ಪಣಿ :

1. ಸಾಂಸ್ಕೃತಿಕ ಅಧ್ಯಯನ;ರಹಮತ್ ತರೀಕೆರೆ; ಅಭಿನವ ಪ್ರಕಾಶನ; 2010; ಪುಟ ಸಂಖ್ಯೆ – 1
2. ಅದೇ – ಪುಟ ಸಂಖ್ಯೆ – 4
3. ಅದೇ – ಪುಟ ಸಂಖ್ಯೆ – 5
4. ಅದೇ – ಪುಟ ಸಂಖ್ಯೆ – 57

ಕೃತಿಕಾರರ ಪರಿಚಯ:

ಪ್ರಸನ್ನರವರು ಖ್ಯಾತರಂಗ ನಿರ್ದೇಶಕರು, ಸಮಕಾಲೀನ ಕನ್ನಡ ರಂಗಭೂಮಿಯೆಷ್ಟೇ ಅಲ್ಲದೆ ಭಾರತೀಯ ರಂಗಭೂಮಿ ಪರಂಪರೆಯಲ್ಲೂ ಹೆಸರು ಮಾಡಿದ ವ್ಯಕ್ತಿ. ಇವರ ಸಾಹಿತ್ಯಿಕ ಒಲವು, ಸೈದ್ಧಾಂತಿಕ ಬದ್ಧತೆ ಹಾಗೂ ರಂಗ ಮಾಧ್ಯಮದ ಅರಿವು ಇವರ ರಂಗ ಚಟುವಟಿಕೆಯ ತಳಪಾಯವಾಗಿದ್ದು, ಇವರ ಸೋಪಜ್ಞನತೆಗೆ ಮೆರೆಗು ನೀಡಿದೆ. ಸಾಹಿತ್ಯ ರಚನೆ ಕಲಾ ವಿನ್ಯಾಸ ಸಂಘಟನೆ, ಬಡಗಿತನ, ಪೈಂಟಿಂಗ್ ಇತ್ಯಾದಿ. ಇವೆಲ್ಲವೂ ರಂಗಾಸಕ್ತಿಯಲ್ಲಿ ಕೃಢೀಕರಣಗೊಳ್ಳುವುದರಿಂದ ಪ್ರಸನ್ನರ ರಂಗಪ್ರಯೋಗಗಳು ವಿಶಿಷ್ಟ ಹಾಗೂ ಅನನ್ಯ ಅನುಭವ ನೀಡುತ್ತವೆ. ಅವರು ಕರ್ನಾಟಕದ ಒಳ ಹೊರಗೆ ಹಲವಾರು ರಂಗ ಪ್ರಯೋಗಗಳನ್ನು, ಕಮ್ಮಟಗಳನ್ನು ಆಯೋಜಿಸುದ್ದು ಮಹತ್ವದ ಸಾಂಸ್ಕೃತಿಕ ಸಂಘಟನೆಯಾದ ಸಮುದಾಯವನ್ನು ಹುಟ್ಟುಹಾಕಿದರು. ಹಾಗಾಗಿ ನಮ್ಮ ಸಮಕಾಲಿನ ಕನ್ನಡ ಸಂಸ್ಕೃತಿಯ ಸಂದರ್ಭದಲ್ಲಿ ಮಹತ್ವದ ಮತ್ತು ಅಪರೂಪದ ವ್ಯಕ್ತಿಯಾಗಿದ್ದಾರೆ.

ಪ್ರಸನ್ನ ಎಂದೇ ಪ್ರಸಿದ್ಧರಾದ ಅವರ ಪೂರ್ಣಹೆಸರು ಆರ್.ಪಿ. ಪ್ರಸನ್ನಕುಮಾರ್. ಇವರ ತಂದೆ ಪ್ರಹ್ಲಾದಾಚಾರ್, ತಾಯಿ ಹೇಮಾವತಿ. ಇವರ ಪೂರ್ವಿಕರ ಊರು ರಾಯದುರ್ಗ ಅದು ಈಗ ಕರ್ನಾಟಕದ ಗಡಿಯಾಚೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿದೆ. ಇವರು ಹುಟ್ಟುದ್ದು 1951 ಮಾರ್ಚ್ 23, ಶಿವಮೊಗ್ಗ ಜಿಲ್ಲೆಯ ಆನವಟ್ಟಿಯಲ್ಲಿ ಜನಿಸಿದರು.

ಇವರ ವಿದ್ಯಾಭ್ಯಾಸ ಅರಂಭವಾದದ್ದು ಚಿತ್ರದುರ್ಗದಲ್ಲಿ ನಂತರ ಶಿವಮೊಗ್ಗದಲ್ಲಿ ಶಾಲಾ ಶಿಕ್ಷಣವನ್ನು ಮುಗಿಸಿದರು. ನಂತರ ಪಿ.ಯು.ಸಿ.ಯಲ್ಲಿ ವಿಜ್ಞಾನದ ವಿಷಯ ಆಯ್ಕೆ ಮಾಡಿಕೊಂಡು ಉತ್ತಮ ಅಂಕ ಗಳಿಸಿದರೂ ಇಂಜಿನಿಯರಿಂಗ್ ಪದವಿಗೆ ಸೀಟು ಸಿಕ್ಕಲಿಲ್ಲ ಕಾರಣವೇನೆಂದರೆ 15 ವರ್ಷಕ್ಕೆ ಪಿ.ಯು.ಸಿ. ಪದವಿ ಮುಗಿಸಿದ್ದರು. 16 ವರ್ಷ ವಯಸ್ಸು ಪೂರ್ಣಗೊಂಡಿಲ್ಲದ ಕಾರಣ ಇಂಜಿನಿಯರಿಂಗ್ ಆಸೆ ಕೈ ಬಿಟ್ಟರು.

ಆಗ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಹಾನರ್ಸ್ ತರಗತಿಗಳು ಆರಂಭಗೊಂಡಿದ್ದು ಅಲ್ಲಿ ಸೀಟುಗಿಟ್ಟಿಸಿಕೊಳ್ಳಲು ಯಶಸ್ವಿಯಾದರು. ಇದು ಅವರ ಬದುಕಿನ ಮಹತ್ವದ ತಿರುವಿಗೆ ಕಾರಣವಾಯಿತು. ಎಲ್ಲಾ ತರದಲ್ಲೂ ಅವರಿಗೆ cultural shock ನೀಡಿತು. ಏಕೆಂದರೆ ಅನೇಕ ಹೊಸ, ವಿಶಿಷ್ಟ ಅನುಭವಗಳ ಆಗರವದು. ಅಲ್ಲಿ ಒಂದಿಬ್ಬರು ಮರಿಕವಿಗಳು, ಒಂದಿಬ್ಬರು ಮರಿಬುದ್ಧಿಜೀವಿಗಳು, ಮತ್ತೆ ನಾಟಕಾಸಕ್ತರು ಕೆಲವರು ಇದ್ದರು. ಅಲ್ಲೇ ಇವರಿಗೆ ಮುದ್ದುಮುಖದ ಮೊದ್ದುಕಲಾವಿದ ಎಂಬ ಬಿರುದು ಸಿಕ್ಕಿದ್ದು, ಕವಿ ಲಕ್ಷ್ಮಣರಾವ್, ನಟ ಟಿ.ವಿ.ನಿರ್ದೇಶಕ ಟಿ.ಎನ್. ಸೀತಾರಾಂ, ಹಾಸ್ಯ ಬರಹಗಾರ ಎಂ.ಎಸ್. ನರಸಿಂಹಮೂರ್ತಿ, ಎಸ್.ಎಸ್. ಶ್ರೀಧರ್ ಮುಂತಾದವರು ಅಲ್ಲಿದ್ದರು. ಪ್ರಸನ್ನರವರು ಮೊದಲಿನಿಂದಲು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ದೇಶದಲ್ಲೇ ಹೆಸರುವಾಸಿಯಾದ, ಕಾನಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಡಾಕ್ಟರೇಟ್‌ಗಾಗಿ ಸಂಶೋಧನೆಗೆ ಸೇರಿಕೊಂಡರು. ಆ ಸಂದರ್ಭದಲ್ಲಿ

ವಿಜ್ಞಾನ ಮತ್ತು ಸಾಹಿತ್ಯ ರಂಗಾಸಕ್ತಿಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅನಿವಾರ್ಯತೆ ಉಂಟಾಯಿತು. ಹೀಗಾಗಿ ಅವರು ವಿಜ್ಞಾನವನ್ನು ಕೈಬಿಟ್ಟು, ನಾಟಕರಂಗ ಪ್ರವೇಶಿಸಲು ಮುಂದಾದರು. ನಿಜವಾಗಿ ನಾಟಕ ರಂಗದ ಮೇಲಿನ ಪ್ರೀತಿಗಿಂತ ಹೆಚ್ಚಾಗಿ, ವಿಜ್ಞಾನದೊಟ್ಟಿಗೆ ಹುಟ್ಟಿಕೊಂಡ ಸಂದಿಗ್ಧತೆ ಮುಖ್ಯ ಕಾರಣವಾಯಿತು. ಅವರೇ ಹೇಳುವಂತೆ ನಾನು ಸ್ಪಷ್ಟವಾಗಿ ಬೆಂಗಳೂರಿನ ವಾತಾವರಣದಲ್ಲಿ ಬೆಳೆದೋನೆ. ಬೆಂಗಳೂರಿನಿಂದ ಬಂದ ನನಗಾಗಲಿ, ಡಿ.ಆರ್. ನಾಗರಾಜ, ಅಗ್ರಹಾರ ಶೂದ್ರ ನಮ್ಮಗಳಿಗೆಲ್ಲ ಒಂದು ತರಹ ನಮ್ಮನ್ನು ನಾವು ಲೈಟಾಗಿ ನೋಡಿಕೊಳ್ಳೋದು ಸಾಧ್ಯವಾಗಿದೆ ಎನ್ನುತ್ತಾರೆ ಪ್ರಸನ್ನ.

ಇವರು ತಮ್ಮ ಚಿಂತನೆಯ ಪ್ರಸಾರಕ್ಕಾಗಿ 'ಮುಕ್ತ' ಪತ್ರಿಕೆಯನ್ನು ಶುರುಮಾಡಿದರು. ಅದರ ಮೊದಲ ಸಂಚಿಕೆ ಬಂದದ್ದು ಕಾರಂತರ ಬಯಲು ರಂಗಭೂಮಿ ಉತ್ಸವದ ಸಂದರ್ಭದಲ್ಲಿ – ಸ್ಟಾರ್ ಸಿಸ್ಟಂ ವಿರೋಧಿಸಿದ್ದು, ಕಾರಂತ, ಕಾರ್ನಾಡರು ಸಂಸ್ಕಾರ, ವಂಶವೃಕ್ಷ ಸಿನಿಮಾದ ಮೂಲಕ ಗಳಿಸಿಕೊಂಡ ಸ್ಟಾರ್ ವ್ಯಾಲ್ಯು ಬಳಸಿಕೊಂಡು, ನಾಟಕದಲ್ಲಿ ಹಾಡು, ನೃತ್ಯ ಬಳಸಿ ನಾಟಕ ಆಡಿಸುತ್ತಿದ್ದಾರೆ ಎಂಬುದು ಮುಖ್ಯವಾದ ವಿಷಯವಾಗಿತ್ತು.

ನಾಟಕ ಕಲೆಯ ಬಗ್ಗೆ ಆಸಕ್ತಿ ಹೊಂದಿದ ಪ್ರಸನ್ನ ರಾಷ್ಟ್ರೀಯ ನಾಟಕಶಾಲೆ (NSD) ಸೇರಿದರು. ಪ್ರಾರಂಭದಲ್ಲಿ ಹಿಂದಿಭಾಷೆ ತಿಳಿಯದ ಅವರು ಸಾಕಷ್ಟು ತೊಂದರೆಯನ್ನು ಸಹ ಅನುಭವಿಸಬೇಕಾಯಿತು.

1975ರಲ್ಲಿ ಕನ್ನಡದಲ್ಲಿ ಅದರಲ್ಲೂ ಬೆಂಗಳೂರಿನ ವಿಶ್ವವಿದ್ಯಾಲಯದ ಪರಿಸರದಲ್ಲಿ ಎಡಪಂಥೀಯ ಒಲವು ಬೆಳೆಯ ತೊಡಗಿತ್ತು. ಆ ಒಲವು ಇನ್ನು ಪಕ್ಷ ರಾಜಕೀಯದ ಸ್ಪಷ್ಟ ಧೋರಣೆಯನ್ನು ತಾಳಿರಲಿಲ್ಲ. ಇದೆಲ್ಲರ ಹಿನ್ನಲೆಯಲ್ಲಿ ಆದ ಡಿ.ಆರ್.ನಾಗರಾಜ, ಕೆ.ವಿ.ನಾರಾಯಣ, ಅಗ್ರಹಾರ ಕೃಷ್ಣಮೂರ್ತಿ, ಸಿ. ವೀರಣ್ಣ, ಕಿ.ರಂ. ನಾಗರಾಜ, ಮೋಹನ ಕೊಂಡಜ್ಜಿ, ಎಂ.ಕೆ. ಭಟ್, ನಗರೀ ಬಾಬಯ್ಯ ಮುಂತಾದವರ ಜೊತೆ ರಾಜಕೀಯ ವಿಚಾರಗಳ ಬಗ್ಗೆ ಇವರು ಚರ್ಚಿಸುತ್ತಿದ್ದರು.

ಅದೇ ಕಾಲದಲ್ಲಿ ಬೆಂಗಳೂರಿನ ರಂಗಭೂಮಿಯ ಚಟುವಟಿಕೆಗಳು ಹೆಚ್ಚತೊಡಗಿದವು. ಆಗ ಅವರು ಸಾಂಸ್ಕೃತಿಕ ಸಂಘಟನೆ 'ಸಮುದಾಯ'ವನ್ನು ಕಟ್ಟಿದರು. ಸಮಾನ ಮನಸ್ಕರೆಲ್ಲ ಸೇರಿ ಇಂಥ ಸಂಘಟನೆಯೊಂದಕ್ಕೆ ಒಳಹು ಹಾಕತೊಡಗಿದಾಗ ಅದಕ್ಕೆ ಸಮುದಾಯ ಎಂಬ ಹೆಸರನ್ನು ಸೂಚಿಸಿದವರು ಕಿ.ರಂ. ನಾಗರಾಜ. ಅದೇ ರೀತಿ ನಿಸ್ಸಾರ್ ಅಹಮದ್, ವಿಜಯಾರವರ ನೆರವಿನಿಂದ ಈ ಸಂಸ್ಥೆಯು ಮೊದಲ ಬಾರಿಗೆ ನಾಟಕ ಪ್ರದರ್ಶನ ಕೊಡಲು ಮುಂದಾದರು.

ಪ್ರಸನ್ನ ರೂಪಿಸಿದ ಸಾಂಸ್ಕೃತಿಕ ಜಾಥಾ ಕನ್ನಡ ಸಂಸ್ಕೃತಿಯಲ್ಲಿ ಅಪೂರ್ವ ಮೈಲಿಗಲ್ಲು. 'ಹೊಸ ಮೌಲ್ಯಗಳತ್ತ ಸಾಂಸ್ಕೃತಿಕ ಜಾಥಾ' ಎಂಬ ಧ್ಯೇಯ ವಾಕ್ಯವನ್ನು ಹೊಂದಿದ ಈ ಜಾಥಾ ಸರ್ವಾಧಿಕಾರಿ ಶಕ್ತಿಯ ವಿರುದ್ಧ ನಡೆಸಿದ ಜನಜಾಗೃತಿ ಕಾರ್ಯಕ್ರಮವಾಗಿತ್ತು. ಈ ಜಾಥಾದಿಂದ ಪ್ರಸನ್ನರವರ ಅನುಭವಕ್ಕೆ

ಬಂದದ್ದು ಏನೆಂದರೆ 'ಕೇಂದ್ರಿಕೃತ ಮತ್ತು ವಾಣಿಜ್ಯಪರ ಸಂಸ್ಕೃತಿಯೇ ನಮ್ಮ ಬಹುದೊಡ್ಡ ಶತ್ರು'. ಇಂದು ಜಾತಿ, ಮತ, ಭಾಷೆಗಳ ಹೆಸರಿನಲ್ಲಿ ಜನರ ಮಧ್ಯೆ ಒಡಕುಂಟಾಗಿದೆ ಎಂಬ ಸತ್ಯವನ್ನು ಕಂಡುಕೊಂಡರು.

ಇನ್ನು ಇವರು ನಿರ್ದೇಶಿಸದ ನಾಟಕಗಳಿಗೆ ಬಂದರೆ ಸುಮಾರು ನಲವತ್ತಕ್ಕಿಂತಲೂ ಹೆಚ್ಚು ನಾಟಕಗಳಿವೆ. ತಾವು ನಿರ್ದೇಶಿಸಿದ ನಾಟಕದಲ್ಲಿ ತುಘಲಕ್, ಹುಲಿಯ ನೆರಳು, ಒಂದು ಲೋಕದ ಕಥೆ, ದಂಗೆಯ ಮುಂಚಿನದಿನಗಳು, ತದ್ರೂಪಿ, ಘ್ಯೂಜಿಯಾಮ, ಗಾಂಧಿ, ಉತ್ತರ ರಾಮಚರಿತೆಗಳನ್ನು ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಾರೆ ಎಂದು ಡಾ॥ ಹೇಮಾ ಪಟ್ಟಣ ಶೆಟ್ಟಿ ಹೇಳುತ್ತಾರೆ. ಹಾಗೆಯೆ ಇವರು ಕೆಲವು ಸಾಕ್ಷ್ಯ ಚಿತ್ರಗಳನ್ನು ಚಿತ್ರಿಸಿದ್ದಾರೆ. ಅವುಗಳಲ್ಲಿ ಡಾ॥ ಲೋಹಿಯಾ, ಡಾ॥ ವಿ.ಕೆ.ಗೋಕಾಕ್ ಮತ್ತು ಭಾರತೇಂದ್ರ ಹರಿಶ್ಚಂದ್ರರವರ ಬಗೆಗಿನ ಚಿತ್ರಗಳು ಪ್ರಮುಖವಾದವು. ಇವರು ಮಾಗಿ, ದೇವದಾರು ಎಂಬ ಎರಡು ಕವನ ಸಂಕಲನಗಳನ್ನು ಹೊರ ತಂದಿದ್ದಾರೆ. ನೌಟಂಕಿ, ಸ್ವಯಂವರ ಎಂಬ ಎರಡು ಕಾದಂಬರಿಗಳನ್ನು ಸಹಾ ರಚಿಸಿದ್ದಾರೆ. ಇಷ್ಟೇ ಅಲ್ಲದೆ ಎರಡು ವಿಮರ್ಶಾ ಕೃತಿಗಳಾದ – ದೇಸಿಜೀವನ ಪದ್ದತಿ, ಯಂತ್ರಗಳನ್ನು ಕಳಚೋಣ ಬನ್ನಿ ಕೃತಿಗಳನ್ನು ರಚಿಸಿದ್ದಾರೆ.

ಇವರು ಎಂಬತ್ತರ ದಶಕದಲ್ಲಿ ಕುಶಲೆ ಎಂಬ ಮರ ಕೈಗಾರಿಕೆ ಘಟಕ ಆರಂಭಿಸಿದರು. 1992ರಲ್ಲಿ ಕವಿ ಕಾವ್ಯ ಟ್ರಸ್ಟನ್ನು ಹೆಗೋಡಿನಲ್ಲಿ ಸ್ಥಾಪಿಸಿದರು. ದೇಸಿ ಹೆಸರೇ ಸೂಚಿಸುವಂತೆ, ಸ್ವದೇಶಿ ಆಂದೋಲನದಲ್ಲಿ ತೊಡಗಿದ್ದ ಗ್ರಾಮಾಂತರ ಪ್ರದೇಶದ ಕುಶಲಕರ್ಮಿಗಳಿಗೆ ನಗರದ ತಂತ್ರಜ್ಞಾನ ನೀಡುವ ಮಧ್ಯವರ್ತಿಯಾಗಿ ಇದು ಕೆಲಸ ಮಾಡುತ್ತಿದೆ. ಇವರು 1981–83ರಲ್ಲಿ ಯುವ ನಾಟಕಕಾರ ಫೆಲೋಷಿಪ್ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು 2000ದಲ್ಲಿ ನಿರ್ದೇಶನಕ್ಕೆ ಮತ್ತೊಮ್ಮೆ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕೆಲವು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಸಹ ಪಡೆದಿರುತ್ತಾರೆ.

ನಾನು ನನ್ನ ಸಂಶೋಧನ ಅಧ್ಯಯನಕ್ಕೆ ಅವರ ಯಂತ್ರಗಳ ಕಳಚೋಣ ಬನ್ನಿ ಕೃತಿಯನ್ನು ಆಯ್ಕೆ ಮಾಡಿಕೊಂಡಿದ್ದು, ಅವರಿಗಿರುವ ಕಲಾಪ್ರತಿಭೆಯೆಂತೆಯೇ ಏಕಕಾಲಕ್ಕೆ, ವೈಜ್ಞಾನಿಕ, ವೈಚಾರಿಕ ದೃಷ್ಟಿಕೋನದ ಅರಿವು ಇದೆ ಎಂದು ತಿಳಿದುಕೊಳ್ಳುವ ಪ್ರಯತ್ನ ಈ ಪ್ರಬಂಧದಲ್ಲಿ ಮಾಡಿರುತ್ತೇನೆ.

ಅಧ್ಯಾಯ - 2

ಬಂಡವಾಳಶಾಹಿ ವ್ಯವಸ್ಥೆಯಿಂದ ಉಂಟಾಗುವ ಸಮಾಜಿಕ - ಧಾರ್ಮಿಕ ಅಧಃಪತನ

ಬಂಡವಾಳ ಶಾಹಿ ವ್ಯವಸ್ಥೆಯು ಮನುಷ್ಯ-ಮನುಷ್ಯನ ನಡುವೆ ಇದ್ದ ಮಾನವೀಯ ಪ್ರಜ್ಞೆ, ಸಾಮಾಜಿಕ ಸಾಮರಸ್ಯತೆ, ವೈಚಾರಿಕ ಅರಿವನ್ನು ಕಡಿತಗೊಳಿಸುತ್ತಿದ್ದು, ಹಣ ಉಳ್ಳವರ ಸೊತ್ತಾಗಿ ಶ್ರೀಮಂತರ, ಉದ್ದಿಮೆ ಪತಿಗಳ ಕೈ ಸೇರುತ್ತಿದ್ದು ಬಡವರು-ಬಡವರಾಗಿಯೇ ಉಳಿಯುತ್ತಿದ್ದಾರೆ. ಮತ್ತೊಂದೆಡೆ ದೇವರು ಮತ್ತು ಧಾರ್ಮಿಕ ಚಿಂತನೆಗಳನ್ನು ಮನುಷ್ಯ ತಪ್ಪು ತಪ್ಪಾಗಿ ಅರ್ಥೈಸುತ್ತಿದ್ದು, ಮಾನವೀಯ ಮೌಲ್ಯಗಳು ಕುಸಿಯತೊಡಗಿವೆ. ಈ ರೀತಿಯ ಪರಿವರ್ತನೆಗೆ ಯಂತ್ರ ನಾಗರೀಕತೆಯೇ ಮೂಲ ಕಾರಣ ಎಂದು ತಿಳಿದುಕೊಳ್ಳಬಹುದಾಗಿದೆ.

ಯಂತ್ರನಾಗರೀಕತೆ ಮತ್ತು ಉತ್ಪಾದನಾ ವಿಧಾನ ಗಟ್ಟಿಗೊಳ್ಳುತ್ತಾ ಹೋದಂತೆ ಗ್ರಾಮೀಣ ಬಡವರು ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ಕೆಲಸಕ್ಕೆ ಸೇರತೊಡಗಿದಂತೆ, ಮಾರುಕಟ್ಟೆಯು ಪುನರ್‌ರೂಪಿತವಾದಂತೆ, ಕಾಡುಗಳು ಮರೆಯಾದಂತೆ, ನಗರಗಳು ಬೆಳೆದಂತೆ, ಯಂತ್ರನಾಗರೀಕತೆಯು ನಮ್ಮ ಜೀವನಶೈಲಿಯಮೇಲೆ ಪರಿಣಾಮ ಬೀರತೊಡಗಿದೆ. ಅಲ್ಲಿಯವರೆಗಿನ ನಮ್ಮ ದೇಶದ ಸ್ಥಿತಿ ಹೇಗಿತ್ತು.? ಯಾಂತ್ರೀಕರಣವೇ ಅಭಿವೃದ್ಧಿಯ ಮೂಲ ಮಾನ ದಂಡವೆ? ಹಾಗಾದರೆ ದೇಶದ ಅಭಿವೃದ್ಧಿಯಲ್ಲಿ ಬಡತನ, ಗ್ರಾಮೀಣ ಕೃಷಿ ಪದ್ದತಿಯ, ನಿರುದ್ಯೋಗದ ಶಿಕ್ಷಣದ ಪಾತ್ರವಿದೆಯೆ? ಎಂಬ ವಿಚಾರವನ್ನು ವಿವೇಚಿಸಲು ಯಂತ್ರ ನಾಗರೀಕತೆಯು ಹುಟ್ಟು ಹಾಕಿದ ವ್ಯವಸ್ಥೆಯನ್ನು ತಿಳಿಯುವುದು ಸೂಕ್ತ.

ಯಾವಾಗ ಸ್ವಯಂಚಾಲಿತ ಯಂತ್ರಗಳು ಹುಟ್ಟಿದವೋ ಅಂದೇ ಬಂಡವಾಳಶಾಹಿ ವ್ಯವಸ್ಥೆ ಹುಟ್ಟಿತು. ಇವೆರಡು ಪರಸ್ಪರ ಪೋಷಿಸಿಕೊಂಡು ಬೆಳೆದವು. ಯಂತ್ರಗಳಿಗೆ ಕಾರ್ಖಾನೆ ಎಂಬ ನೆಲೆ ಬೇಕಿತ್ತು. ಉಗಿಯಶಕ್ತಿ ಬೇಕಿತ್ತು. ಉಗಿ ತಯಾರಿಸಲಿಕ್ಕೆ ಕಲ್ಲಿದ್ದಲ ಗಣಿಗಳು ಬೇಕಿದ್ದುವು. ಗಣಿಗಳಲ್ಲಿ ಕೆಲಸ ಮಾಡಲು ಅಗ್ಗದ ಕೂಲಿಗಳು ಬೇಕಿದ್ದರು... ಎಲ್ಲಕ್ಕಿಂತ ಮಿಗಿಲಾಗಿ ಬಂಡವಾಳ ಬೇಕಿತ್ತು.[1] ಕಳೆದೆರಡು ಶತಮಾನಗಳಲ್ಲಿ ಯಂತ್ರನಾಗರೀಕತೆ ಬಂದ ಪ್ರತಿರೋದವು ಸಣ್ಣ ಪ್ರಮಾಣದ್ದೇನಲ್ಲ. ಹಲವು ಸೈದ್ಧಾಂತಿಕ ನೆಲೆಗಳನ್ನು ಯಂತ್ರನಾಗರೀಕತೆಯನ್ನು ವಿರೋಧಿಸಲಾಗಿದೆ. ಯಂತ್ರಗಳಿಗೆ ಪ್ರತಿಯಾಗಿ ದುಡಿಯುವ ಕೈಗಳನ್ನು ಮುಂದುಮಾಡಲಾಗಿದೆ. ಬಂಡವಾಳಶಾಹಿ ಸಿದ್ಧಾಂತಕ್ಕೆ ಪ್ರತಿಯಾಗಿ ಸಮಾಜವಾದಿ ಸಿದ್ಧಾಂತವನ್ನು ಮುಂದು ಮಾಡಲಾಗಿದೆ. ನಗರಗಳ ಪ್ರತಿಯಾಗಿ ಗ್ರಾಮಗಳನ್ನು ಮುಂದು ಮಾಡಲಾಗಿದೆ ಎಂದು ಪ್ರಸನ್ನರವರು ಹೇಳುತ್ತಾರೆ ಈ ನಿಟ್ಟಿನಲ್ಲಿ ಸಮಾಜವಾದದಲ್ಲಿರುವ ಸಮಸ್ಯೆಗಳನ್ನು ಗುರುತಿಸಬೇಕಾದುದು ಅವಶ್ಯಕವಾಗಿದೆ.[2]

ಇದರ ವಿರುದ್ದವಾಗಿ ಇನ್ನೊಂದು ವಾದವನ್ನು ನಾವಿಲ್ಲಿ ಗಮನಿಸಬೇಕು. ಆ ವಾದದ ಪ್ರಕಾರ ಎಲ್ಲಾ ಕಾಲಗಳಲ್ಲೂ ಆಳುತ್ತಿರುವ ಪ್ರಭುತ್ವವು ಕೆಲವರಿಗೆ ಮಾತ್ರ

ಆಧುನಿಕತೆಯ ಲಾಭಗಳು ಲಭ್ಯವಾಗುವಂತೆ ಮಾಡುತ್ತಿತ್ತು. ಆದ್ದರಿಂದ ಆಧುನಿಕತೆಯು ಪ್ರಭುತ್ವಕ್ಕೆ ಬೇಕಿರುವವರಿಗೆ ಮಾತ್ರ ದಕ್ಕುತ್ತಿತ್ತು. ಅದರ ಪ್ರಯೋಜನ ಕೆಲವರಿಗೆ ಮಾತ್ರ ಮೀಸಲಾಗಿತ್ತು. ಅದರೆ ಇಂದು ಜಾಗತೀಕರಣವು 'ನವ-ಆಧುನೀಕತೆ'ಯೊಂದನ್ನು ಸೃಷ್ಟಿಸಿ ಆ ಮೂಲಕ ಎಲ್ಲಾ ಸಮುದಾಯಗಳಿಗೂ ಆಧುನೀಕತೆಯ ಎಲ್ಲಾ ಅಂಶಗಳನ್ನು ಕೊಟ್ಟುಬಿಡುತ್ತದೆ.[3] ಅಂದರೆ ಪ್ರಭುತ್ವ ಮತ್ತು ಆಧುನೀಕತೆಗಳ ನಡುವೆ ಹಿಂದಿದ್ದ ಸಂಬಂಧವನ್ನು ಜಾಗತೀಕರಣವು ಕಡಿದು ಹಾಕಿದೆ ಎಂದು ಈ ವಾದದ ಸೂಚನೆ ಆದರೆ ಇದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಇತಿಹಾಸ ಗಮನಿಸಿದಾಗ, ಆರಂಭದಲ್ಲಿ ಅತ್ಯಂತ ಆದರದಿಂದ ಬರಮಾಡಿಕೊಂಡ ಮಾನವ ಮೊದಮೊದಲು ಅತ್ಯಂತ ಉತ್ಸಾಹ ಮತ್ತು ಚೈತನ್ಯಶೀಲತೆಯಿಂದ ಕಾರ್ಯನಿರ್ವಹಿಸುತ್ತಿದ್ದ ಆದರೆ ಇಂದು? ಕಾಲ ಬದಲಾಗಿದೆ ಅಂತಯೇ ಪರಿಸ್ಥಿತಿಯಲ್ಲಿಯೂ ಬದಲಾವಣೆ ತರುವುದು ಅನಿವಾರ್ಯವಾಗಿಬಿಟ್ಟಿದೆ. ಆದರೆ ಸದ್ಯದ ಸ್ಥಿತಿಯಲ್ಲಿ ಯಾವ ರೀತಿಯ ಪರಿವರ್ತನೆ ತರಬೇಕು ಎಂಬುದೇ ಸಮಸ್ಯೆಯಾಗಿಬಿಟ್ಟಿದೆ. ಹಾಗಾದರೆ ಬದಲಾವಣೆ ಅನಿವಾರ್ಯವೇ? ಹೌದು! ಮನುಷ್ಯ ಯಂತ್ರಗಳ ಬಳಕೆ ಮಾಡುತ್ತಾ ಮಾಡುತ್ತ, ಸ್ವಾರ್ಥಿಯೂ, ಲೋಭಿಯೂ, ಆಲಸ್ಯವುಳ್ಳವನೂ, ಅಹಂಕಾರಿಯೂ ಆಗಿ ಮೆರೆಯುತ್ತಿದ್ದಾನೆ ಎಂಬುದು ಪ್ರಸನ್ನರವರ ನಿಲುವು. ಇದು ನಂಬಲೇಬೇಕಾದ ಕಟು ಸತ್ಯವೂ ಹೌದು. ಪರಿಸ್ಥಿತಿ ಬದಲಾಯಿಸಲು ಹೊರಟ ಮನುಷ್ಯನೇ ಬದಲಾದದ್ದು ನಮಗೆ ಗೋಚರಿಸುತ್ತದೆ.

ಮೊದಮೊದಲು ಪಟ್ಟಣ, ನಗರಗಳತ್ತ ವಲಸೆ ಬಂದ ಜನರು ಕೂಲಿ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಬಂಡವಾಳಶಾಹಿಗಳು ಲಾಭದಾಶೆಗೆ ಈ ವರ್ಗದ ಜನರನ್ನು ಬಳಸಿಕೊಳ್ಳುತ್ತಿದ್ದಾರೆ ಎಂಬುದು ನಮಗೆಲ್ಲರಿಗೆ ತಿಳಿದಿರುವ ಸಂಗತಿ. ಆದರೆ ಇವತ್ತು ಪರಿಸ್ಥಿತಿ ತಲೆಕೆಳಗಾಗಿದೆ. ಇದಕ್ಕೆ ಮೂಲಕಾರಣ ಲೋಹ ಪುರುಷನ ಉಗಮ. ಎಲ್ಲ ಸಂಸ್ಕೃತಿಗಳಿಗೂ ಒಬ್ಬ ಆದರ್ಶ ಪುರುಷನಿರುತ್ತಾನೆ. ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರನಿದ್ದಂತೆ, ದ್ವಾಪರಾಯುಗದಲ್ಲಿ ಶ್ರೀ ಕೃಷ್ಣನಿದ್ದಂತೆ, ಮಧ್ಯಕಾಲದ, ಮಧ್ಯ ಏಷಿಯಾದೇಶದ, ಪ್ರವಾದಿ ಮಹಮದ್ ಹಾಗೂ ಏಸುಕ್ರಿಸ್ತ ಜನಿಸಿದಂತೆ ಆಧುನಿಕ ಯುಗದಲ್ಲಿ ಲೋಹ ಪುರುಷನ ಜನನವಾಗಿದ್ದು, ಮನುಷ್ಯ ಮಾಡುವ ಬಹುತೇಕ ಕಾರ್ಯಗಳನ್ನು ಈ ಲೋಹ ಪುರುಷ ನಿರ್ವಹಿಸುತ್ತಿದ್ದು, ಬಂಡವಾಳಶಾಹಿ ವರ್ಗದ ಜನರು ಇದರ ಉಪಯೋಗ ಪಡೆಯುತ್ತಿದ್ದಾರೆ. ಉಳಿದ ವರ್ಗದ ಜನರು ಕಡೆಗಣಿಸಲ್ಪಡುತ್ತಿದ್ದಾರೆ.

ಮೂಲತಃ ಕಾರಣ ಇಷ್ಟೇ. ಬಂಡವಾಳಶಾಹಿ ಅರ್ಥದಲ್ಲಿ ಲೋಹ ಪುರುಷ ಒಬ್ಬ ಆದರ್ಶಕಾರ್ಮಿಕ; ಪ್ರಶ್ನೆಮಾಡದೆ, ಸೋಮಾರಿಯಾಗದೆ, ಸಂಬಳ ಏರಿಸೆಂದು ಜಗಳವಾಡದೆ, ಮುಷ್ಕರ ಹೂಡದೆ... ತರಲೆ, ಕಿರಿಕಿರಿ, ತಲೆನೋವುಗಳನ್ನು ತನ್ನ ಯಜಮಾನನಿಗೆ ತಂದಿಡದೆ, ಪೂರೈಸಬಲ್ಲ ಕಾರ್ಮಿಕ. ಇವನು ತನ್ನ ಯಜಮಾನನು ಪ್ರೋಗ್ರಾಮ್ ಮಾಡಿಟ್ಟಷ್ಟನ್ನು ಮಾತ್ರ ಮತ್ತೆ ಮತ್ತೆ ಯೋಚಿಸುತ್ತಾನೆ.[4] ಹಾಗಾಗಿ ಬಹುತೇಕ ಜನರು ಮಾಡುವ ಕೆಲಸ ಈ ಯಂತ್ರ ಮಾಡುತ್ತಿರುವುದರಿಂದ ಉಳಿದ ವರ್ಗದ ಜನರಿಗೆ ಕೆಲಸವಿಲ್ಲದಂತಾಗುವ ಪರಿಸ್ಥಿತಿ ಬರಬಹುದೆಂಬ ಆತಂಕ

ಭಯವನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಬಂಡವಾಳಶಾಹಿ ಪ್ರಭುತ್ವವು ಹೇಗೆ ವ್ಯವಸ್ಥೆಯನ್ನು ಬದಲಾವಣೆ ತರುವಲ್ಲಿ ಯಶಸ್ವಿಯಾಗಿದೆ ಎಂಬುದನ್ನು ಕಾಣಬಹುದು. ಬಹಳ ಹಿಂದೆಯೇ 'ಕಾರ್ಲ್‌ಮಾರ್ಕ್ಸ್'ನ ಬರವಣಿಗೆಯಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಚಿತ್ರಣವನ್ನು ಕಾಣಬಹುದು. ಆತ ತನ್ನ 'ದಾಸ್‌ಕ್ಯಾಪಿಟಲ್' ಎಂಬ ಕೃತಿಯಲ್ಲಿ (commodity fitishisam) ಎಂಬ ಪದ ಬಳಸುತ್ತಾನೆ, ಇದು ಕಾವ್ಯಭಾಷೆಗೆ ಸಲ್ಲುವ ಪದ. ಬೇಕೆಂತಲೇ ಈ ಪದ ಬಳಸಿದ. ಈ ಪದದ ಅರ್ಥವೇನೆಂದರೆ ಶ್ರೀ ಶ್ರೀ ಸರಕು. ಪರಮಪೂಜ್ಯ ಸರಕು ಎಂದು ಅನುವಾದಿಸಿದರೆ, ಮಾರ್ಕ್ಸ್‌ನ ಕಟಕಿಯು ನಮಗೆ ಅರ್ಥವಾದೀತು. ಏನಿದು ಪರಮ ಪೂಜ್ಯ ಸರುಕೆಂದರೆ? ಬಂಡವಾಳಶಾಹಿ ಆರ್ಥಿಕ ಪ್ರಮೇಯವು ಏನು ಹೇಳುತ್ತದೆ? ನೋಡೋಣವಂತೆ ಎಲ್ಲರೀತಿಯ ಉತ್ಪಾದನೆ (production)ಯೂ ಸರಕೊಂದನ್ನು ಸೃಷ್ಟಿಸುತ್ತದೆ.[5] ಎಲ್ಲರೀತಿಯ ಸರಕಿನ ಮೌಲ್ಯ (value)ವನ್ನು ಮಾರುಕಟ್ಟೆಯು ಬೆಲೆಯ (price)ರೂಪದಲ್ಲಿ ನಿರ್ಧರಿಸುತ್ತದೆ. ಮಾರುಕಟ್ಟೆ ನಿರ್ಧರಿಸುವ ಬೆಲೆಯೇ ಸರಕಿನ ಸೂಕ್ತ ಮೌಲ್ಯವಾಗಿರುತ್ತದೆ. ಬಂಡವಾಳಶಾಹಿ ಆರ್ಥಿಕ ಪ್ರಮೇಯವು ಇಲ್ಲಿಗೇ ಮುಗಿಯುದಿಲ್ಲ. ಪ್ರತಿಯೊಬ್ಬ ಉದ್ಯಮಿಯೂ, ತನ್ನ ಉದ್ದಿಮೆಯಿಂದ ಅತಿ ಹೆಚ್ಚು ಲಾಭಗಳಿಸಲು ಬಯಸುವುದು ಬಂಡವಾಳಶಾಹಿ ಪದ್ದತಿಯ ಪ್ರಕಾರ ಸರಿಯಾದ ನಡವಳಿಕೆಯೇ ಹೌದಾದ್ದರಿಂದ, ಸಮಾಜದ ಹಿತ ಕಾಪಾಡುವವರಾರು ಎಂಬ ಪ್ರಶ್ನೆ ಏಳುತ್ತದೆ. ಆ ಪ್ರಶ್ನೆಗೆ ಉತ್ತರ ರೂಪದಲ್ಲಿ ಆಡಮ್‌ಸ್ಮಿತ್ ಮಾರುಕಟ್ಟೆಯ ಪ್ರಸ್ತಾಪಮಾಡುತ್ತಾನೆ. ಮಾರುಕಟ್ಟೆಯನ್ನು ಮುಕ್ತಗೊಳಿಸುವುದರಿಂದ ಉಂಟಾಗುವ ಸ್ಪರ್ಧೆಯು ಬೆಲೆ, ನೈತಿಕತೆ, ಸಮಾಜ, ಸಂಸ್ಕೃತಿ... ಎಲ್ಲವನ್ನೂ ನಿಯಂತ್ರಣಕ್ಕೆ ತರುತ್ತದೆ. ಹಾಗೂ ಬೆಲೆಯ ನಿಯಂತ್ರಣವೇ ಸಮಾಜದ ಹಿತವನ್ನೂ ಕಾಪಾಡುತ್ತದೆ ಎಂದು ಅವನು ಹೇಳುತ್ತಾನೆ. ಇಲ್ಲಿ ಎಲ್ಲವನ್ನು ಮಾರುಕಟ್ಟೆಗೆ ಒಳಪಡಿಸಬೇಕು ಎಂಬ ನಿಲುವನ್ನು ಕಾಣಬಹುದಾಗಿದೆ. ಮಾರುಕಟ್ಟೆ ಎಲ್ಲವನ್ನು ನಿಯಂತ್ರಿಸುವ ಶಕ್ತಿ ಸಾಮರ್ಥ್ಯ ಪಡೆದುಕೊಳ್ಳುತ್ತಿದೆ ಅಥವಾ ಪಡೆದುಕೊಂಡಿದೆ ಎಂದರೂ ಅತಿಶಯೋಕ್ತಿಯಾಗಲಾರದು.

ಬಂಡವಾಳಶಾಹಿ ವ್ಯವಸ್ಥೆ ಜಾಣಕುರುಡು :

ಬಂಡವಾಳಶಾಹಿ ಸಿದ್ಧಾಂತದಲ್ಲಿ ಕೆಲವು ಜಾಣಕುರುಡುಗಳಿವೆ, ಮಾರುಕಟ್ಟೆ ಬೆಲೆಯೇ ಉತ್ಪಾದನೆಯ ಮೌಲ್ಯ ಎಂದು ತಿಳಿಯುವುದು ಮೊದಲ ಕುರುಡು. ಮಾರುಕಟ್ಟೆಯನ್ನು ಸ್ಪರ್ಧೆಗೆ ತೆರವುಗೊಳಿಸುವುದರಿಂದ ಸಮಾಜದ ಹಿತವು ರಕ್ಷಣೆಯಾಗುತ್ತದೆ ಎಂದು ತಿಳಿಯುವುದು ಎರಡನೆಯ ಕುರುಡು. ಸಮಾಜದ ಎಲ್ಲಾ ಉತ್ಪಾದಕ ಚಟುವಟಿಕೆಗಳನ್ನು – ಟೂತ್‌ಪೇಸ್ಟ್ ತಯಾರಿಕೆಯಿಂದ ಹಿಡಿದು ಶಿಕ್ಷಣದವರೆಗೆ, ರೈತಬೆಳೆದ ಆಹಾರಧಾನ್ಯದಿಂದ ಹಿಡಿದು ಸುಬ್ಬಲಕ್ಷ್ಮಿಯ ಸಂಗೀತದವರೇಗೆ ಎಲ್ಲಾ ರೀತಿಯ ಉತ್ಪಾದನೆಯನ್ನೂ ಸರಕಾಗಿ ಪರಿವರ್ತಿಸಿ ಮಾರುಕಟ್ಟೆಯಲ್ಲಿ ತಂದು ಗುಡ್ಡೆಹಾಕಿ ಎಲ್ಲಾ ಮೌಲ್ಯಗಳನ್ನು ಮಾರುಕಟ್ಟೆನಿರ್ಧರಿಸಲಿ ಎಂದು ವಾದ ಮಾಡುತ್ತಿರುವುದರ ಹಿಂದಿರುವುದು ಬಂಡವಾಳಶಾಹಿಯ ಸ್ವಹಿತವೇ ಹೊರತು ಸಮಾಜದ ಒಟ್ಟು ಹಿತವಲ್ಲ.

ಇವತ್ತು ಬಂಡವಾಳಶಾಹಿ ಕನಸು ನನಸಾಗಿದೆ. ಎಲ್ಲವೂ ಸರಕಾಗಿ ಪರಿವರ್ತಿತವಾಗಿದೆ. ರೈತ ಬೆಳೆದ ಹೂವು, ಸುಬ್ಬಲಕ್ಷ್ಮಿಯ ಸಂಗೀತ, ಧಾನ್ಯ, ಊಟ

ಉಪಚಾರ, ಪ್ರೇಮ, ಆಸ್ತೆ, ಅಕ್ಕರೆ, ಆರೋಗ್ಯ, ಶಿಕ್ಷಣ, ಮಾನವ ಸಂಬಂಧ..... ಸರಕಾಗಿ ಪರಿವರ್ತಿತವಾಗಿದೆ. ಸಂಗೀತವು ಮಾರಾಟಮಾಡಬಲ್ಲ ಸಿ.ಡಿ.ಗಳಾಗಿದೆ. ಆಸ್ತೆಯಾಸೆ ನಂಬುಗೆಯು ಆಸ್ಥಾ ಎಂಬ ಟಿ.ವಿ. ಚಾನಲ್ಲಾಗಿದೆ. ಅರೋಗ್ಯವು ಆಸ್ಪತ್ರೆಗಳೆಂಬ ಉದ್ಯಮೆಯಾಗಿದೆ. ಊಟವೆಂಬುದು ಹೊಟಲಿನಲ್ಲಿ ಸಿಗುವ ಸರಕಾಗಿದೆ. ಶಿಕ್ಷಣವು ಡೊನೇಷನ್ ಮೂಲಕ ಪಡೆಯಬಲ್ಲ ಸರ್ಟಿಫಿಕೇಟ್ ಆಗಿದೆ.[6] ಇಲ್ಲಿ ಪ್ರತಿಯೊಂದನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಬಂಡವಾಳಶಾಹಿ ವ್ಯವಸ್ಥೆಯು ಹವಣಿಸುತ್ತದೆ ಎಂಬುದು ತಿಳಿದು ಬರುತ್ತದೆ.

ಈ ಮಾತಿಗೆ ಪೂರಕವಾಗಿ ಮಾರುಕಟ್ಟೆನಿಯಂತ್ರಣವು ಒಂದು ವರ್ಗದ ಜನರ ಕೈಯಲ್ಲಿದ್ದು, ತಳಮಟ್ಟದ ಮಾರುಕಟ್ಟೆಗೆ ಲಾಭಗಳಿಕೆಯ ಸಾಮರ್ಥ್ಯ ಕಡಮೆಯಾಗುತ್ತಿದೆ. ಮಾರುಕಟ್ಟೆ ವ್ಯವಸ್ಥೆಯು ಮೇಲ್ಮುಖವಾಗಿ ಚಲಿಸುತ್ತಾ ರಾಜ್ಯ, ರಾಷ್ಟ್ರ ಜಾಗತಿಕ ಮಾರುಕಟ್ಟೆಗೆ ಬಂದಾಗ ಲಾಭಗಳಿಸುವ ಸಾಮರ್ಥ್ಯ ರಾಷ್ಟ್ರೀಯವಾಗಿ ಹೆಚ್ಚುತ್ತದೆ. ಹಾಗಾಗಿ ಮಾರುಕಟ್ಟೆ ಶಕ್ತಿಗಳು ಯಾವಾಗಲೂ ರಾಷ್ಟ್ರೀಯ ಸರಕಾರಗಳ ಜೊತೆ ವ್ಯವಹರಿಸಲು ಇಚ್ಛಿಸುತ್ತವೆ. ಈ ಜಾಗತಿಕಶಕ್ತಿಗಳಿಗೆ ತಳಮಟ್ಟದ ರಾಜಕೀಯ ವ್ಯವಸ್ಥೆಯಾದ ಗ್ರಾಮ ಪಂಚಾಯಿತಿಗಳ ಜೊತೆ ಸಂಧಾನಗಳನ್ನು ಮಾಡುವ ಶಕ್ತಿ ಹಾಗೂ ನೆಲೆಗಳೇ ಇರುವುದಿಲ್ಲ ಹಾಗಾಗಿಯೇ ಜಾಗತಿಕ ವ್ಯಾಪರೀವ್ಯವಸ್ಥೆ, ಜನರ ಸಹಭಾಗಿತ್ವದ ಪ್ರಜಾಪ್ರಭುತ್ವದ ಮಾದರಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿರುತ್ತದೆ ಮತ್ತು ಅವು ರಾಷ್ಟ್ರೀಯ ಸರಕಾರಗಳನ್ನೇ ನಿಯಂತ್ರಿಸಿ ತಮ್ಮ ವ್ಯಾಪಾರಕ್ಕೆ ಅನುಕೂಲವಾಗುವಂತೆ ಮಣಿಸಲು ಪ್ರಯತ್ನಿಸುತ್ತಿರುತ್ತದೆ. ವಿಶ್ವವ್ಯಾಪಾರೀ ಒಪ್ಪಂದ ಈ ಪ್ರಯತ್ನದ ಒಂದು ಅಭಿವ್ಯಕ್ತಿಯೆಷ್ಟೇ. ಕೈಗಾರಿಕಾ ಗರ್ಭದಲ್ಲಿ ಅಡಗಿರುವ ಕೇಂದ್ರೀಕರಣದ ಸೆಳತವನ್ನು ಸೂಕ್ಷ್ಮವಾಗಿ ಗಮನಿಸಿಯೇ ಗಾಂಧೀಜಿ, ಗ್ರಾಮ ಸ್ವರಾಜ್ಯದ ವಿಕೇಂದ್ರಿಕರಣದ ಸೆಳೆತವನ್ನು ಸೂಕ್ಷ್ಮವಾಗಿ ಗಮಸಿಯೇ ಬಯಲತತ್ವಕ್ಕೆ ಅಷ್ಟೊಂದು ಮಹತ್ವಕೊಟ್ಟಿರುವುದು ಸ್ವಯಂಸ್ಪಷ್ಟ ಗ್ರಾಮೀಣ ವರ್ಗದ ಜನರನ್ನು ನಿರ್ಲಕ್ಷಿಸುತ್ತಿರುವುದರಿಂದಲೇ ಉದ್ಯಮಿಗಳು ಮತ್ತಷ್ಟು ಹಣಗಳಿಸಲು ಕಟ್ಟಿಕೊಂಡ ವ್ಯವಸ್ಥೆ ಇದು ಎಂಬುದು ಇಲ್ಲಿ ಸ್ವಯಂ ಸ್ಪಷ್ಟವಾಗತೊಡಗಿದೆ.

ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಗ್ರಾಮೀಣ ಬಡಜನರನ್ನು ಮೇಲೆ ತರುವ ಸಲುವಾಗಿ ಹೊಸ ರೀತಿಯ ಯೋಜನೆ ಅಥವಾ ಸಿದ್ಧಾಂತವನ್ನು ರೂಪಿಸುವುದು ಇಂದು ಅನಿವಾರ್ಯವಾಗಿಬಿಟ್ಟಿದೆ. ಯಾವ ಸಿದ್ಧಾಂತ ಬಳಸಿದರೆ ದೇಶದ ಅಭಿವೃದ್ಧಿಯಾಗುತ್ತದೆ ಎಂಬುದು ಸಮಸ್ಯೆಯಾಗಿದೆ. ಈಗಿರುವ ಅಭಿವೃದ್ಧಿ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಬೇಕಾಗಿದೆ. 'ಮಜೀದ್ ರೆಹನೆಮಾ' (ಕನ್ನಡಕ್ಕೆ ಜಿ.ರಾಜಶೇಖರ) ಹೇಳುವ ಪ್ರಕಾರ 'ಅಭಿವೃದ್ಧಿ' ಅಥವಾ 'ಡೆವೆಲಪ್‌ಮೆಂಟ್' ಎಂಬ ಶಬ್ದವು ಅಮೀಬಾದಂತೆ ಬಣ್ಣ, ಆಕಾರಗಳನ್ನು ಬದಲಾಯಿಸಿಕೊಳ್ಳಬಲ್ಲ ಜಲಚರ ಅಣುಜೀವಿಯಂತೆ ಸಮಯ ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ಅರ್ಥಗಳನ್ನು ಧರಿಸಬಲ್ಲದಾಗಿದೆ. ಪರಿಸ್ಥಿತಿಗೆ ಅನುಗುಣವಾಗಿ ಅದನ್ನು ಬಳಸಿಕೊಳ್ಳುವುದು ಸೂಕ್ತ. ಈ ಸಂದರ್ಭದಲ್ಲಿ ಆಧುನಿಕ ಅರ್ಥಶಾಸ್ತ್ರ ಮತ್ತು ರಾಷ್ಟ್ರೀಯ, ಅಂತರಾಷ್ಟ್ರೀಯ ಸಂಸ್ಥೆಯ ಹೊಸ ಪರಿಭಾಷೆಯಲ್ಲಿ ಬೆಳವಣಿಗೆ ಮತ್ತು ಪರಿವರ್ತನೆಗಳನ್ನು ಸೂಚಿಸಲು, ಅದರಲ್ಲೂ ವಿಶೇಷವಾಗಿ ಆಧುನೀಕರಣದ

ಯತ್ನಗಳು, ಬಡತನ ನಿರ್ಮೂಲನ ಹಾಗೂ ಆರ್ಥಿಕ ಹಿಂದುಳಿದಿರುವಿಕೆ, ಅಪೌಷ್ಟಿಕತೆ, ನಿರ್ವಸತಿ, ರೋಗರುಜಿನ, ಅನಕ್ಷರತೆ ಮತ್ತು ಸಾಮಾಜಿಕ ಆರ್ಥಿಕ ಅಸಮಾನತೆ ಮುಂತಾದ ಸಮಸ್ಯೆಗಳ ಪರಿಹಾರೋಪಾಯದ ಕುರಿತು ಹೇಳಲು ಡೆವೆಲಪ್‌ಮೆಂಟ್/ಅಭಿವೃದ್ಧಿ ಎಂಬ ಶಬ್ದವನ್ನೇ ಬಳಸಲಾಗುತ್ತಿದೆ.[7]

ಈ ಪ್ರಕಾರವಾಗಿ 'ಆರ್ಥಿಕವಾಗಿ ಹಿಂದುಳಿದಿರುವ'ದೇಶಗಳ ಆಧುನೀಕರಣಗೊಂಡ ಕುಲೀನವರ್ಗಕ್ಕೆ ಸೇರಿದವರು. ತಾವು ರಾಷ್ಟ್ರೀಯ ಅಭಿವೃದ್ಧಿಯ ಪ್ರತಿಪಾದಕರು ಎಂದು ಕರೆಸಿಕೊಳ್ಳಲು ಹೆಮ್ಮೆಪಡುತ್ತಾರೆ. ಅವರು ಪ್ರತಿಪಾದಿಸುವ ಈ ಅಭಿವೃದ್ಧಿ ಯಾರನ್ನು ಉದ್ದೇಶಿಸಲಾಗಿದೆಯೋ, ಆ ಜನಗಳು ವಸಾಹತುಶಾಹಿ ಮತ್ತು ವಿದೇಶಿ ಯಜಮಾನಿಕೆಗೆ 'ಅಭಿವೃದ್ಧಿ'ಯು ಒಂದು ಸವಾಲು ಮತ್ತು ಪರಿಹಾರ ಎಂದು ಮೊದಮೊದಲು ಭಾವಿಸಿದ್ದು ನಿಜ. ಆದರೆ ಈಗ ಆ ಜನಗಳಿಗೆ ಅಭಿವೃದ್ಧಿಯ ಪರಿಕಲ್ಪನೆ ಕುರಿತ ವಿಶ್ವಾಸ ಹೊರಟುಹೋಗಿದೆ. ಈಗ ಅವರಮಟ್ಟಿಗೆ ಅಭಿವೃದ್ಧಿಯು ಒಂದೋ ಅರ್ಥಹೀನ ವಿಚಾರವಾಗಿದೆ ಅಥವಾ ಅದು ಯಜಮಾನಿಕೆಯ ಹೊಸ ಮತ್ತು ಪರಿಷ್ಕೃತ ವಿಧಾನ ಗಳಿಗೂ ಸಮುದಾಯಗಳ ಸ್ವಯಂಶಕ್ತಿ ಮತ್ತು ಅರ್ಥವ್ಯವಸ್ಥೆಯ ಸ್ವಾಯತ್ತತೆಯನ್ನು ನಾಶಪಡಿಸುವುದಕ್ಕೂ ಹಾಗೂ ಜಾಗತಿಕ ಮಾರುಕಟ್ಟೆಯ ಹೊಸ ಧಣಿಗಳಿಗೆ ತಮ್ಮ ದೇಶಗಳನ್ನು ಒತ್ತೆ ಇಡಲು ಬೇಕಾದ ಅಂಗೀಕಾರ, ಅಧಿಕೃತತೆಗಳನ್ನು ಪಡೆಯುವುದಕ್ಕೂ ಮಾಡಿರುವ ಕುಟಿಲೋಪಾಯದಂತೆ ಕಾಣುತ್ತಿದೆ.[8] "ಯಾರಿಗಾಗಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡೆವೋ" ಅವರನ್ನು ಆ ಯೋಜನೆಗಳು ಮುಟ್ಟುತ್ತಿಲ್ಲ ಎಂಬ ಧೋರಣೆ ಇಲ್ಲಿ ವ್ಯಕ್ತವಾಗಿದೆ. ಆದರೂ ಸಹ ಈ ಅಭಿವೃದ್ಧಿ ಎಂಬ ಪರಿಭಾಷೆ ಯಾಕೆ ಈಗಲೂ ಇಷ್ಟು ಮೋಹಕವಾಗಿದೆ?

ಹಾಗೆ ನೋಡಿದರೆ, ಆಧುನಿಕ ಅರ್ಥವ್ಯವಸ್ಥೆ ರೂಪಗೊಳ್ಳುವುದಕ್ಕೆ ಮೊದಲೇ ಇದ್ದ ಎಲ್ಲ ಬಗೆಯ ಸಮಸ್ಯೆ ಮತ್ತು ಸಂಕಷ್ಟಗಳಿಗೂ 'ಹಿಂದುಳಿದಿರುವಿಕೆ' ಎಂಬ ಈ ಹೊಸ ಸಂರಚನೆಯನ್ನು ಸಂವಾದಿಯನ್ನಾಗಿ ಮಾಡುವುದರಲ್ಲಿ ಸಫಲರಾದರು. ಲೋಕಜೀವನದ ಸಮಸ್ತವನ್ನೂ ಕಪ್ಪು-ಬಿಳಿ, ಒಳಿತು-ಕೆಡಕು, ಸುಖ-ದುಃಖ, ನ್ಯಾಯ-ಅನ್ಯಾಯ ಹೀಗೆ ಕೇವಲ ಎರಡುಬಗೆ ಎಂದು ವಿಂಗಡಿಸಿ ನೋಡುವ ಯೋಚನಾ ಕ್ರಮವೇ ಪ್ರಧಾನವಾಗಿರುವ ಆಧುನಿಕ ಜಗತ್ತಿನಲ್ಲಿ ಗತಕಾಲದ ಬಳುವಳಿಯಾಗಿರುವ ಎಲ್ಲಾ ಸಂಕಷ್ಟಗಳಿಗೂ ಅಭಿವೃದ್ಧಿಯು ಪ್ರಶ್ನಾತೀತವಾದ ಏಕೈಕ ಪರಿಹಾರ ಎಂಬ ವಾದವನ್ನು ಮುಂದಿಡಲಾಯಿತು.[9]

ಆದರೆ, ಅಭಿವೃದ್ಧಿಯ ಹೆಸರಿನಲ್ಲಿ ಇಂದು ನಡೆಯುತ್ತಿರುವ ಪೈಪೋಟಿ ಪ್ರೇರಿತ ಆಕ್ರಮಣಕಾರೀ ತನ್ನದೇ ಆದ ಅಭಿವೃದ್ಧಿ ವ್ಯಾಖ್ಯೆಯನ್ನು ಸೃಷ್ಟಿಸಿಕೊಂಡಿದ್ದು ಅದನ್ನು ಅನಿವಾರ್ಯ ಎಂಬಂತೆ ತರ್ಕಬದ್ಧವಾಗಿಯೂ, ವೈಜ್ಞಾನಿಕವಾಗಿಯೂ, ಭಾವರಹಿತವಾಗಿಯೂ ಮುಂದಿಡುತ್ತದೆ. ಇದರ ಫಲವೇ ದುರ್ಬಲ ಬಹುಜನರ ನಿರಂತರ ಬಲಿ, ಕೋಮುವಾದದ ಬಲಿ, ಬಲಿದಾನದ ರೂಪಕ್ಕಿಂತಲೂ ಭೀಕರ ಸ್ವರೂಪವನ್ನು ಇದು ಹಲವೊಮ್ಮೆ ಪಡೆಯುತ್ತದೆ. ಇಲ್ಲಿ ಬಲಿ ಹಾಕುವವರು ಯಾರು, ಬಲಿಯಾಗುವವರು ಯಾರು ಎಂದು ತಿಳಿಯದಷ್ಟು ಸೂಕ್ಷ್ಮವಾಗಿ ದೂರದಲ್ಲೇಲ್ಲೋ ಅಗೋಚರ ಶಕ್ತಿಗಳಿಂದ ಮಂತ್ರಿಮಂಡಲಗಳಲ್ಲೋ,

ಬಹುರಾಷ್ಟ್ರೀಯ ಕಂಪನಿಗಳ 'ಬೋರ್ಡ್‌ರೂಂ'ಗಳಲ್ಲೋ ಬಲಿಯ ನಿರ್ಧಾರಗಳಾಗುತ್ತಿರುತ್ತವೆ. ಆಧುನಿಕ ಮನಸ್ಸಿನ ಪ್ರಗತಿಕಲ್ಪನೆಯೆಂದರೆ, ನಿರ್ಗತೀಕರಣ ಎಂದೇ ಅರ್ಥ. (modern mind notion of prosperity is pauperization)ಎಂದು ನಮ್ಮನಡುವಿರುವ ಒಬ್ಬ ಹಿರಿಯ ಸಮಾಜವಾದಿ ಚಿಂತಕ ಶ್ರೀ ಕಿಶನ್ ಪಾಟ್ನಾಯಕ್ ಪ್ರತಿಕ್ರಿಯಿಸಿದರು ಇಲ್ಲಿ ಇರುವ ವ್ಯವಸ್ಥೆಯನ್ನು ಅತಿ ನಿಕೃಷ್ಟವಾಗಿ ಕಾಣುವ ಮೂಲಕ ಹೊಸ ವ್ಯವಸ್ಥೆ ಜಾರಿಗೆ ತರುವ ಬರದಲ್ಲಿ ಸಂಪೂರ್ಣವಾಗಿ ನಾವು ಹಿಂದುಳಿದ ವರ್ಗದವರನ್ನು ಕಡೆಗಣಿಸುತ್ತಿದ್ದೇವೆ ಎಂದು ಅರಿವಾಗುತ್ತದೆ.

ವಿಶ್ವ ಸಂಸ್ಥೆಯು ಸಹ ಎಂತಹ ಅಭಿವೃದ್ಧಿ ತರಬೇಕೆಂದು ತಲೆಕೆಡಿಸಿಕೊಂಡಿದ್ದು, ಅಭಿವೃದ್ಧಿಯ ಪರಿಕಲ್ಪನೆಯ ಬಗ್ಗೆ ಮಾನವನ ಮುಖವುಳ್ಳ ಅಭಿವೃದ್ಧಿ ಸಾಧ್ಯವೇ? ಎಂದು ಪ್ರಶ್ನಿಸಬಹುದಾಗಿದೆ. ಅಭಿವೃದ್ಧಿಯ ಸಂಕಥನ ಹಾಗೂ ಅದರ ಅನುಷ್ಠಾನದ ಪ್ರಾರಂಭಿಕ ಹಂತಗಳಲ್ಲಿ ಕಾಣಿಸಿಕೊಂಡ ಸೋಲುಗಳಿಂದ ಕಂಗೆಟ್ಟ ಒಂದು ತಲೆಮಾರಿನ ಸಜ್ಜನರು ಆಧುನೀಕರಣದ ಅಗತ್ಯವಿರುವ ಜನಸಮುದಾಯಗಳಿಗೆ ಒಳ್ಳೆಯ ಅಭಿವೃದ್ಧಿಯನ್ನು ತಲುಪಿಸುವುದು ಹೇಗೆ ಎಂದು ತಲೆಕೆಡಿಸಿಕೊಂಡಿರುವುದು ಸ್ಪಷ್ಟವಾಗಿ ನಮಗೆ ತಿಳಿದುಬರುವ ಸಂಗತಿಯಾಗಿದೆ. ಇದಕ್ಕೆ ಪೂರಕವಾಗಿ ಎಡಪಂಥೀಯ ಧೋರಣೆಗಳು ಸಹ ಬಡವರಬಗ್ಗೆ ಕಾರ್ಮಿಕರ ಬಗ್ಗೆ ಯೋಚಿಸತೊಡಗಿದ್ದು ಹಾಗೆಯೇ ಬಲಪಂಥೀಯ ಒಲವುಗಳು ಎಡಪಂಥೀಯ ಒಲವಿಗಿಂತ ಭಿನ್ನ ಎಂಬ ಸತ್ಯ ಎಂದು ನಾವು ಕಂಡುಕೊಳ್ಳಬೇಕಾಗಿದೆ. ಬಲಪಂಥೀಯರ ಧೋರಣೆಗಳೇನಿದ್ದರೂ ಸಹ ಅದು ಪರಂಪರೆಯ ಬಗ್ಗೆ, ಸಂಸ್ಕೃತಿಯಬಗ್ಗೆ ಎಂದು ಹೇಳುವ ಧಾರ್ಮಿಕ ಮುಖಂಡರು ಮತ್ತೆ ಜಾತಿ ಪದ್ಧತಿಯನ್ನು ಅಸಮಾನತೆಯನ್ನು ಬಲಪಡಿಸಿದಂತೆ ತೋರಿದರೆ ಎಡಪಂಥೀಯರ ನಿಲುವುಗಳು ಕಾರ್ಮಿಕ ಪರವಾಗಿದ್ದವು. ಬಡವರ ಪರವಾಗಿದ್ದವು ಎಂದು ಪ್ರಸನ್ನ ಹೇಳುತ್ತಾರೆ.

ಹಾಗದರೆ, ಬಡತನದ ಹಿನ್ನಲೆ ಏನು? ಎಂಬುದನ್ನು ತಿಳಿಯಬೇಕಾಗುತ್ತದೆ. ಬಡತನದ ಪ್ರಕ್ರಿಯೆಯು ಸರಳಗ್ರಹಿಕೆಗೆ ಸಿಗುವಂತಹುದಲ್ಲ. ಗ್ರಾಮೀಣ ಬಡಜನರಿಗೂ, ನಗರದ ಬಡಜನರಿಗೂ ವ್ಯತ್ಯಾಸವಿದೆ. ಗ್ರಾಮೀಣ ಬಡತನವೆಂಬುದು ಹತ್ತು ಹಲವು ಮುಖಗಳಾಗಿ ಗೋಚರವಾಗುತ್ತದೆ. ಹಳ್ಳಿಯ ಶ್ರೀಮಂತನೂ ನಗರದ ಶ್ರೀಮಂತನಿಗೆ ಹೋಲಿಸದರೆ ಬಡವನೆ, ಹಳ್ಳಿಯ ಶ್ರೀಮಂತನೇ ಬಡವನಾದರೆ ಬಡವನ ಸ್ಥಿತಿಯಾದರೂ ಎಂತಹುದು. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಕ್ಕೆ ಕಾರಣವಾದರೂ ಏನು? ಹಳ್ಳಿಯ ರೈತನಮನೆ ನಗರದ ಶ್ರೀಮಂತನ ಮನೆಗಿಂತ ದೊಡ್ಡದಿರಬಹುದು. ಹಾಲು, ಬೆಣ್ಣೆ, ದನಕರು ಎಲ್ಲವೂ ಇದ್ದರೂ ಹಳ್ಳಿಯ ಜನರು ಇನ್ನೂ ಏಕೆ ಬಡತನದ ಸ್ಥಿತಿಯಲ್ಲಿಯೇ ಇದ್ದಾರೆ? ಬಡತನದ ಒಟ್ಟು ಸ್ವರೂಪವನ್ನು ಹೀಗೆ ಗ್ರಹಿಸಬಹುದು. ನಿಖರವಾಗಿ ಹೇಳುವುದಾದರೆ ದೇಶೀ ಸಮಾಜಗಳಿಗೆ ಪರಿಚಿತವಾಗಿದ್ದದ್ದು ಎರಡು ವಿಧದ ಬಡತನದ ಮಾದರಿಗಳು ಮಾತ್ರ. ಒಂದು ಆಧ್ಯಾತ್ಮಿಕ ಯಾ ಸ್ವಯಂಇಚ್ಛೆಯ ಬಡತನ, ಇನ್ನೊಂದು ಸಾಮೂಹಿಕ ಆಸ್ತಿಯಿಂದುಟಾಗುವ ಬಡತನ ಇದರಲ್ಲಿ ಯಾವ ಬಗೆಯ ಬಡತನದ ಸ್ವರೂಪ ಚಾಲ್ತಿಯಲ್ಲಿದೆ ಎಂಬುದನ್ನು ತಿಳಿಯಬೇಕಾದ ಅವಶ್ಯಕತೆ ಇದೆ.

ಚರಿತ್ರೆಯನ್ನು ಗಮನಿಸಿದರೆ ನಮಗೆ ತಿಳಿಯುವುದು ಬಹುತೇಕ ಬಡವರ ಹೋರಾಟಗಳು ಆರಂಭವಾದದ್ದು ಭೂಮಿಯ ಪ್ರಶ್ನೆಯಮೇಲೆ. ಭಾರತದಲ್ಲಂತೂ ಇದು ನೂರಕ್ಕೆ ನೂರರಷ್ಟು ಸತ್ಯ. ಎಲ್ಲಾ ಹೋರಾಟಗಳೂ ಭೂಮಿಯ ಮರುಹಂಚಿಕೆಯ ಉದ್ದೇಶ ಹೊಂದಿದ್ದವು.

ಬಡವರ ಆಸ್ತಿಯ ಕೇಂದ್ರ 'ಬಡತನ' ಎಂದೇ ನಾವೆಲ್ಲಾ ತಿಳಿದಿದ್ದೆವು. ಗಾಂಧೀಜಿ ತಾನೂ ಬಡವನೇ ಆಗಿ ನಿಂತು ಹೋರಾಟಮಾಡಿ ಭಾರತಕ್ಕೆ ಸ್ವಾತಂತ್ರ್ಯಗಳಿಸಿಕೊಟ್ಟರು. ಆದರೆ ಈಗ 'ಬಡವರಿಗೇ ಬಡತನದ ಕಾಳಜಿಯಿಲ್ಲ' ಎಂಬ ಅನುಮಾನ ಬರಹತ್ತಿದೆ ಎಂದು ಪ್ರಸನ್ನ ಹೇಳುತ್ತಾರೆ.

ಇನ್ನು ಬಡತನದ ಬಗ್ಗೆ ಗಾಂಧೀಜಿಯವರು ಆತ್ಮಸಾಕ್ಷಾತ್ಕಾರವನ್ನು ಪಡೆಯುವ ಮತ್ತು ನಿಜಸ್ವಾತಂತ್ರ್ಯ ಹಾಗೂ ನಿಜಸಿರಿವಂತಿಕೆಗಳನ್ನು ಸಾಧಿಸಿಕೊಳ್ಳುವ ಅತ್ಯಂತ ಉನ್ನತವಾದ ಮಾರ್ಗವೆಂದು ತಿಳಿದಿದ್ದರು. ಅಸಾಧಾರಣ ಮನುಷ್ಯರುಗಳಾದ ಸಾಕ್ರಟೀಸ್, ಯೇಸು, ರಬಿಯ, ಅಲ್ ಅದಾವ್ಯ, ಸಂತ ಫ್ರಾನ್ಸಿಸ್ ಮತ್ತು ಮಹತ್ಮಗಾಂಧಿ ಮೊದಲಾದವರು ಹಂಚಿಕೊಂಡಿದಂತ ಬಡತನದ ವಿಧ ಇದು. 'ಬಡತನವು ನನ್ನ ವೈಭವ' ಎಂದು ಪ್ರವಾದಿ ಮೊಹಮ್ಮದರು ಹೇಳಿದಾಗ ಅವರು ಸೂಚಿಸುತ್ತಿದ್ದ ಬಡತನದ ಮಾದರಿ ಇದೆ.

ಇನ್ನು ಎರಡನೆಯದಾಗಿ ಸಮೂಹಿಕ ಬಡತನ ಎಂಬುದು ಸಮುದಾಯವೊಂದರ ಸಾಮಾನ್ಯ ಸಂಪನ್ಮೂಲಗಳ ಪರಸ್ಪರ ಹಂಚಿಕೆ ಒಂದು ಕ್ರಮವಾಗಿತ್ತು ಮತ್ತು ಅಂಥ ಹಂಚಿಕೆಯ ಮೂಲಕ ತಮ್ಮ ಸಾಮೂಹಿಕ ಸಾಮರ್ಥ್ಯವನ್ನು ವರ್ಧಿಸಿಕೊಳ್ಳುವ ಉಪಾಯಕೂಡ ಅದಾಗಿತ್ತು. ಇಂದು ಚಾಲ್ತಿಯಲ್ಲಿರುವುದು ಎರಡನೆಯ ಮಾದರಿ ಸ್ಥಿತಿ. ಆತ್ಮ ಸಾಕ್ಷಾತ್ಕಾರ, ಸಂಯಮ ತಿಳಿಯದ ಜನ ಮುಖ್ಯವಾಗಿ ಇವತ್ತು ಅಗತ್ಯವಾಗಿರುವ ಹುಡುಕಾಟಗಳೆಂದರೆ – ಮೊದಲನೆಯದು ಒಳ್ಳೆಯ ಬದುಕೊಂದರ ಹುಡುಕಾಟ: ಪ್ರತಿಯೊಬ್ಬರಿಗೂ ವಿಹಿತವಾಗುವ ಯಾರೊಬ್ಬರಿಗೂ ತೊಂದರೆಯಾಗದ ಮತ್ತು ನೈಸರ್ಗಿಕ ಪರಿಸರ ಮತ್ತು ಸಮಾಜ ವ್ಯವಸ್ಥೆಗೆ ಧಕ್ಕೆ ತಾರದ ಬದುಕಿನ ಕ್ರಮವೊಂದರ ಹುಡುಕಾಟ. ಎರಡನೆಯದು ಸಮಾಜವನ್ನು ವ್ಯವಸ್ಥೆಗೊಳಿಸುವ ಹೊಸ ವಿಧಾನವೊಂದರ ಹುಡುಕಾಟ.

ಇಲ್ಲಿ ಬದುಕುವ ಪ್ರತಿಯೊಬ್ಬರಿಗೂ ತಮ್ಮ ತಮ್ಮ ಸಾಧ್ಯತೆಗಳನ್ನು ಬೆಳೆಸಿಕೊಳ್ಳುವುದಕ್ಕೆ ಸಂಪೂರ್ಣ ಅವಕಾಶ ಕೊಡುವ ಹಾಗೂ ತನ್ಮೂಲಕ ಪ್ರತಿಯೊಬ್ಬರಿಗೂ ಪ್ರಯೋಜನಕಾರಿಯೂ ಆಗುವ ವ್ಯವಸ್ಥೆಯೊಂದರ ಹುಡುಕಾಟ[10] ಇದಕ್ಕೆ ಒಂದು ದೃಷ್ಟಾಂತವಾಗಿ, ಕೃಷಿ ಉತ್ಪಾದನೆಯ ಕ್ಷೇತ್ರವನ್ನೇ ನೋಡಬಹುದು; ಇದು ಬಡವರ ಭೌತಿಕ ಉಳಿವಿಗೆ ತುಂಬಾ ಅನಿವಾರ್ಯವಾಗಿರುವ ಒಂದು ವಲಯ. ಈ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನವು ಪ್ರವೇಶಮಾಡಿ, ಅದರಿಂದಾಗಿ ಅಹಾರೋತ್ಪನ್ನಗಳ ಅಸಾಧಾರಣ ಹೆಚ್ಚಳ ಸಾಧನೆಯಾಗಿದೆಯೆಂಬುದೇನೋ ಸತ್ಯವೇ. ಉದಾಹರಣೆಗೆ: ಕಳೆದ ನಲವತ್ತು ವರ್ಷಗಳ ಅವಧಿಯಲ್ಲಿ ಅಕ್ಕಿಯ ಉತ್ಪಾದನೆಯು ಪ್ರತಿಶತ 240ರ ಪ್ರಮಾಣದಲ್ಲಿಹೆಚ್ಚಾಗಿದೆ. ಆದರೆ ಆಗಾಧ ಉತ್ಪಾದನಾ ಅಭಿವೃದ್ಧಿಯಿಂದ ಬಹುತೇಕ ಪ್ರಯೋಜನ ಪಡೆದವರು ಅನುಕೂಲಸ್ಥರೇ.

ರೈತರಲ್ಲೇ ಬಡವರಾದವರಿಗೆ ಈ ಹೆಚ್ಚಳದ ಪರಿಣಾಮವೇನೆಂದರೆ ಅವರು ತಮಗಿಂತ ಶ್ರೀಮಂತರೂ, ಶಕ್ತರೂ ಆಗಿರುವವರಮೇಲೆ ಮತ್ತೂ ಮತ್ತೂ ಅವಲಂಬಿತರಾಗತೊಡಗಿದ್ದಾರೆ. ಉಳ್ಳವರ ಕೈಸೇರುತ್ತಿರುವ ಯೋಜನೆಗಳು ಬಡವರನ್ನು ಮುಟ್ಟುವಲ್ಲಿ ಏಕೆ ವಿಫಲವಾಗಿವೆ? ಹಸಿರು ಕ್ರಾಂತಿಯೆಂಬುದು ವಾಸ್ತವದಲ್ಲಿ ಬಡವರು ತಮ್ಮ ಭೂಮಿಯನ್ನು ಬಳಸಿ ಉತ್ಪಾದನೆ ಮಾಡುವ ಅನುಕೂಲದಿಂದ ಅವರನ್ನು ವಂಚಿಸಿ ಅವರನ್ನು ಭೂಹೀನರಾಗಿಸಿದೆ. ಇಂಥ ರೈತರ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರಗಳು ರೂಪಿತಗೊಂಡಿದೆ; ಅವರ ಸಂಪ್ರದಾಯಕ ಜ್ಞಾನ ಮತ್ತು ಸ್ಥಳೀಯ ತಂತ್ರಜ್ಞಾನಗಳು ನಾಶಗೊಂಡಿವೆ. ಇದರೊಂದಿಗೆ ಅವರ ಕ್ಷೇತ್ರದಲ್ಲಿ ಸೃಷ್ಟಿಸಲಾಗಿರುವ ಸಮಸ್ಯೆಗಳನ್ನು ಅವರೇ ನಿಭಾಯಿಸಿಕೊಳ್ಳುವ ತಾಕತ್ತೂ ಅವರಿಗೆ ಇಲ್ಲದಂತಾಗಿದೆ.

ಆದ್ದರಿಂದ, ಆರ್ಥಿಕ ಅಭಿವೃದ್ಧಿಯೇ ಆಗಲಿ, ಅಥವಾ ಅಂಥ ಅಭಿವೃದ್ಧಿಯ ಜಾಗತೀಕರಣವೇ ಆಗಲಿ ಇವತ್ತಿಗೂ ಬಡವರ ಪಾಲಿಗೆ ಕಾರಣವಾಗಿರುವ ಸಮಾಜ ನಿರ್ಮಿತ ಕೊರತೆಗಳನ್ನು ಪರಿಹರಿಸಲಾರದು. ಹೆಚ್ಚೆಂದರೆ ಅದು ತಾತ್ಕಾಲಿಕ ಪರಿಹಾರ ಕೊಟ್ಟೀತು ಮತ್ತು ಅಂಥ ತಾತ್ಕಾಲಿಕ ಪರಿಹಾರವು ಸಂಪೂರ್ಣವಾಗಿ ಲಾಭದ ಬೆನ್ನು ಹತ್ತಿರುವ ಸಮಾಜಗಳ ವಿಜೇತ ವರ್ಗಕ್ಕೆ ಮಾತ್ರ ಸಿಗುವ ಭಾಗಶಃ ಪರಿಹಾರ ಎಂಬುದನ್ನು ಕಂಡುಕೊಳ್ಳಬೇಕಾಗಿದೆ.

ಬಡವರಲ್ಲಿಯೇ ಅತ್ಯಂತ ವಿವೇಕವಂತರಾದವರು ಈಗ ಕಳೆದುಹೋಗಿದ್ದ ಎರಡು ಹಳೆಯ ಸತ್ಯಗಳನ್ನು ಮರಳಿ ಗಳಿಸಲು ತೊಡಗಿರುವಂತೆ ತೋರುತ್ತದೆ. ಮೊದಲನೇ ಸತ್ಯ: ಇದು ಯಾವುದೇ ಸಾಮಾಜಿಕ, ರಾಜಕೀಯ ಪ್ರತಿರೋಧವೂ ಅದು ವ್ಯಕ್ತಿಯ ಸಮುದಾಯವೊಂದರ ಸ್ವಂತದ ವಾಸ್ತವ ಗ್ರಹಿಕೆಯೊಳಗೆ ನಡೆದ ಪಲ್ಲಟವಾಗದೇ ಹೋದರೆ ಮತ್ತು ಅದರ ಫಲವಾಗಿ ಹುಟ್ಟಿದ ಅಂತರ್‌ಕ್ರಾಂತಿಯಾಗದೇ ಹೋದರೆ ಅದು ಸಾಮಾಜಿಕವಾಗಿಯೂ, ಪ್ರಯೋಜಕವಾಗಲಾರದು. ಎರಡನೇ ಸತ್ಯವೆಂದರೆ; ಅರಿವು ಮತ್ತು ತಮ್ಮ ಕುರಿತೇ ಉಂಟಾಗುವ ಸ್ವಜ್ಞಾನಗಳೆರಡು ತಮ್ಮದೇ ಹೊಸ ಭಾಷೆಗಳನ್ನು ಅವಿಷ್ಕರಿಸಿಕೊಳ್ಳುವುದು ಅಗತ್ಯ ಮಾತ್ರವಲ್ಲ ಪರಸ್ಪರರ ನಡುವಿನ ಸಂಬಂಧ ಮತ್ತು ಸಂದರ್ಭಗಳಿಗೆ ಸಂವಾದಿಯಾಗಿ ಮಾತ್ರವೇ ಗತಕಾಲದ ಅತ್ಯತ್ತಮ ಪರಂಪರೆಗಳನ್ನು ಆಯ್ದು ಆಧುನಿಕ ತಂತ್ರಗಳ ಮೂಲಕ ಸಂಗೋಪಿಸಿಕೊಂಡು ಬಳಸುವ ತಮ್ಮದೇ ಸ್ವಂತ ಪದ್ಧತಿಗಳನ್ನು ರೂಢಿಸಿಕೊಳ್ಳುವುದು ಶಕ್ಯವಾದೀತು. ಇಲ್ಲಿ ಕಾಲ ಬದಲಾದ ಹಾಗೆ ವ್ಯವಸ್ಥೆಯು ಬದಲಾಗಬೇಕು ಆ ಬದಲಾವಣೆಯು ಎಲ್ಲ ವರ್ಗದ ಜನರಿಗೆ ಅನುಕೂಲವಾಗುವಂತಿರಬೇಕು ಎಂಬುದು ಗಮನಿಸಬಹುದಾಗಿದೆ.

ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡೇ ಯಂತ್ರನಾಗರೀಕತೆಯು ಹುಟ್ಟಿಕೊಂಡಿತು. ಅಂತಹ ಸಂದರ್ಭದಲ್ಲಿ ಎಡಪಂಥಿಯರು ತಮ್ಮ ಹೋರಾಟದ ಗುರಿಯನ್ನು ಯಂತ್ರಗಳ ಒಡೆತನದ ಪ್ರಶ್ನೆಯಾಗಿ ಸ್ವೀಕರಿಸಿದರು ಇದಕ್ಕೆ ಕಾರಣವೂ ಇತ್ತು. ರೈತರ ಹೋರಾಟಗಳು ಸಾಮಾಜಿಕ, ರಾಜಕೀಯ, ಆರ್ಥಿಕ ಪರಿಸ್ಥಿತಿಯನ್ನು ಬದಲಾಯಿಸಲು ವಿಫಲವಾದುದೇ ಕಾರಣವೇ? ಅದೂ ಅಲ್ಲದೆ ರೈತನಾದರೊ ತನ್ನ ಊರಿಗೆ, ಜಾತಿ, ಧರ್ಮಗಳಿಗೆ ಕಟ್ಟುಬಿದ್ದುದರ ಪರಿಣಾಮ ಅವನ ಹೋರಾಟಗಳು ಹಿನ್ನಡೆ ಅನುಭವಿಸಬಹುದಾದ ಸಾಧ್ಯತೆಯಿರಬಹುದು. ಕಾರ್ಮಿಕನಾದರೋ ಯಾರ

ಹಂಗಿಗೆ ಒಳಗಾಗದೆ ಬದಲಾವಣೆ ತರಲು ಮುಂದಾಗುತ್ತಾನೆ ಎಂದು ಕಾರ್ಮಿಕ ವರ್ಗದ ಜನರಿಗೆ ನಾಯಕತ್ವ ಕೊಡಲಾಯಿತು. ಕಾರ್ಮಿಕವರ್ಗದ ಜನರು ಭ್ರಷ್ಟರಾಗಿ, ಸಮಾನತೆಯ ಆದರ್ಶವೆಂಬುದು ಸರಳೀಕರಣಗೊಂಡು ಕಾರ್ಖಾನೆಗಳ ನಿರ್ವಹಣೆಯು ಸರಳ ಮತ್ತು ಸುಲಭ ಎಂಬ ಕಾರಣಕ್ಕೆ ಮನುಷ್ಯನು ತಾನು ಬಂಡವಾಳ ಹೂಡಿ ಲಾಭಗಳಿಸುವ ದುರಾಶೆಯನ್ನು ಹೊಂದಿದ್ದು ಪುರಾಣಕಾಲದ ರಾಕ್ಷಸರಂತೆ ವರ್ತಿಸುತ್ತಿದ್ದಾರೆ."[11] ಈ ಮಧ್ಯೆ ಲೋಹ ಪುರಷ ಈಗಾಗಲೇ ತನ್ನ ಅಸ್ತಿತ್ವವನ್ನು ಎಲ್ಲೆಡೆ ಸ್ಥಾಪಿಸಿದ್ದು, ಪರಿಸ್ಥಿತಿ ಮತ್ತಷ್ಟು ದ್ವಿಗುಣಗೊಳ್ಳುತ್ತಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಕಾರಣವಿಷ್ಟೆ, ಜಾಗತಿಕ ಮಾರುಕಟ್ಟೆನೀತಿಯು ಬೆಳವಣಿಗೆಯ ಆತ್ಯಂತಿಕ ಗುರಿಯನ್ನು ನಿರ್ದೇಶಿಸುತ್ತಿರುವಾಗ, ಈ ಅವೈಜ್ಞಾನಿಕ ಮಾದರಿಯು ಅನಿವಾರ್ಯವಾಗಿ ಸಾಮಾಜಿಕ ವಿಭಜನೆ, ನಾಗರೀಕಾತ್ಮ ಸಂಘರ್ಷಗಳನ್ನು ಭದ್ರಗೊಳಿಸುತ್ತದೆ. ಇಂಥ ಜಾಗತಿಕ ಮಾರುಕಟ್ಟೆಗೆ ನಮ್ಮ ರೈತಾಪಿ ವರ್ಗವನ್ನು ಹೊಂದಿಸಿಕೊಂಡು ಲಾಭ ಪಡೆಯಲು ಒತ್ತಾಯಿಸಲಾಗುತ್ತಿದೆ. ಆದರೆ ಜಾಗತಿಕ ಮಾರುಕಟ್ಟೆಯ ಅರ್ಥವ್ಯವಸ್ಥೆಯ ಒಳನೋಟಕ್ಕೆ ಪ್ರವೇಶಿಸುವುದಿರಲಿ, ಆ ಬಲಿಷ್ಟ ವ್ಯಾಪಾರಿ ಶಕ್ತಿಗಳ ಅತ್ಯಂತ ಸಂಕೀರ್ಣ ವ್ಯಾಪಾರಿ ನಿಯಮಗಳನ್ನು ಅರ್ಥಮಾಡಿಕೊಳ್ಳಲು ನಮ್ಮ ಬಡರೈತನಿಗೆ ಸಾಧ್ಯವಾಗದು. ತನ್ನ ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲೂ ರೈತ ತನ್ನ ಬೆಳೆಯ ಆಯ್ಕೆ ಮತ್ತು ಅವಶ್ಯವಾದ ತಂತ್ರಜ್ಞಾನದ ಆಯ್ಕೆಯ ಮಟ್ಟಿಗಾದರೂ ಇಂದಿನವರೆಗೆ ಸ್ವತಂತ್ರನಾಗಿದ್ದ. ಬಡತನದಲ್ಲೂ ಪರಂಪರಾಗತವಾದ ಹಳ್ಳಿಯ 'ಕೂಡುಬಳಕೆಯ ಸಂಪತ್ತಿ'ನ ಬಲದಿಂದ ಮರ್ಯಾದೆಯಿಂದ ಬದುಕಲು ಆತನಿಗೆ ಸಾಧ್ಯವಾಗಿತ್ತು. ಈ ವ್ಯವಸ್ಥೆಯೇ ಇಂದು ಛಿದ್ರೀಕರಣಗೊಂಡು, ಆತ ಸಂಪೂರ್ಣ ದಿವಾಳಿಯೆದ್ದು, ದರಿದ್ರನಾಗಿ, ನಿರ್ಗತಿಕ ಸ್ಥಿತಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಹಂತ ತಲುಪಿದ್ದಾನೆ. ದೇಶದ ಸುಮಾರು ಅರವತ್ತು ಶೇಕಡ ಜನರು ಐವತ್ತು ವರ್ಷಗಳಲ್ಲಿ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಬಳಿಕವು ತಮಗೆ ಈ ದೇಶದಲ್ಲಿ ಬದುಕಲು ಸಾಧ್ಯವಾಗುತ್ತಿಲ್ಲ ಎಂದು ಆತ್ಮಹತ್ಯೆಯ ಮೂಲಕ ಸಾರುತ್ತಿರುವಾಗ, ನಿಜಕ್ಕೂ ನಮ್ಮ ಪ್ರಗತಿಪಥದ ದೃಷ್ಟಿ ಧ್ಯೇಯಗಳೇನು? ಎಂಬುದನ್ನು ಅನುಮಾನದಿಂದ ಶೋಧಿಸಬೇಕಾಗುತ್ತದೆ. ಆದರೆ ಈ ಅತ್ಯಂತ ಕಳವಳಕಾರಿ ವಿದ್ಯಮಾನದಬಗ್ಗೆ ಯಾವುದೇ ರಾಜ್ಯಸಭೆಗಳಲ್ಲಾಗಲೀ, ಲೋಕಸಭೆಗಳಲ್ಲಾಗಲೀ ಗಂಭೀರವಾದ ಚಿಂತನೆಯೇ ನಡೆಯದಿರುವುದು ಮತ್ತು ದೇಶದ ರಾಷ್ಟ್ರೀಯ ಚರ್ಚೆಗಳ ಪ್ರಧಾನವಾಹಿನಿಯಲ್ಲಿ ಇದು ಪ್ರಮುಖ 'ಎಜೆಂಡಾ' ಆಗದಿರುವುದು ಅತ್ಯಂತ ವಿಷಾದದ ಸಂಗತಿ.

ಈ ಕಾರಣಕ್ಕಾಗಿಯೇ ಏರಿಕ್ ಹಾಬ್ ಸ್ಬಾಮ್ 'ದಿ ನ್ಯೂ ಸೆಂಚುರಿ' ಎಂಬ ಪತ್ಯದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ಹೇಳುತ್ತಾ ಜಾಗತೀಕರಣದ ನಿಜವಾದ ಸಮಸ್ಯೆಯನ್ನು ಹೀಗೆ ವಿವರಿಸುತ್ತಾನೆ, ಜಾಗತೀಕರಣದ ಪ್ರಮುಖ ಸಮಸ್ಯೆಯೆಂದರೆ ಅದು ಸಹಜವಾಗಿಯೇ ಅಸಮಾನವು, ವೈವಿಧ್ಯಮಯವೂ ಆಗಿರುವ ಒಂದು ಜಗತ್ತಿನಲ್ಲಿ ಎಲ್ಲಾ ವಸ್ತುಗಳು ಎಲ್ಲರಿಗೂ ಸಮಾನವಾದ ನೆಲೆಯಲ್ಲಿ ದೊರಕಬಲ್ಲವೆಂಬ ತಾತ್ಕಾಲಿಕ ಆಶ್ವಾಸನೆಯ ಭ್ರಮೆಯೊಂದನ್ನು ನಿರ್ಮಿಸಿಕೊಡುತ್ತದೆ. ಮತ್ತು ಈ ಎರಡು ಅಮೂರ್ತ ತತ್ವಗಳ ನಡುವೆ ಸಂಘರ್ಷ ಅನಿವಾರ್ಯವಾಗಿಯೇ

ಉದ್ಭವಿಸುತ್ತದೆ. ಈತನ ಮಾತುಗಳನ್ನು ಇನ್ನಷ್ಟು ಮುಂದುವರೆಸಿ ಹೇಳುವುದಾದರೆ, ಜಾಗತೀಕರಣವು ಹಸಿವು, ರೋಗ, ಬಡತನ, ಕೊಳಗೇರಿ ವಾಸ ಇತ್ಯಾದಿ ಮೂರ್ತ ಅನುಭವಗಳನ್ನು ಮರೆಸುವ ಗುಣವುಳ್ಳದ್ದಾಗಿದೆ. ಹಾಗೂ ಸುಖವನ್ನು ಎಲ್ಲರ ಜೊತೆಯು ಸಮಾನವಾಗಿ ಹಂಚಿಕೊಳ್ಳುವ ಕಾಲ್ಪನಿಕ ಅನುಭವವನ್ನು ಸೃಷ್ಟಿಸಬಲ್ಲದ್ದಾಗಿದೆ. ಅಲ್ಲದೆ ಅಮೂರ್ತವಾದ ಒಂದು ಜಗತ್ತನ್ನು ಕಟ್ಟಿಕೊಟ್ಟು, ಆ ಮೂಲಕ ನಾವೆಲ್ಲಾ ಒಂದೇ ವರ್ಗಕ್ಕೆ ಸೇರಿದವರೆಂಬ ಸ್ವಪ್ನವನ್ನು, ನಮ್ಮ ಅರಿವಿಗೆ ಬಾರದಂತೆಯೇ ಕಟ್ಟುವ ಮಾಯಾ ಶಕ್ತಿ ಅದಕ್ಕೆ ಇದೆ. ಇವತ್ತು ಜಾಗತೀಕರಣವೆಂಬುದು ಸಮಾನತೆಯನ್ನು, ನ್ಯಾಯವನ್ನು ಸ್ಥಾಪಿಸಲು ಹೋರಾಡುತ್ತಿರುವ ಎಲ್ಲರಿಗೂ ದೊಡ್ಡ ಸವಾಲಾಗಿ ಪರಿಣಮಿಸುವುದು ಈ ಕಾರಣಗಳಿಂದಾಗಿಯೇ.

ಈ ದೇಶದ ಜಾತಿವ್ಯವಸ್ಥೆ, ದಲಿತರ, ಮಹಿಳೆಯರಶೋಷಣೆ, ಗಿರಿಜನರ ಒಕ್ಕಲೆಬ್ಬಿಸುವಲ್ಲಿ ಪರಿಹಾರವಾಗಬಲ್ಲುದೇ ಎಂಬುದನ್ನೊಮ್ಮೆ ಅವಲೋಕಿಸಿದರೆ, ಚಿತ್ರಣ ಇನ್ನಷ್ಟು ಮಸುಕುಗೊಳ್ಳುವುದನ್ನು ನಾವು ನೋಡಬಹುದು. ಸಮಾಜದ ಅಂಚಿನಲ್ಲಿ ವಾಸಿಸುತ್ತಿರುವವರ ಬಿಡುಗಡೆಯ ದಾರಿಯಾಗುವ ಬದಲು ಜಾಗತೀಕರಣ, ಶ್ರೇಣಿಕೃತ ಸಮಾಜ ವ್ಯವಸ್ಥೆಯನ್ನು ಇನ್ನಷ್ಟುಗಟ್ಟಿಗೊಳಿಸುತ್ತಿದೆ. ಸಾಮಾಜಿಕ ಬದಕಿನ ಸಮಾನತೆಯ ಸತ್ವವನ್ನೇ ಕುಗ್ಗಿಸಿ, ಶಿಥಿಲಗೊಳಿಸಿ ಕೊನಯಪಕ್ಷ ದುರ್ಬಲರು ಗೌರವದಿಂದ ಬದುಕುವ ಅವಕಾಶವನ್ನು ವಂಚಿಸುತ್ತಿದೆ. ಮೀಸಲಾತಿಯ ಸಾಮಾಜಿಕ ಅನ್ಯಾಯದ ಆಶಯವನ್ನು ಖಾಸಗೀಕರಣ ತನ್ನ ದಕ್ಷತೆ, ಲಾಭಗಳ ಹೆಸರಲ್ಲಿ ಸಂಪೂರ್ಣ ಪರಿಣಾಮ ಶೂನ್ಯ ಮಾಡಲಾಗುತ್ತಿದೆ. ಈ ಮಂದಿಗೆ ಕನಿಷ್ಟ ಉದ್ಯೋಗ ಅವಕಾಶಗಳಿದ್ದ ಸರಕಾರೀ ಕ್ಷೇತ್ರಗಳಲ್ಲಾ ಖಾಸಗೀಕರಣದ ಹೆಸರಲ್ಲಿ ಇಂದು ಮುಚ್ಚಿಕೊಂಡಿವೆ. ಈ ತೋರಿಕೆಗೆ ಒಂದೆಡೆ ಮಹಿಳೆಯರಿಗೆ ಉದ್ಯೋಗ ಅವಕಾಶ ಹೆಚ್ಚುತ್ತಿದ್ದಂತೆ ಕಂಡರೂ, ಅವರ ಕಾರ್ಮಿಕ ಹಕ್ಕುಗಳೆಲ್ಲಾ ಮೊಟಕುಗೊಳ್ಳುತ್ತಿದ್ದು, ಅವರು 'ಬಾಂಡೆಡ್ ಲೇಬರ್' ರೀತಿಯಲ್ಲಿ ದುಡಿಯಬೇಕಾದ ಸನ್ನಿವೇಶ ನಿರ್ಮಾಣವಾಗುತ್ತಿದೆ. ಇಲ್ಲಿ ಸರಕಾರೀ ಉದ್ಯೋಗ ಕಡಿತಗೊಂಡಿದ್ದು, ಜನರನ್ನು ಮತ್ತಷ್ಟು ಖಾಸಗಿ ಉದ್ಯೋಗಗಳಿಗೆ ತೊಡಗಿಸಿಕೊಳ್ಳುವಂತೆ ಮಾಡಿರುವುದು ದೃಢಪಟ್ಟಿರುತ್ತದೆ. ಅಂದರೆ ಅರ್ಥಾತ್ ಬಂಡವಾಳಶಾಹಿ ವ್ಯವಸ್ಥೆಯು ಎಲ್ಲವನ್ನೂ ತನ್ನ ಅಧೀನದಲ್ಲಿಟ್ಟುಕೊಳ್ಳಲು ಹವಣಿಸುತ್ತಿದೆ ಎಂಬುದು ನಮಗೆ ಗೋಚರವಾಗುತ್ತದೆ. ಉದಾಹರಣೆಗೆ ದಲಿತರ ಕೆಳಪಯಣ ಈ ಜಾಗತೀಕ ಆರ್ಥಿಕ ಸಂದರ್ಭದಲ್ಲಿ ಇನ್ನೂ ಭೀಕರವಾಗಿದ್ದು ಅವರು ಈ ಪ್ರಕ್ರಿಯೆನ್ನೇ ಹಂಚಿಗೆ ತಳ್ಳಲ್ಪಡುತ್ತಿದ್ದಾರೆ. ಜಾಗತೀಕರಣವು ದಲಿತರ ಉದ್ಯೋಗವಕಾಶ ಹೆಚ್ಚಿಸುತ್ತದೆ ಎಂದು ನಂಬಿಸಲಾಗುತ್ತಿದೆ ಆದರೆ ತಳಮಟ್ಟದಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ, ಈ ಮಾತಿನ ಪೊಳ್ಳುತನ ಬಯಲಾಗದಿರದು. ಉದಾಹರಣೆಗೆ: ಒಂದೆಡೆ ಸುಲಭ ಶೌಚಾಲಯ 'ರ್‍ಯಾಪ್‌ಪಿಕಿಂಗ್' ಮುಂತಾದ ಹೊಸ ಕ್ಷೇತ್ರಗಳಲ್ಲಿ ಅವಕಾಶಹೆಚ್ಚುತ್ತಿದೆ ಎನ್ನಲಾಗುತ್ತಿದೆ.[12]

ಇಷ್ಟರ ಮೇಲೆ ನಿಜವಾಗಿಯೂ ಪ್ರಜಾಪ್ರಭುತ್ವದ ನೆಲೆಯಲ್ಲಿ ಕೆಲಸಮಾಡುವ ಜನಾಂದೋಲನಗಳು ಜಾಗತೀಕರಣದ ಬಗ್ಗೆ ತಾಳುವ ನಿಲುವನ್ನು ನಾವೀಗ ಗಮನಿಸಲೇಬೇಕು. ಹಳೆಯ ವಸಾಹತುಶಾಹಿಯು ಹಿಂದೆ ಮೇಲ್ಜಾತಿಗಳನ್ನು ಬಳಸಿಕೊಂಡಂತೆ ಇವತ್ತು ಜಾಗತೀಕರಣವೆಂಬ ನವ-ವಸಾಹತುಶಾಹಿಯು ದಲಿತ

ಸಮುದಾಯವನ್ನೂ ಕೂಡ ತನ್ನ ಉದ್ಧಾರಕ್ಕಾಗಿ ಬಳಸಿಕೊಳ್ಳುತ್ತದೆ ಇದು ಇವತ್ತಿನ ದುರಂತ. ಮತ್ತೆ ಸಾಂಸ್ಕೃತಿಕವಾಗಿ ಕೂಡ ದಲಿತರ ಆಯ್ಕೆಯು ತನ್ನೆದುರಿಗಿರುವ ಇನ್ನೂ ಕೆಲವು ಸೂಕ್ಷ್ಮಗಳನ್ನು ಗಮನಿಸಬೇಕು. ಜಾಗತೀಕರಣವು ತನ್ನದೇ ಆದ ಉಪಭೋಗ ಸಂಸ್ಕೃತಿಯನ್ನು ತನ್ನೊಂದಿಗೆ ಹೊತ್ತು ತರುವುದರಿಂದ ದಲಿತ ಸುಮುದಾಯವು ಅದನ್ನು ಸ್ವಲ್ಪ ಗಂಭೀರವಾಗಿಯೇ ಪಾರಂಬರಿಸಬೇಕು. ಮಂಟೇಸ್ವಾಮಿ, ಮಾರಮ್ಮ, ಯಲ್ಲಮ್ಮರಿಗೆ ಸೇರಿದ ಸಾಂಸ್ಕೃತಿಕ ಆಚರಣೆಗಳು ದಲಿತರಿಗೆ ಬಿಡುಗಡೆಯ ಅಂಶಗಳಲ್ಲ ಎಂಬ ವಾದವು ಭಾಗಶಃ ಸರಿಯಿದ್ದರೂ ಇದಕ್ಕೆ ಜಾಗತೀಕರಣದ ಜೊತೆಗೆ ಬರುವ ಉಪಭೋಗ ಸಂಸ್ಕೃತಿಯು ಪರ್ಯಾಯವೇನೂ ಅಲ್ಲ. ಆದ್ದರಿಂದ ಜಾಗತೀಕರಣವನ್ನು ಒಪ್ಪುವ ದಲಿತ ನಿಲುವು ಸಾಂಸ್ಕೃತಿಕ ಹೊಸ ಸ್ವಪ್ರಜ್ಞೆಯೊಂದನ್ನು ಹುಟ್ಟುಹಾಕಿಕೊಳ್ಳಲೇಬೇಕಾದ ಸ್ಥಿತಿ ಇವತ್ತು ನಮ್ಮೆದೆರಿಗಿದೆ.

ಜಾಗತಿಕ ಮಾರುಕಟ್ಟೆ ಮೀಮಾಂಸೆಯಲ್ಲಿ ದೀರ್ಘಾವಧಿಯ ಜನಹಿತ ದರ್ಶನವೇ ಇಲ್ಲ; ಮಾತ್ರವಲ್ಲ, ಸಾಮಾಜಿಕ ಹೊಣೆಯೇ ಇಲ್ಲದ ವ್ಯವಸ್ಥೆಗೆ ತನಗೆ ತಾನೆ ಸಾಮಾಜಿಕ ತಿರುವು ಕೊಟ್ಟುವ ಗುರಿ ಅಥವಾ ಸ್ವಯಂ ಸೌಲಭ್ಯ ಕೂಡ ಇಲ್ಲ. ಈ ಪರಿಸ್ಥಿತಿಯಲ್ಲಿ ಬಹುರಾಷ್ಟ್ರೀಯ ಕಂಪನಿಗಳು ನಮ್ಮ ನೆಲದಲ್ಲಿ ಸಾಮಾಜಿಕ ನ್ಯಾಯ, ಸಮಾನತೆಗಳಿಗೆ ಪ್ರಾಶಸ್ತ್ಯ ಕೊಟ್ಟವೇ? ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ಕೊನೆಯ ಪಕ್ಷ ಜನತಂತ್ರ ಸರಕಾರವಾದರೂ ತನ್ನ ಖಚಿತ ಸಾಮಾಜಿಕ ಧೋರಣೆಗಳ ಮೂಲಕ ಈ ಶಕ್ತಿಗಳನ್ನು ಜನಹಿತ ಆಶಯಗಳನ್ನು ಪೂರೈಸುವಂತೆ ಒತ್ತಾಯಿಸುವಲ್ಲಿ ಕಟ್ಟುನಿಟ್ಟಾಗಿ ವರ್ತಿಸಬೇಕು ಮತ್ತು ಜನರನ್ನು ಶೋಷಕ ಶಕ್ತಿಗಳಿಂದ ರಕ್ಷಿಸಲು ಪ್ರಜೆಗಳಬಗ್ಗೆ ಮೃದು ಧೋರಣೆ ತಳೆಯಬೇಕು. ಇದು ಪುರೋಗಾಮಿ ಸರಕಾರದ ಪ್ರಮುಖ ಜವಾಬ್ದಾರಿಯಾಗಿದೆ ಆದರೆ ಸ್ವಾರಸ್ಯವೆಂದರೆ, ಸರಕಾರವು ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಾ ಜನರ ವಿರುದ್ಧ ಕಟ್ಟುನಿಟ್ಟಾಗಿಯೂ, ಬಹುರಾಷ್ಟ್ರೀಯ ಕಂಪನಿಗಳಿಗೆ ಬೇಕಾದ ಅನುಕೂಲ ಮಾಡಿ ಕೊಡುವಲ್ಲಿ ಮೃದುವಾಗಿಯೂ ವರ್ತಿಸುತ್ತಿದೆ. ಇದು ಅತ್ಯಂತ ಸೋಜಿಗದ ಸಂಗತಿ.

ಈ ಶತಮಾನದ ಆರಂಭದಲ್ಲಿ ಕೈಗಾರಿಕಾ ಆಶಯ ಆಕೃತಿಗಳು ಯೋಜನಾ ಪ್ರಕ್ರಿಯೆ ಪ್ರಮುಖ ಸ್ವರೂಪವಾದಾಗ ಜನಸಾಮನ್ಯರ ಬದುಕಿನ ಉಸಿರಾದ, ಬೇಸಾಯ, ಕೈಕಸುಬುಗಳು ನಗಣ್ಯವಾದವು. ಇಂದು ಈ ಜಗತ್ತನ್ನು ಕಳೆದ 200 ವರ್ಷಗಳಿಂದ ಆಳುತ್ತಾ, ರೂಢಿಗತವಾಗಿದ್ದ ಕೈಗಾರಿಕಾ ಅರ್ಥಸಿದ್ಧಾಂತವೇ ಕುಸಿದು ಬಿದ್ದು, ಆ ಸ್ಥಾನವನ್ನು ಮಾಹಿತಿ, ಸಂವಹನ, ಮನೋರಂಜನೆಗಳು ಒಟ್ಟಾಗಿ ಐಸ್ (ice) ಅಭಿವೃದ್ಧಿ ಮಾಡೆಲ್ ಎಂಬ ಹೆಸರಲ್ಲಿ ಆಕ್ರಮಿಸಿಕೊಳ್ಳುತ್ತಿದೆ. ನಮ್ಮ ಬದುಕಿನ ಮೂಲ ಆಸ್ತಿಯಾದ ಕೃಷಿ ಎಂದೋ ನಿರ್ಲಕ್ಷ್ಯಕ್ಕೊಳಗಾಗಿತ್ತು. ಇಂದು ಎಲ್ಲಾ ಉತ್ಪಾದನಾ ಕ್ಷೇತ್ರಗಳು ಅವಗಣನೆಗೆ ಪಾತ್ರವಾಗುತ್ತಿದೆ. ಎಂಬುದು ಈ ಮೂಲಕ ನಾವು ಕಂಡು ಕೊಂಡ ಸತ್ಯವಾಗಿದೆ. ಇದು ಸಾಮಾಜಿಕ ಚಿಂತನೆಯ ಒಟ್ಟುಸಾರ ರೂಪ.

ಧಾರ್ಮಿಕ ಚಿಂತನೆ:

ನಿಜಕ್ಕೂ ಸಂಕಟದ ಕೆಲಸವೆಂದರೆ ಧರ್ಮದಬಗ್ಗೆ ವೈಜ್ಞಾನಿಕ ನಿಲುವನ್ನು ತಾಳುವುದು. ವೈಜ್ಞಾನಿಕ ನಿಲವು ಎಂದೆ! ವೈಜ್ಞಾನಿಕ ಎಂಬ ಪದವನ್ನು ನಾನು ಪ್ರಜ್ಞಾಪೂರ್ವಕವಾಗಿ ಬಳಸಿದೆ. ದೇವರು ಹಾಗೂ ವಿಜ್ಞಾನ! ಇವೆರಡು ವಿರೋಧಿ

ತತ್ವಗಳು ಎಂದೆ ಸಾಮಾನ್ಯವಾಗಿ ತಿಳಿಯಲಾಗುತ್ತದೆ. ಹಾಗೂ ಸಾಂಸ್ಥಿಕ ಧರ್ಮಗಳ ನಡುವೆ ಘರ್ಷಣೆಯಿದೆ. ಈ ಘರ್ಷಣೆಯನ್ನು ವಿಜ್ಞಾನ ಹಾಗೂ ದೇವರ ನಡುವೆ ನಡೆದಿರುವ ಘರ್ಷಣೆಯೆಂದು ಸರಳೀಕರಿಸಿ ನೋಡಲಾಗುತ್ತಿದೆ.[13] ಇದು ಅಪಾಯಕಾರಿ ಎಂದು ಪ್ರಸನ್ನ ಹೇಳುತ್ತಾರೆ. ಹಾಗಾದರೆ ಈ ಸಂದರ್ಭದಲ್ಲಿ ಧರ್ಮ ಏನನ್ನು ಹೇಳುತ್ತದೆ ಎಂಬುದು ಮೊದಲು ತಿಳಿಯುವುದು ಅವಶ್ಯಕ.

ಆಧುನಿಕ ಪಾಂಡಿತ್ಯವು ಸಾಮಾನ್ಯವಾಗಿ ಧರ್ಮವನ್ನು 'ರಿಲಿಜಿಯೆನ್ ಅಥವಾ ಮತ'ವೆಂದೂ ಭಾರತದ ಸಾಂಪ್ರದಾಯಿಕ ಧರ್ಮವನ್ನು ಹಿಂದೂ ಧರ್ಮಯೆಂದೂ ವ್ಯಾಪಕವಾಗಿ ಅರ್ಥೈಸಿಕೊಳ್ಳುತ್ತದೆ. ಯುರೋಪಿಯನ್ ವಿದ್ವಾಂಸರು ಮತಶ್ರದ್ಧೆ ಮತ್ತು ನಂಬಿಕೆಯ ವ್ಯವಸ್ಥೆಗಳನ್ನು ಸಂಘಟಿತ ರೂಪದಲ್ಲಿ ಸಂಪ್ರದಾಯಗಳಾಗಿ ಗ್ರಹಿಸಿದ್ದೇ ಧರ್ಮದ ತಪ್ಪು ಕಲ್ಪನೆಗೆ ಮುಖ್ಯಕಾರಣ. ಸಂಪ್ರದಾಯಗಳಿಗೆ ತಮ್ಮ ತಮ್ಮದೇ ಆದ ತತ್ವಶಾಸ್ತ್ರ ಮತ್ತು ಧಾರ್ಮಿಕ ಆಚಾರಗಳಿವೆ. ಆದರೆ ಭಾರತೀಯ ಪರಂಪರೆಯಲ್ಲಿ ಧರ್ಮವು ಸಾಮಾನ್ಯವಾಗಿ ಸಂಪ್ರದಾಯಗಳಿಂದ ಹೊರತಾದ ಸ್ವತಂತ್ರ ಅಸ್ತಿತ್ವವನ್ನು ಪಡೆದಿದೆ. ಇದರ ಅರ್ಥ ಜಗತ್ತಿನಲ್ಲಿರುವ ಲೋಕ ದೃಷ್ಟಿಗೆ ಧರ್ಮದ ಮೇಲೆ ಪ್ರಭಾವವಿಲ್ಲವೆಂದಲ್ಲ ಆದರೆ ಧರ್ಮ ಮತ್ತು ಲೋಕದೃಷ್ಟಿ ನಡುವಿನ ಸಂಬಂಧ ಪೂರ್ವನಿರ್ಧರಿತ ಮಿತಿಯನ್ನು ಕಲ್ಪಿಸುವುದಿಲ್ಲ ಮಾತ್ರವಲ್ಲ ಪರಸ್ಪರ ನಿಕಟವಾಗಿಯೂ ಇಲ್ಲ. ಧರ್ಮವು ದಿನನಿತ್ಯದ ಬದುಕನ್ನು ನಿರ್ವಹಿಸಲು ಅಗತ್ಯವಾದ ಮಾರ್ಗದರ್ಶಿ ಸೂತ್ರ ಅಥವಾ ನಿಯಮಗಳ ಒಂದು ಕಟ್ಟುಪಾಡು ಎಂದು ಭಾವಿಸುವುದು ತಪ್ಪು. ಅದಕ್ಕೆ ಅದರದೇ ಆದ ಮಹಾನ್ ಕಾರ್ಯಗಳಿವೆ.

ಉದಾಹರಣೆಗೆ ಧರ್ಮವು ಶತಮಾನಗಳಿಂದ ಹರಿದು ಬಂದ 'ಮನುಕುಲದ ಸಂಗ್ರಹಿತ ಅನುಭವಗಳ ಘನೀಕೃತ ರೂಪ'. ಹಾಗಾಗಿ ಅದು ಪ್ರಾಕೃತಿಕ ಲಯಗಳನ್ನು ಮಾನವ ಮೌಲ್ಯದೊಡನೆ ಮೇಳೈಸಿ ಸಮೃದ್ಧಗೊಳಿಸುತ್ತದೆ. ಅದು ಮಾನವ ಕಲ್ಯಾಣದೆಡೆಗೆ ಅಭಿಮುಖವಾಗುವಂತೆ ನೈಸರ್ಗಿಕ ಪ್ರಕ್ರಿಯೆಗಳನ್ನು ಮತ್ತು ವಿಷಯಗಳನ್ನು ನೈತಿಕವಾಗಿ ಅಣಿಗೊಳಿಸುತ್ತದೆ. ಧರ್ಮವು ವಿದ್ಯೆಯೆಲ್ಲ ಅಂತರ್ಗತವಾಗಿರುವ ಸಂಯಮಮೂಲ. ವಿದ್ಯೆಯು ಧರ್ಮದ ಬೆಳವಣಿಗೆಗೆ ಆಧಾರ'[14] ಎಂದು ಸುನಿಲ್ ಸಹಸ್ರಬುಧೆ ಧರ್ಮ ಮತ್ತು ಇತರ ಜ್ಞಾನಶಾಖೆಗಳಿಗಿರುವ ಸಂಬಂಧ ಎಂದು ಹೇಳುತ್ತಾರೆ. ಇನ್ನು ಯಂತ್ರನಾಗರೀಕತೆ ಹಾಗೂ ಧರ್ಮರಾಜಕಾರಣದ ನಡುವೆ ನಡೆದಿರುವ ಯುದ್ಧವು ಜಗತ್ತನ್ನು ಇಭ್ಭಾಗವಾಗಿಸಿದೆ. ಮೂರನೇ ಮಹಾ ಯುದ್ಧವೇನಾದರು ನಡೆಯುವುದಿದ್ದರೆ ಅದು ಈಗ ಸದ್ದಿರದೆ ಅಘೋಷಿತವಾಗಿ ನಡೆದಿದೆ. ದುರಂತವೆಂದರೆ ಇದು ಧರ್ಮಯುದ್ಧವಲ್ಲ. ಈ ಯುದ್ಧದಲ್ಲಿ ಎರಡು ಸತ್ಯಗಳು ಏಕಕಾಲದಲ್ಲಿ ಕೊಲೆಯಾಗುತ್ತಿದೆ. ಒಂದು ವಿಜ್ಞಾನ ಮತ್ತೊಂದು ದೇವರು. ಪ್ರತಿಪಾದಿಗಳಲ್ಲ ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಪ್ರತಿಯೊಬ್ಬ ಮನುಷ್ಯನೂ, ತಾನು ಯಾವ ಗುಂಪಿಗೆ ಸೇರಿದವನು ಎನ್ನುವ ಆಧಾರದ ಮೇಲೆ, ಇವೆರಡರಲ್ಲಿ ಒಂದು ತತ್ವವು ಸೋಲಲಿ ಎಂದು ಬಯಸುತ್ತಿದ್ದಾನೆ. ಮೂರ್ಖ ಯೋಚನೆ ಇದು; ಜ್ಞಾನಮಾರ್ಗದ ಒಂದು ಶಾಖೆ ಕುಸಿದರೆ ಮತ್ತೊಂದು ಶಾಖೆ ಉಳಿಯುವುದು ಸಾಧ್ಯವೇ?

ಯಂತ್ರ v/s ಧರ್ಮರಾಜಕಾರಣ:

ಧರ್ಮಸಂಕಟ ಎಂಬ ಪದವನ್ನು ಇಲ್ಲಿ ಎರಡು ಅರ್ಥಗಳಲ್ಲಿ ಬಳಸಲಾಗಿದೆ. ಧರ್ಮವು ಸಂಕಟದಲ್ಲಿದೆ ಎಂಬ ಸಾಮಾನ್ಯ ಅರ್ಥವೂ ಹೌದು. ಧರ್ಮದಬಗ್ಗೆ ವೈಜ್ಞಾನಿಕ ನಿಲುವು ತಾಳುವುದು ಸಂಕಟಕಾರಿ ಎಂಬ ವಿಶೇಷ ಅರ್ಥವೂ ಹೌದು. ಧರ್ಮಸಂಕಟವು ಎರಡು ರೀತಿಯದ್ದು.

1. ಧಾರ್ಮಿಕ ಸಂಸ್ಥೆಗಳಿಂದ, ಅರ್ಥಾತ್ ಕೋಮುವಾದ ಹಾಗೂ ಜಾತಿ ವ್ಯವಸ್ಥೆಯಿಂದ ಬರುವ ಸಂಕಟ.

2. ಯಂತ್ರನಾಗರೀಕತೆಯ ಅನೈತಿಕ ಪ್ರಪಂಚವು ತರುವ ಸಂಕಟ.

ಇವೆರಡೂ ಸಮಾನ ಸಂಕಟಗಳು. ಇವು ಪರಸ್ಪರರನ್ನು ಸೆಣಸುತ್ತಿವೆ. ಎಂದಮಾತ್ರಕ್ಕೆ ಇವುಗಳಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳಲ್ಲಿಕ್ಕೆ ಬರುವುದಿಲ್ಲ. ಹಾಗೆ ಮಾಡಿದರೆ ಅನಾಹುತವಾಗುತ್ತದೆ. ಎರಡನ್ನೂ ಏಕಕಾಲದಲ್ಲಿ ತಿರಸ್ಕರಿಸಬೇಕು. ಇಲ್ಲದಿದ್ದರೆ ಇತ್ತ ದೇವರೂ ಸಿಕ್ಕಲಾರ ಅತ್ತ ವೈಚಾರಿಕತೆಯೂ ಸಿಕ್ಕಲಾರದು. ಯಂತ್ರಗಳು ಹಾಗೂ ಧರ್ಮರಾಜಕಾರಣ ಇವೆರಡನ್ನೂ ಉಳಿಸಿಕೊಂಡು ದೇವರು ಹಾಗೂ ವಿಚಾರ ಇವೆರಡನ್ನು ಕಳೆದುಕೊಳ್ಳುವಂತ ಮನಸ್ಥಿತಿಯೇ ಕಲಿಯುಗದ ಅಂತ್ಯದ ಪ್ರಳಯದ ಸ್ಥಿತಿಯೇನೋ![15]

ವಿಜ್ಞಾನವನ್ನು ನೈತಿಕನೆಲೆಯಲ್ಲಿ ನೋಡುವುದು, ಧರ್ಮವನ್ನು ವೈಚಾರಿಕ ನೆಲೆಯಲ್ಲಿ ನೋಡುವುದು ಸುಲಭವಲ್ಲ. ಆದರೆ ಬೇರೆ ದಾರಿಯಿಲ್ಲ, ಒಂದರ್ಥದಲ್ಲಿ ಜನಾಂದೋಲನಗಳು ಜಾಗತಿಕವಾಗುವ ಕ್ರಮವು, ಕೇವಲ ನ್ಯಾಯ ಮತ್ತು ಸಮಾನತೆಗೆ ಸಂಬಂಧ ಪಟ್ಟಿರುವುದಿಲ್ಲ. ಮತ್ತು ಅದು ರಾಜಕೀಯ ಸ್ವಾಯುತ್ತತೆಗೆ ಕೂಡ ಸೀಮಿತವಾದದ್ದಾಗಿರುವುದಿಲ್ಲ. ಬದಲು ಅದು ಇನ್ನೊಂದು ಬೆಳವಣಿಗೆಯನ್ನು ಹುಟ್ಟು ಹಾಕುತ್ತದೆ. ಈ ಬೆಳವಣಿಗೆಯ ಕಾರಣದಿಂದಲೇ ಸ್ಥಳೀಯವಾದ ಧಾರ್ಮಿಕ ವಿಷಯವೊಂದು ರಾಷ್ಟ್ರೀಯವೂ ಜಾಗತಿಕವೂ ಆಗಿಬಿಡುತ್ತದೆ. ಉದಾಹರಣೆಗೆ: ಇದುವರೆಗೆ ಯಾರ ಗಮನಕ್ಕೂ ಬಾರದಿದ್ದ ಅಯೋಧ್ಯೆಯ ರಾಮಮಂದಿರ. ಒಮ್ಮೆಲೇ ಇಂಥ ಪ್ರಕ್ರಿಯೆಯ ಮೂಲಕ ಇಡೀ ದೇಶದ ವಿಷಯವಾಗಿ ಸಾಂಸ್ಕೃತಿಕ ರಾಜಕೀಯ ಆಂದೋಲನವನ್ನೇ ಸೃಷ್ಟಿಸಿಬಿಡುತ್ತದೆ. ಅಷ್ಟೇಅಲ್ಲ ವಿಶ್ವಹಿಂದೂ ಪರಿಷತ್ತನ್ನೂ ಹುಟ್ಟಿಸಿ ಜಾಗತಿಕ ಮಟ್ಟದಲ್ಲಿ ಹಿಂದೂರಾಷ್ಟ್ರದ ಒಂದು ಕಲ್ಪನೆಯನ್ನೇ ರೂಪಿಸಿಬಿಡುತ್ತದೆ. ಈ ಮೂಲಕ ಎಲ್ಲೋ ಮೂಲೆಯಲ್ಲಿ ತನ್ನ ಧಾರ್ಮಿಕ ವಿಧಿಗಳನ್ನು ಆಚರಿಸಿಕೊಳ್ಳುತ್ತಾ ಇದ್ದ ಒಂದು ಪ್ರದೇಶವು ಹಾಗಿರುವ ಹಂತದಿಂದ ಬೆಳೆದು ಜಗತ್ತಿನ ಎಲ್ಲರೂ ಆಕ್ರಮಣ ಮಾಡಬಹುದಾದ ಸಂಕೇತವಾಗಿ ಬೆಳೆದು ಬಿಡುತ್ತದೆ. ಈ ಸಂಕೇತಕೂಡಾ ಆಮೇಲೆ ಸಾಂಸ್ಕೃತಿಕ ಸಂಕೇತವಾಗಿ ಉಳಿಯುವುದಿಲ್ಲ. ಬದಲಾಗಿ ಸಂಸ್ಕೃತಿ ಮತ್ತು ಧರ್ಮದ ವ್ಯಾಪ್ತಿಯನ್ನು ರಾಜಕೀಯಕ್ಕೆ ವಿಸ್ತರಿಸಿ, ಆ ಮೂಲಕ ರಾಷ್ಟ್ರೀಯತೆಯ ಆಚರಣೆಗೂ ರಾಷ್ಟ್ರಪ್ರಭುತ್ವದ ಸ್ಥಾಪನೆಗೂ ಪೂರಕವಾದ ವಿಷಯವಾಗಿ ಬಿಡುತ್ತದೆ.

'ಹಿಂದೂ ರಾಷ್ಟ್ರವಾದ'ವೆಂಬುದು, ಹೀಗೆ ವಿದ್ಯುನ್ಮಾನ ಮಾಧ್ಯಮಗಳೂ ಸೇರಿದಂತೆ ಎಲ್ಲಾ ಮಾಧ್ಯಮಗಳನ್ನು ಬೆಳೆಸಿಕೊಂಡು ಬೆಳೆದು ಅಖಂಡ ಭಾರತದ ಮಾತ್ರವಲ್ಲ ಅಂತರರಾಷ್ಟ್ರೀಯ ರಾಜಕೀಯದ ವಸ್ತುವೂ ಆಗುವ ವಿಧಾನ ಇದು. ಇದರೊಂದಿಗೆ ಹೆಣೆದುಕೊಂಡಿರುವ ಮತ್ತೊಂದು ವಿಪರ್ಯಾಸವೆಂದರೆ ಆಂತರಿಕವಾಗಿ ಈ ಹಿಂದೂ ರಾಷ್ಟ್ರದ ಪರಿಕಲ್ಪನೆಯೂ ಮತ್ತು ಈ ಹಿಂದುತ್ವ ಮಾತನಾಡುವ ಸ್ವದೇಶಿಪ್ರಿಯರು ಒಂದು ಕಡೆಗೆ ಪರಂಪರೆ ಸಂಪ್ರದಾಯಗಳ ಬಗ್ಗೆ ಮಾತನಾಡುತ್ತಾರೆ. ಇನ್ನೊಂದೆಡೆ ಪಶ್ಚಿಮದತ್ತ ಮುಖಮಾಡಿ ಆಧುನೀಕತೆಯ ಸೌಲಭ್ಯಗಳನ್ನು ಎಲ್ಲಾ ರೀತಿಯಲ್ಲೂ ಬಳಸಿಕೊಳ್ಳುತ್ತಿರುತ್ತಾರೆ. ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಆರಂಭಿಸಿ ಜೈವಿಕ ತಂತ್ರಜ್ಞಾನ, ಜೆನೆಟಿಕ್ ಎಂಜಿನಿಯರಿಂಗ್ ಮತ್ತು ಅಂತರ್ಜಾಲ ಮೊದಲಾದವೆಲ್ಲವನ್ನೂ ಪ್ರೋತ್ಸಾಹಿಸುತ್ತಿರುತ್ತಾರೆ. ವೇದ ಉಪನಿಷತ್ತುಗಳನ್ನು ವ್ಯಾಖ್ಯಾನ ಮಾಡುವ ಮಠಗಳೇ ಇಲ್ಲಿ ಅಣುಭೌತಶಾಸ್ತ್ರವನ್ನೂ ಕೂಡ ನಿಸ್ಸಂಕೋಚವಾಗಿ ಮತ್ತು ಮುಜುಗರವಿಲ್ಲದೆ ಎತ್ತಿ ಹಿಡಿಯುತ್ತಿರುತ್ತವೆ. ಜಾಗತೀಕರಣದ ಬಳಕೆಯನ್ನು ಈ ರೀತಿ ಅಸಂಬದ್ಧವಾಗಿಕೂಡ ಮಾಡಬಹುದಾದ ವಿಪರ್ಯಾಸ ನಮ್ಮ ಮುಂದಿದೆ. ಈ ಅರ್ಥದಲ್ಲಿ ಜಾಗತೀಕರಣವು ವಿಭಿನ್ನ ನೆಲೆಗಳನ್ನೂ ಸಂಬಂಧವಿಲ್ಲದ ಕಾಲಘಟ್ಟಗಳನ್ನೂ ಮತ್ತು ಮೇಲ್ನೋಟಕ್ಕೆ ಪರಸ್ಪರ ಏಕಸೂತ್ರತೆಯಿಲ್ಲದ ಇಂಥ ಹಲವಾರು ವಿಷಯಗಳನ್ನೂ ಕೂಡ ಒಂದೇ ಕಡೆಯಲ್ಲಿ ಬೆರೆಸುತ್ತಿರುತ್ತದೆ. ಹೀಗೆ ಏಕಕಾಲದಲ್ಲಿ ಸಾಂಸ್ಕೃತಿಕವಾಗಿ ಸ್ವದೇಶಿಯೂ ಮತ್ತು ಆರ್ಥಿಕ ರಾಜಕೀಯವಾಗಿ ವಿದೇಶಿಯೂ ಆಗುವ ವೈಚಿತ್ರಗಳನ್ನು ಜಾಗತೀಕರಣವೇ ಉತ್ಪಾದಿಸುವುದನ್ನು ನಾವು ಮರೆಯುವಂತಿಲ್ಲ.[16]

ನೈತಿಕತೆಯೇ ಆದರ್ಶ ಎಂಬ ಪರಿಕಲ್ಪನೆ:

ಈ ಸಂದರ್ಭದಲ್ಲಿ ನೈತಿಕತೆಯೇ ಆದರ್ಶ ಎಂಬಂತೆ ಬದುಕಿನ ಮಹಾನ್ ಪುರುಷನನ್ನು ತಮ್ಮ ಅನುಕೂಲಕ್ಕೆ ತಕ್ಕಹಾಗೆ ರೂಪಿಸಿಕೊಳ್ಳುತ್ತಿರುವುದನ್ನು ನಾವಿಲ್ಲಿ ಗುರುತಿಸಬಹುದು. ರಾಮಭಕ್ತಿಯಿಂದ ಪ್ರೇರಿತಾರಾಗಿ ಹೋರಾಟಮಾಡುವಲ್ಲಿ ಬಲಪಂಥೀಯರು ಮೊದಲಿಗರಲ್ಲ. ಈ ಮೊದಲು ರಾಮನ ಹೆಸರಿನಲ್ಲಿ ನಡೆದಿವೆ. ಬಿಹಾರದ ಮೊದಲ ರೈತನಾಯಕ ಬಾಬಾರಾಮಚಂದ್ರ, ರಾಮನ ಹೆಸರಿನಲ್ಲಿ ರೈತಚಳುವಳಿ ಮಾಡಿದ್ದರು. ಅನಂತರದಲ್ಲಿ ಗಾಂಧೀಜಿ ಚಳುವಳಿಯನ್ನು ಕಟ್ಟಿದ್ದರು. ರಾಮ ನೈತಿಕತೆಯ ಆದರ್ಶ ಹೊತ್ತ ದೇವರು. ಅವನಲ್ಲಿ ನೈತಿಕ ನಾಯಕತ್ವದ ಗುಣಗಳಿವೆ. ಆದರೆ ಬಾಬಾ ರಾಮಚಂದ್ರ ಹಾಗೂ ಗಾಂಧೀಜಿಯವರ ವ್ಯಕ್ತಿತ್ವಕ್ಕೂ ಲೋಹ ಪುರಷನೆಂದೇ ಪ್ರಖ್ಯಾತರಾದ ಲಾಲ್‌ಕೃಷ್ಣ ಅಡ್ವಾಣಿಯವರ ವ್ಯಕ್ತಿತ್ವಕ್ಕೂ ನಡುವೆ ವ್ಯತ್ಯಾಸವಿದೆ. ರಾಮ ನಾಮದ ದುರ್ಬಳಕೆಯನ್ನು ತಡೆಯಬೇಕೆಂದರೆ ರಾಮನ ವ್ಯಕ್ತಿತ್ವದ ನಿಜವಾದ ಮಹತ್ವವನ್ನು ಅರಿಯುವ ಅಗತ್ಯವಿದೆ. ತನ್ನಬಗ್ಗೆ, ತನ್ನ ಪ್ರಿಯಜನರ ಬಗ್ಗೆ, ಯಾರೇ ಸಣ್ಣ ಮಾತಾಡಿದರೂ ರಾಮ ನೊಂದುಕೊಳ್ಳುತ್ತಾನೆ. ಸುತ್ತಲಿನ ಸಣ್ಣತನವನ್ನು ಸಹಿಸಲಾರ ಅವನು. ರಾಮನ ಸಾರ್ವಜನಿಕ ವ್ಯಕ್ತಿತ್ವ ಹಾಗೂ ಖಾಸಗೀಬದುಕಿನ ನಡುವೆ ಏಳುವ ಬಿರುಕುಗಳೇ ರಾಮಾಯಣವನ್ನು ಉದ್ದ ಬೆಳಸುವ ಸಂಗತಿಗಳು. ಈ ಬಿರುಕುಗಳೆಲ್ಲವೂ, ಅವನ ಸೂಕ್ಷ್ಮ ಪ್ರವೃತ್ತಿಯಿಂದಾಗಿ ಉಂಟಾಗುವ ಬಿರುಕುಗಳೇ ಹೌದು.[17]

ಈ ನಿಟ್ಟಿನಲ್ಲಿ ವೈದಿಕ ಧರ್ಮವು ಜಾತಿಪದ್ಧತಿ ಹಾಗೂ ಮಠಮಾನ್ಯಗಳನ್ನು ಎತ್ತಿ ಹಿಡಿಯಲು ರಾಮನನ್ನು ಬಳಸಿಕೊಂಡರೆ, ಅಡ್ವಾಣಿಯವರು ಅನ್ಯಧರ್ಮಿಯರ ಮೇಲೆ ಅಕ್ರಮಣ ನಡೆಸಲು ರಾಮನನ್ನು ಬಳಸಿಕೊಂಡರು. ರಮಾನಂದಸಾಗರ್ ಟಿ.ವಿ. ಸೀರಿಯಲ್ಲು ಸರಕು ಮಾರಾಟಕ್ಕೆ ರಾಮನನ್ನು ಬಳಸಿಕೊಂಡಿತು ಎಂದು ಪ್ರಸನ್ನಹೇಳುತ್ತಾರೆ. ಇಲ್ಲಿ ರಾಮನಂತಹ ನೈತಿಕ ಆದರ್ಶವುಳ್ಳ ವ್ಯಕ್ತಿಯನ್ನು ತಮ್ಮ ತಮ್ಮ ಅನುಕೂಲಕ್ಕೆ ತಕ್ಕಹಾಗೆ ತಮಗೆ ಹೇಗೆ ಬೇಕೋ ಹಾಗೆ ತಿರುಚಲ್ಪಟ್ಟಿರುವುದು ಸ್ವಾರ್ಥತೆಯ ಸಂಕೇತವಾಗಿ ಪರಿಗಣಿಸಲ್ಪಟ್ಟಿದೆ. ರಾಮ ಸಂಸಾರಸ್ಥ, ಅವಿಭಾಜ್ಯ ಕುಟುಂಬವೊಂದರ ಸದಸ್ಯ, ರೈತಾಪಿ ಕುಟುಂಬವೊಂದರಲ್ಲಿ ಇಂದಿಗೂ ಇರುವ ಪರಿಸ್ಥಿತಿ. ಬುದ್ಧನಂತೆ ಅವನು ಸಂಸಾರ ತ್ಯಾಗಮಾಡಲಿಲ್ಲ. ಮಹಾವೀರನಂತೆ ಸನ್ಯಾಸ ಸ್ವೀಕರಿಸಲಿಲ್ಲ ಅಥವಾ ಏಸುಕ್ರಿಸ್ತನಂತೆ 'ದೈವೀಕ ನಪುಂಸಕತ್ವ'ವನ್ನು ಧಾರಣೆ ಮಾಡಲಿಲ್ಲ. ಸಂಸಾರಸ್ಥರು ಅನುಭವಿಸುವ ಕಷ್ಟ ಕೋಟಲೆಗಳೆಲ್ಲವನ್ನೂ ರಾಮ ಅನುಭವಿಸಿದ. ಕೌಟುಂಬಿಕ ಕಲಹ, ಆಸ್ತಿಯ ಕಿತ್ತಾಟ, ದುರ್ಬಲತಂದೆ, ಸಣ್ಣವಯಸ್ಸಿನ ಮಲತಾಯಿಯ ಚಾಡಿಮಾತು, ಕುಹುಕ ಕುಚೋದ್ಯ... ಎಲ್ಲ ಅನುಭವಿಸುತ್ತಲೇ ಎಲ್ಲವನ್ನೂ ಮೀರುತ್ತ ನಡೆದ ರಾಮ. ರೈತಾಪಿ ಜನಗಳ ಪ್ರೀತಿಗಳಿಸಿರುವುದು ಈ ಕಾರಣಕ್ಕಾಗಿ. ಅವರದ್ದೇ ಪರಿಸ್ಥಿತಿಯಲ್ಲಿ ಅವರಿ ಸಾಧಿಸಲಾಗದ ದೊಡ್ಡತನವನ್ನು ರಾಮ ಸಾಧಿಸುತ್ತಾನೆ. ಸಾರ್ವಜನಿಕ ರಂಗದಲ್ಲಿ ಸೋಲರಿಯದ ರಾಮ ಸೀತೆ ಲಕ್ಷ್ಮಣರು ವೈಯಕ್ತಿಕ ಬದುಕಿನಲ್ಲಿ ಅಪಾರವಾದ ನೋವಿಗೆ ಗುರಿಯಾಗುತ್ತಾರೆ.[18]

ರಾಮನ ಸಂಸಾರಿಕತೆಯು ಅವನ ದೈವಿಕತೆಯ ಬಹು ಮುಖ್ಯ ಲಕ್ಷಣವಾಗಿದೆ. ರಾಮನ ಮೂರ್ತಿಯನ್ನು ನೀವು ಗಮನಿಸಿರಬಹುದು. ಅದು ಒಬ್ಬನ ಮೂರ್ತಿಯಲ್ಲ, ನಾಲ್ಕುಜನರ ಗುಂಪು ಅದು ರಾಮ, ಲಕ್ಷ್ಮಣ, ಸೀತೆ ಹಾಗೂ ಭಕ್ತ ಆಂಜನೇಯ ನಾಲ್ವರೂ ಸೇರಿದರೆ ಮಾತ್ರ ರಾಮನ ವ್ಯಕ್ತಿತ್ವ ಪರಿಪೂರ್ಣವಾಗುತ್ತದೆ. ಕ್ಯಾಲೆಂಡರ್ ಇರಲಿ, ಪಂಚಲೋಹದ ಮೂರ್ತಿಯಿರಲಿ ದೇವರ ಪಟವಿರಲಿ ಏನೇ ಇರಲಿ ರಾಮ ಸಂಸಾರಸ್ಥನಾಗಿಯೇ ದರ್ಶನನೀಡುವುದು ಮಾತ್ರವಲ್ಲ, ಸಂಪೂರ್ಣವಾಗಿ ನಿಮ್ಮನ್ನು ಎದುರಿಸಿನಿಂತು ದರ್ಶನ ನೀಡುವುದು, ಸೊಟ್ಟನಿಲ್ಲುವುದು ರಾಮನ ಗುಣವಲ್ಲ. ಅಡ್ವಾಣಿಯವರು ರಾಮನನ್ನು ಏಕಾಂಗಿಯಾಗಿಸಿದರು ಹಾಗೂ ಸೊಟ್ಟಗೆ ನಿಲ್ಲಿಸಿದರು. ಅಯೋಧ್ಯೆಯ ರಾಮಮಂದಿರ, ನ್ಯಾಸದ ಪೋಸ್ಟರುಗಳನ್ನು ಗಮನಿಸಿ! ರಾಮಜನ್ಮಭೂಮಿ ಚಳುವಳಿಯಲ್ಲಿ ಅಡ್ವಾಣಿಯವರು ಬಳಸಿದ ರಾಮ ರಾಮನಲ್ಲ; ಅಲ್ಲಿ ರಾಮ ಒಂಟಿಮೂರ್ತಿಯಾಗಿದ್ದ, ರೌದ್ರಾವತಾರತಾಳಿದ್ದ, ಸೊಟ್ಟನಿಂತಿದ್ದ ಹಾಗೂ ಬಿಲ್ಲನ್ನು ಹೆದೆಯೇರಿಸಿ ಬಾಬರನ ವಿರುದ್ಧ ದಂಡೆತ್ತಿನಿಂತಿದ್ದ. 'ಶಿಶುನಾಳಷರೀಫ'ರು ಹಾಡಿದ 'ಅಶುರಮುಹರ್‍ರಮ ಎರಡರ ಮಧ್ಯದಿ ನಾಶವಾಯ್ತು ಲಂಕಾದ್ರಿಪುರ' ಎಂಬ ಮಾತು ಶ್ರೀಲಂಕಾಗೆ ಮಾತ್ರವಲ್ಲ ನಮ್ಮದೇ ಸಮಕಾಲೀನ ರಾಜಕೀಯಕ್ಕೂ ಸಲ್ಲುತ್ತದೆ. ರಾಮ ಹಾಗೂ ಬಾಬರನ ನಡುವೆ ನಡೆದ ಸೈದ್ಧಾಂತಿಕ ಯುದ್ಧವು ಅತ್ಯಂತ ಭೀಕರ ದುರಂತವೆನಿಸಿಕೊಂಡಿದೆ. ಅಡ್ವಾಣಿಯವರು ಮಾಡಿದೆ ಎರಡನೆಯ ತಪ್ಪೆಂದರೆ, ಅಧಿಕಾರಕ್ಕೆ ಬರಲಿಕ್ಕೆ ರಾಮನ ಬಳಕೆ ಮಾಡಿದ್ದು, ಹಾಗೆ ನೋಡಿದರೆ ಮೂಲದಲ್ಲಿ ರಾಮ ಅಧಿಕಾರ ತ್ಯಾಗಮಾಡಿದವನು ಚಕ್ರವರ್ತಿಯ ಹಿರಿಯಮಗನಾದ್ದರಿಂದ ಅಧಿಕಾರವು ಸಹಜವಾಗಿ ಬಂದಿತ್ತು ಅವನಿಗೆ. ಅದನ್ನವನು ತ್ಯಾಗಮಾಡಿದನು.

ವನವಾಸದ ನಂತರ ಅಧಿಕಾರ ಸ್ವೀಕರಿಸಿದಾಗಲು, ವನವಾಸದಲ್ಲಿ ರೂಢಿಸಿಕೊಂಡ ಸರಳ ಜೀವನವನ್ನು ತ್ಯಜಿಸದೆ ಮುಂದುವರೆದವನು. ಇದು ಗಾಂಧೀಜಿಗೆ ತಿಳಿದಿತ್ತು ಹಾಗಾಗಿಯೇ ಕಾಂಗ್ರೇಸ್ಸಿಗೆ ಅಧಿಕಾರ ಪ್ರಾಪ್ತವಾದ ದಿನ ದೂರದ ಕಲ್ಕತ್ತೆಯಲ್ಲಿ ದಂಗೆಗೀಡಾದ ಸಂತ್ರಸ್ಥರ ನಡುವೆ ಉಪವಾಸ ಮಾಡುತ್ತಾ ಕಳೆದರು ಅವರು, ದೆಹಲಿಯ ಹತ್ತಿರವೂ ಸುಳಿಯಲಿಲ್ಲ; ರಾಮ ವಿಚಿತ್ರವಾದ ದೇವರು ಅವನು ಹಿಂದುಗಳನ್ನು ಸಂಘಟಿಸಲಿಲ್ಲ. ವೈರಾಗ್ಯ ಭೋದಿಸಲಿಲ್ಲ ಅಥವಾ ಕೃಷ್ಣನಂತೆ ಭಗವದ್ಗೀತೆಯನ್ನು ನುಡಿಯಲಿಲ್ಲ. ರಾಮ ಯಾವುದೇ ಉಪದೇಶವನ್ನು ನೀಡಲಿಲ್ಲ ಅಥವಾ ಸ್ವರ್ಗದ ಆಮೋದ ಪ್ರಮೋದಗಳಲ್ಲೂ ಮೈಮರೆಯಲಿಲ್ಲ. ತನ್ನಷ್ಟಕ್ಕೆ ಸರಳವಾದ ಹಾಗು ನೈತಿಕವಾದ ಬದುಕನ್ನು ಬದುಕುತ್ತ ಹೋದ ಇದೇ ಮೂಲರಾಮನ ಸಂದೇಶ. ಗಾಂಧೀಯು ಸಹ ಹೀಗೆಯೇ ಬದುಕಿದರು ಎಂಬುದು ನಮ್ಮೆಲ್ಲರಿಗೆ ತಿಳಿದಿರುವ ನಿಜಸಂಗತಿಯೂ ಹೌದು.

ಬಡವರ ಹೃದಯದಲ್ಲಿ ನೆಲೆಸಿರುವ ರಾಮ:

ರೈತಾಪಿವರ್ಗದ ಜನರು ರಾಮನನ್ನು ವಿಧಿವತ್ತಾಗಿ ಪೂಜಿಸುವುದಿಲ್ಲ ಆದರೆ ಆಗಾಗ ನೆನೆಯುತ್ತಾರೆ. ಸಂಸಾರವೆಂಬ ಜಂಜಡದಲ್ಲಿ ಸಿಲುಕಿ ನೋವುಂಡಾಗ, ಆಸ್ತಿಯ ಜಗಳವಾದಗ ಮನೆಮುರಿದಾಗ ಮಗಳುದಾರಿತಪ್ಪಿದಾಗ, ಮಗ ಹಠ ಮಾರಿಯಾದಗ ರಾಮನ ಆದರ್ಶವನ್ನು ನೆನೆದು ತಮ್ಮ ದೌರ್ಭಾಗ್ಯಕ್ಕಾಗಿ ಮರುಗುತ್ತಾರೆ. ಇವರು ರಾಮಲೀಲೆ ನಾಟಕ ಆಡುತ್ತಾರೆ, ಭಜನೆ, ಭಕ್ತಿಗೀತೆ ಹಾಡುತ್ತಾರೆ. ರಾಮನ ನಿಜವಾದ ನೆಲೆಯು ಬಡಗ್ರಾಮಸ್ಥರ ಹೃದಯವೇಸರಿ. ಹಾಗಾಗಿ ಗಾಂಧೀಜಿ ಹುಡುಕಿ ಹುಡುಕಿ ತನಗಾಗಿ ಆಯ್ದುಕೊಂಡದ್ದು ರೈತನ ಆಕಾರವನ್ನು ಅವರಿಗೆ ತಿಳಿದಿತ್ತು.[19] ರಾಮ ಒಂದೊಮ್ಮೆ ತನ್ನ ಹೃದಯದಲ್ಲಿ ನೆಲೆಸಬೇಕೆಂದಿದ್ದರೆ, ತನ್ನ ವ್ಯಕ್ತಿತ್ವವು ರಾಮನ ಆಶಯಕ್ಕೆ ಪೂರಕವಾಗಿರಬೇಕೆಂದು ಆದರೆ ಆಡ್ವಾಣಿಯವರು ಆಯ್ದುಕೊಂಡಿದ್ದು ರಾಮರಥವನ್ನು ಯಾನೆ ಮೆಟೊಡೋರಿಗೆ ಅಂಟಿಸಿದ ಟಿ.ವಿ.ಸಿರಿಯಲ್ ಮಾದರಿಯ ಕಟೌಟನ್ನು ರಾಮನು ರಥವೇರಿ ಪಯಣಿಸಿದ ಚಿತ್ರವನ್ನು ನಾನಂತೂ ಕಂಡಿಲ್ಲ ಎಂದು ಪ್ರಸನ್ನ ಅಡ್ವಾಣಿಯವರು ರಾಮನ ಹೆಸರನ್ನು ತಪ್ಪಾಗಿ ಬಳಕೆ ಮಾಡುತ್ತಿದ್ದಾರೆ ಎಂಬ ಅಂಶವನ್ನು ನಮ್ಮ ಮುಂದಿಡುತ್ತಾರೆ.

ಇನ್ನು ಧರ್ಮದ ಹರಡುವಿಕೆಯ ಸಂದರ್ಭಗಳಲ್ಲಿ ಉಂಟಾಗುವ ಯುದ್ಧ, ಮತಾಂತರ, ಹಿಂಸೆ ಎಲ್ಲದಕ್ಕೂ 'ಧರ್ಮಗಳ ಸಾಂಸ್ಕೃತಿಕ ಆಕಾರ'ವೇ ಕಾರಣ. ಆಕಾರವೆಂಬುದು ಧರ್ಮಕ್ಕೆ ಬಡಿದಿರುವ ಶಾಪವಾಗಿದೆ. ಪ್ರಾಯಶಃ ಬೌದ್ಧ ಧರ್ಮ ಮಾತ್ರವೇ ಆಕಾರದ ಬಲವಂತವನ್ನು ಕಡಿಮೆ ಮಾಡಿಕೊಂಡ ಧರ್ಮವಿರಬೇಕು. ಅದಕ್ಕೆ ಕಾರಣವೂ ಇದೆ. ದೇವರಿಗೆ ಆಕಾರ ನೀಡಲಿಕ್ಕೆ ಬುದ್ದ ನಿರಾಕರಿಸಿಬಿಟ್ಟ. ದೇವರು ಆಕಾರವುಳ್ಳವನೇ, ನಿರಾಕಾರನೆ, ಎಂದೆಲ್ಲಾ ಜಿಜ್ಞಾಸೆಗಳನ್ನು ಬದಿಗೆ ಸರಿಸಿ ಮನುಷ್ಯನನ್ನು ತನ್ನ ಧಾರ್ಮಿಕ ಹುಡುಕಾಟದ ಕೇಂದ್ರವಾಗಿಸಿಕೊಂಡ ವ್ಯಕ್ತಿ ಆತ.

ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಮಾಧ್ಯಮದ ಬಳಕೆಯ ಮೂಲಕ ನಮ್ಮವರನ್ನು ಮತ್ತು ಇತರರನ್ನು ನಮ್ಮ ದೇಶದಲ್ಲೇ ಸಂಘರ್ಷ ವೃದ್ಧಿಸಿಕೊಳ್ಳುವ ಕೆಲಸ ನಡೆದಿರುವುದು ನಾವು ಗಮನಿಸಬಹುದಾಗಿದೆ. ಉದಾಹರಣೆಗೆ ಬಾಬರೀ

ಮಸೀದಿಯ ನಾಶದ ಅನಂತರ ನಮ್ಮಲ್ಲಿಯ ಕೋಮುವಾದಿಗಳು ದೃಶ್ಯಮಾಧ್ಯಮಗಳನ್ನು ಪೂರ್ಣವಾಗಿ ಬಳಸಿಕೊಂಡು ಜಾಗತಿಕ ಮಟ್ಟದಲ್ಲಿ ಹಿಂದುತ್ವವನ್ನು, ಹಿಂದುರಾಷ್ಟ್ರವನ್ನು ಎಷ್ಟು ಚೆನ್ನಾಗಿ ಕಾಲ್ಪನಿಕ ಜಗತ್ತಿನಿಂದ ವಾಸ್ತವದ ಜಗತ್ತಿಗೆ ಕೊಂಡೊಯ್ದರು ಎಂಬ ಸಂಗತಿಯು ನಮಗೆ ಅನೇಕ ಪಾಠಗಳನ್ನು ಕಲಿಸುವಂತಿದೆ. ಕೋಮುವಾದವನ್ನು ಬಯಲು ಮಾಡಲು ಅನೇಕ ಪ್ರಜಾಪ್ರಭುತ್ವವಾದಿ ಸಂಸ್ಥೆಗಳೂ, ಸಂಘಟನೆಗಳೂ, ದೃಶ್ಯ ಮಾಧ್ಯಮವನ್ನು ಎಷ್ಟು ಚೆನ್ನಾಗಿ ಬಳಸಿದುವೋ, ಅಷ್ಟೇ ಚೆನ್ನಾಗಿ ಕೋಮುವಾದಿ ಶಕ್ತಿಗಳು ಇದನ್ನೇ ಬಳಸಿ ತಮ್ಮ ವಾಸ್ತವವನ್ನು ಜಗತ್ತಿಗೆ ಸಾರಿದರು. ಹೀಗೆ ಒಂದೇ ಮಾಧ್ಯಮವನ್ನು ಜಾಗತಿಕ ಮಟ್ಟದಲ್ಲಿ ವಿಭಿನ್ನ ಉದ್ದೇಶಗಳಿಗಾಗಿ ಬಳಸಬಹುದಾದ ವಿಪರ್ಯಾಸ ಮತ್ತು ಅಂಥ ವಿಪರ್ಯಾಸವನ್ನು ಎದುರಿಸುವ ತೊಡಕು – ಇದು ಇವತ್ತಿನ ಸಂದರ್ಭದಲ್ಲಿ ನಿಜವಾಗಿಯು ಸಂಕೀರ್ಣವಾದ ಸಂಗತಿಯಾಗಿದೆ.

ಇತ್ತ ಮಾರುಕಟ್ಟೆಗೆ ತಮ್ಮನ್ನ ತೆರೆದುಕೊಳ್ಳುತ್ತಲೇ, ಅತ್ತ ತಮ್ಮ ದೇಸಿತನ ಹಾಳಾಗುತ್ತಿರುವಬಗ್ಗೆ ಚಿಂತೆಮಾಡುತ್ತಿವೆ ದೇಸಿಸಮುದಾಯಗಳು. ಈ ಸಮುದಾಯಗಳ ಶ್ರೀಮಂತರು ಹಾಗೂ ಉದ್ದಿಮೆ ಪತಿಗಳು ಮಾತ್ರವೇ ಹೀಗಾಡುತ್ತಿಲ್ಲ ಬಡವರು ಸಹಿತ ಆಧುನಿಕರಾಗಲೆಂದು ಹಪಹಪಿಸುತ್ತಿದ್ದಾರೆ. ಒಂದುಕಡೆ, ಸಾಮಾಜಿಕ ಬದಲಾವಣೆ ಮತ್ತೊಂದುಕಡೆ, ಆರ್ಥಿಕ ಸಬಲೀಕರಣದ ಒತ್ತಾಸೆ. ಇವುಗಳ ಮಧ್ಯೆ 'ಸಾಂಸ್ಕೃತಿಕ ದಿವಾಳಿತನ'ದ ಭಯ ಈರೀತಿ ಎರಡು ರೀತಿಯ ಜಿಜ್ಞಾಸೆ ಮಧ್ಯೆ ನಾವಿಂದು ಸಿಲುಕಿದ್ದು ಆಯ್ಕೆಯ ಗೊಂದಲದಲ್ಲಿದ್ದೇವೆ ಎಂಬುದು ನಮಗೆ ತಿಳಿದು ಬರುತ್ತದೆ.

ಇಂದು ದೇಸಿ ಸುಮುದಾಯಗಳು ತಪ್ಪುತಪ್ಪಾಗಿ ಆಧುನಿಕವಾಗುತ್ತಿವೆ. ಮೈಯನ್ನು ಆಧುನೀಕತೆಗೆ ತೆರೆದುಕೊಂಡು, ತಲೆಯನ್ನು ಬಿಚ್ಚಿಟ್ಟುಕೊಳ್ಳುತ್ತಿದೆ. ತತ್ಪರಿಣಾಮವಾಗಿ ಇತ್ತ ನಗರ ಸಂಸ್ಕೃತಿ ಅತ್ತ ಧಾರ್ಮಿಕ ಮೂಢನಂಬಿಕೆ ಎಂಬ ಎರಡು ಅಂಶಗಳು ತದ್ವಿರುದ್ದವಾಗಿ ವ್ಯವಹರಿಸಬೇಕಿತ್ತು, ವೈಚಾರಿಕವಾಗಿ ಬದಲಾಗಬೇಕಿತ್ತು. ಸಾಂಸ್ಕೃತಿವಾಗಿ ತನ್ನ ತನ ಉಳಿಸಿಕೊಳ್ಳಬೇಕಿತ್ತು ಆದರೆ ಭಯಗ್ರಸ್ಥರಾಗಿ, ಸಮಾಜವಾದ ಸಮತೆ, ಮಹಿಳಾ ಸಬಲೀಕರಣ ಮತ್ತು ವೈಜ್ಞಾನಿಕ ಮನೋಭಾವದಂತಹ ಸಂಗತಿಗಳನ್ನು ಅನುಮಾನದಿಂದ ನೋಡುತ್ತಾ ಧಾರ್ಮಿಕ ರಾಜಕಾರಣದ ಬಲೆಗೆ ಬಿದ್ದಿವೆ. ಎಲ್ಲರೂ ಎಲ್ಲರ ಶತೃಗಳು ಜನತೆಯೇ ಜನತೆಯ ಶತೃ ಎಂಬುದು ಈ ಮೂಲಕ ನಮಗೆ ಗೋಚರವಾಗುತ್ತಿದೆ.

ಇಂತಹ ಸಂದರ್ಭದಲ್ಲಿ ಈ ನೆಲದ ಸಾಮಾಜಿಕ, ಆರ್ಥಿಕ ಬಹುತ್ವವನ್ನು ಕಡೆಗಣಿಸಿ ಒಪ್ಪಿಕೊಂಡ ಏಕೀಕೃತ ಅಭಿವೃದ್ದಿ ಯೋಜನೆ ಮತ್ತು ಇಂದಿನ ಜಾಗತೀಕರಣಗಳು ಪ್ರಜ್ಞೆಗಳನ್ನು ಹೆಚ್ಚು ಹೆಚ್ಚು ಸಂಕಟಕ್ಕೀಡು ಮಾಡುತ್ತಿರುದಂತೂ ಖಂಡಿತ. ಐರೋಪ್ಯ ಮಾದರಿಯ ಪ್ರಗತಿ ಸಿದ್ಧಾಂತ ಮನುಷ್ಯನ ಬೇರುಗಳನ್ನು ಬುಡ ಮೇಲು ಮಾಡುವ ಮೂಲಕ ಆತನನ್ನು ಸಾಂಸ್ಕೃತಿಕ ವಿಸ್ಮೃತಿಗೆ ಕೆಡವಿ ಪರೋಕ್ಷವಾಗಿ ಆತನನ್ನು ಮೂಲಭೂತವಾದಿಯಾಗಿ ಪರಿವರ್ತಿಸುತ್ತಿದೆಯೇ? ಎಂಬುದಕ್ಕೆ ಉತ್ತರ ಕಂಡುಕೊಳ್ಳಬೇಕಾಗಿದೆ.

ಈ ಅಧ್ಯಯನದ ಗ್ರಹೀತಗಳು :

- ಅಭಿವೃದ್ಧಿ ಮತ್ತು ಬಡತನದ ಸ್ವರೂಪ ಕಾಲದಿಂದ ಕಾಲಕ್ಕೆ ಹೇಗೆ ಭಿನ್ನ ಸ್ವರೂಪ ಪಡೆದುಕೊಳ್ಳುತ್ತಿದೆ. ಎಂಬುದರ ವಿವೇಚನೆ.
- ಬಂಡವಾಳಶಾಹಿ ವ್ಯವಸ್ಥೆ ಇತರ ವರ್ಗದ ಜನರನ್ನು ನಿಯಂತ್ರಿಸಲು ಮಾರುಕಟ್ಟೆಯನ್ನು ಸ್ಥಾಪಿಸಿಕೊಂಡಿದೆ ಅದರ ಮುಖ್ಯ ಉದ್ದೇಶವೇ ಸ್ವಾರ್ಥ ಮತ್ತು ಲಾಭಗಳಿಕೆಯಾಗಿದೆ ಅದನ್ನು ನಿಯಂತ್ರಿಸುವುದಕ್ಕೆ ನಾವು ಅಳವಡಿಸಿಕೊಳಗಳ್ಳಬೇಕಾದ ಮೌಲ್ಯಗಳು ಯಾವುವು ಎನ್ನುವುದನ್ನು ಚರ್ಚಿಸುತ್ತದೆ.
- ಧರ್ಮ ಮತ್ತು ದೇವರ ಬಗೆಗಿನ ಭಿನ್ನ ನಿಲುವುಗಳು ಕೃತಿಯಲ್ಲಿ ಹೇಗೆ ವ್ಯಕ್ತಗೊಂಡಿವೆ ಇದನ್ನು ಕೂಡ ಬಂಡವಾಳಶಾಹಿ ಪ್ರಭುತ್ವವು ತನ್ನ ಅಧಿಕಾರವನ್ನು ಸ್ಥಿರೀಕರಿಸಿಕೊಳ್ಳಲು ತನಗೆ ಪೂರಕವಾಗಿ ಬಳಸಿಕೊಳ್ಳುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ.
- ಧಾರ್ಮಿಕ ಅಂಧಶ್ರದ್ಧೆ ಮತೀಯ ಗಲಭೆಗೆ ಮೂಲಕಾರಣವಾಗುತ್ತಿದೆಯೇ ಎಂಬುದರ ಕುರಿತು ಚರ್ಚಿಸಲಾಗಿದೆ.
- ಜಾಗತೀಕರಣ ಪ್ರಕ್ರಿಯೆ ಒಂದು ವರ್ಗದ ಜನರಿಗೆ ಮಾತ್ರ ಅನುಕೂಲ ಮಾಡಿಕೊಡುತ್ತಿದ್ದು, ಕೂಲಿ ಕಾರ್ಮಿಕರನ್ನು ಕಡೆಗಣಿಸಲ್ಪಡುತ್ತಿದೆ ಎಂಬುದನ್ನು ಕುರಿತು ಈ ಅಧ್ಯಯನ ವಿಸ್ತರಿಸುತ್ತಾ ಹೋಗುತ್ತದೆ.

ಕೊನೆ ಟಿಪ್ಪಣಿ :

1. ಯಂತ್ರಗಳನ್ನು ಕಳಚೋಣ ಬನ್ನಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 15
2. ಅದೇ – ಪುಟ ಸಂಖ್ಯೆ 16
3. ಜಾಗತೀಕರಣ ಒಂದು ಸಮಗ್ರ ಮಂಥನ; ರಾಜೇಂದ್ರಚೆನ್ನಿ; ಸಂ; ಕರ್ನಾಟಕ ಸಾಹಿತ್ಯ ಅಕಾಡೆಮಿ; 2004; ಪುಟ ಸಂಖ್ಯೆ 58
4. ಯಂತ್ರಗಳನ್ನು ಕಳಚೋಣ ಬನ್ನಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 48
5. ಅದೇ – ಪುಟ ಸಂಖ್ಯೆ 77
6. ಅದೇ – ಪುಟ ಸಂಖ್ಯೆ 78
7. ಹೊಸ ಶತಮಾನಕ್ಕೆ ಹೊಸ ಪರಿಭಾಷೆ; ವಿನಯ್‌ಲಾಲ್ ಮತ್ತು ಆಶೀಶ್‌ನಂದಿ ಸಂಪಾದಿಸಿರುವ ಪರಿಭಾಷಾಕೋಶ; ಅಕ್ಷರ ಪ್ರಕಾಶನ; 2007 –ಪುಟ ಸಂಖ್ಯೆ 26
8. ಅದೇ – ಪುಟ ಸಂಖ್ಯೆ 27
9. ಜಾಗತೀಕರಣ ಒಂದು ಸಮಗ್ರ ಮಂಥನ; ರಾಜೇಂದ್ರಚೆನ್ನಿ; ಸಂ; ಕರ್ನಾಟಕ ಸಾಹಿತ್ಯ ಅಕಾಡೆಮಿ; 2004; ಪುಟ ಸಂಖ್ಯೆ 28
10. ಅದೇ – ಪುಟ ಸಂಖ್ಯೆ 175
11. ಯಂತ್ರಗಳನ್ನು ಕಳಚೋಣ ಬನ್ನಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 32
12. ಜಾಗತೀಕರಣ ಒಂದು ಸಮಗ್ರ ಮಂಥನ; ರಾಜೇಂದ್ರಚೆನ್ನಿ; ಸಂ; ಕರ್ನಾಟಕ ಸಾಹಿತ್ಯ ಅಕಾಡೆಮಿ; 2004; ಪುಟ ಸಂಖ್ಯೆ 35,36 ಮಿಶ್ರಿತ
13. ಯಂತ್ರಗಳನ್ನು ಕಳಚೋಣ ಬನ್ನಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 165
14. ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು; ಪ್ರೊ॥ ಸುನಿಲ್ ಸಹಸ್ರಬುಧೆ; ಕನ್ನಡಕ್ಕೆ ಅನುವಾದ ಕೆ.ವಿ. ಪುಟ್ಟಸ್ವಾಮಿ; ಪುಟ ಸಂಖ್ಯೆ 23
15. ಯಂತ್ರಗಳನ್ನು ಕಳಚೋಣ ಬನ್ನಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 165
16. ಜಾಗತೀಕರಣ ಒಂದು ಸಮಗ್ರ ಮಂಥನ; ರಾಜೇಂದ್ರಚೆನ್ನಿ; ಸಂ; ಕರ್ನಾಟಕ ಸಾಹಿತ್ಯ ಅಕಾಡೆಮಿ; 2004; ಪುಟ ಸಂಖ್ಯೆ 60
17. ಯಂತ್ರಗಳನ್ನು ಕಳಚೋಣ ಬನ್ನಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 171
18. ಅದೇ – ಪುಟ ಸಂಖ್ಯೆ 175
19. ಅದೇ – ಪುಟ ಸಂಖ್ಯೆ 176

ಅಧ್ಯಾಯ – 3

ಜೀವಪರಿಸರ ಮತ್ತು ಮಾನವ ಪರಿಸರದ ನಡುವಣ ಸಂಘರ್ಷ

ಮನುಷ್ಯ ಮತ್ತು ಜೀವ ಪರಿಸರದ ನಡುವೆ ಹಿಂದೆ ಅನ್ಯೋನ್ಯ ಸಂಬಂಧವಿತ್ತು. ಮಾನವ ಪ್ರಾಣಿ, ಪಕ್ಷಿ, ಗಿಡ, ಮರ, ಬೆಟ್ಟ, ಗುಡ್ಡ, ಕಾಡು ಕಣಿವೆಯೊಂದಿಗೆ ಬೆರೆತು ಹೊಂದಾಣಿಕೆಯಿಂದ, ಸಾಮರಸ್ಯತೆಯಿಂದ ಜೀವನ ಸಾಗಿಸುತ್ತಿದ್ದ ಆದರೆ ಇವತ್ತಿನ ದಿನಮಾನಗಳಲ್ಲಿ ಮನುಷ್ಯ ಪ್ರಕೃತಿಯನ್ನು ತನ್ನ ಮನಬಂದಂತೆ ಬಳಸಿಕೊಳ್ಳುತ್ತಿರುವುದರಿಂದ ಪ್ರಾಣಿ ಸಂಕುಲ, ಜೀವ ಸಂಕುಲಗಳು ತಮ್ಮ ನೆಲೆ ಕಳೆದುಕೊಳ್ಳುವ ಪರಿಸ್ಥಿತಿಯುಂಟಾಗಿದೆ. ಮನುಷ್ಯ ಪ್ರಾಣಿಗಳನ್ನು ದ್ವೇಷದ, ಅಸೂಯೆಯ ಮನೋಭಾವದಿಂದ ನೋಡುತ್ತಿದ್ದಾನೆ. ಅವುಗಳನ್ನು ಮೃತ್ಯುರೂಪಿಯೆಂದು ಪರಿಭಾವಿಸುತ್ತಿರುವುದರಿಂದಲೇ ಇವುಗಳ ನಡುವೆ ಸಂಘರ್ಷ ಏರ್ಪಡುತ್ತಿದೆ. ಈ ರೀತಿಯ ಸಂಘರ್ಷ ಉಂಟಾಗಲು ಕಾರಣವೆನೆಂಬುದನ್ನು ಹುಡುಕಿದಾಗ, ವೈಜ್ಞಾನಿಕ, ವೈಚಾರಿಕ ಅನ್ವೇಷಣೆಗಳು ಸರಿಯಾಗಿ ನಡೆಯದೆ ಇರುವುದೇ ಮೂಲ ಕಾರಣವಾಗಿದೆ.

ವಿಜ್ಞಾನವೆಂಬುದು ಭೌತಿಕ ಜಗತ್ತನ್ನು ಅರ್ಥ ಮಾಡಿಕೊಳ್ಳಲಿಕ್ಕಿರುವ ಮಹತ್ತರವಾದ ಜ್ಞಾನಶಾಖೆ. ಅದು ಮೂಢನಂಬಿಕೆ, ಕಂದಾಚಾರ, ರೋಗರುಜಿನ, ಮಾನಸಿಕಭ್ರಮೆ ಇತ್ಯಾದಿ ಹಲವು ಸಂಕಟಗಳನ್ನು ನಿವಾರಿಸಿದೆ. ಎಂದು ಕೆಲವರು ಹೇಳಿದರೆ ಮತ್ತೆ ಕೆಲವರು ವಿಜ್ಞಾನವು ಈ ಪಿಡುಗುಗಳನ್ನು ಇನ್ನೂ ಪರಿಹರಿಸಲಿಲ್ಲ ಎಂದು ಹೇಳುತ್ತಾರೆ. ಅದೇನೇ ಇರಲಿ, ವಿಜ್ಞಾನವೆಂದರೆ ವೈಚಾರಿಕತೆ, ಜ್ಞಾನಸಂಪತ್ತು ಮತ್ತು ಅಧಿಕಾರ ಎಂದು ಪರಿಗಣಿಸಲಾಗಿದೆ. ಇನ್ನೂ ಹಲವರು ಇವೆಲ್ಲವೂ ವಿಜ್ಞಾನವೇ ಸೃಷ್ಟಿಸಿದ ಸನ್ನಿವೇಶಗಳು ಅಥವಾ ಹಣೆಪಟ್ಟಿಗಳೆಂದು ನೋಡುತ್ತಾರೆ. ಹಾಗೆನೋಡಿದರೆ ಯಂತ್ರಗಳೂ ಸಹ ವಿಜ್ಞಾನದ ಕೊಡುಗೆಗಳು ಆದರೆ ಈ ಯಂತ್ರಗಳ ಕಾರ್ಯನಿರ್ವಹಣೆಯು ಪ್ರಕೃತಿಯ ಮೇಲೆ ಸಾಕಷ್ಟು ಪರಿಣಾಮವನ್ನು ಉಂಟುಮಾಡಿದೆ ಎಂದು ನಮ್ಮ ಅರಿವಿಗೆ ಬರುತ್ತಿದೆ. ಯಂತ್ರಗಳ ಹಿತ್ತಲ ಕಸವು ಕೊಳೆಯಲಾರದೆ, ಹೆಚ್ಚು ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತಿದ್ದು, ಸಾಕಷ್ಟು ಸಮಸ್ಯೆಯನ್ನು ತಂದೊಡ್ಡುತ್ತಿದೆ. ಪ್ರಾಣಿ–ಪಕ್ಷಿಗಳು ಹಾಕಿದ ಕಸವಾಗಿದ್ದರೆ, ಕೊಳತು ಗೊಬ್ಬರವಾಗಿ ಮರು ಬಳಕೆಯಾಗುತ್ತಿತ್ತು. ಆದರೆ ಯಂತ್ರಗಳ ಕಸವು ಕೊಳೆಯದೆ ಹಾಗೇ ಉಳಿದು ಮಾರ್ಪಡದೆ ಇದ್ದು, ಅದು ಭೌತಿಕ ತಿಪ್ಪೆಮಾತ್ರವಾಗಿರದೆ ನೈತಿಕ ತಿಪ್ಪೆಯೂ ಆಗಿ ಪರಿಣಮಿಸುತ್ತಿದೆ. ಇದು ನಮ್ಮ ಪರಿಸರ, ಸಂಸ್ಕೃತಿ, ಧರ್ಮ, ರಾಜಕಾರಣ, ಆರೋಗ್ಯ, ಆರ್ಥಿಕತೆ ಮತ್ತು ಕುಟುಂಬ ವ್ಯವಸ್ಥೆ ಅಷ್ಟೇ ಏಕೆ, ನಮ್ಮ ಆತ್ಮವನ್ನೇ ಕಲುಷಿತಗೊಳಿಸುತ್ತಿದೆ ಎಂದು ಪ್ರಸನ್ನ ವಿಜ್ಞಾನದ ಬಗೆಗಿನ ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾರೆ.

ಮೂಲತಃ, ಇದಕ್ಕೆ ಕಾರಣವೇನೆಂದರೆ ವಿಜ್ಞಾನವು ಸೀಮಿತ ಸತ್ಯಾನ್ವೇಷಣೆಯಲ್ಲಿ ತೊಡಗಿಕೊಂಡಿರುವುದು. ವಿಜ್ಞಾನವು ಎಲ್ಲವನ್ನು ಪ್ರಯೋಗಾಲಯದಲ್ಲಿಟ್ಟು ನೋಡಿ, ಒಂದು ಅಂಶವನ್ನು ಮಾತ್ರ ಕಂಡುಕೊಳ್ಳುವುದು.

ಅದು ತನ್ನದೇ ಆದ ಹೊಸ ಮೌಲ್ಯ, ಹೊಸ ಸಂಸ್ಕೃತಿ ಅಷ್ಟೇ ಏಕೆ, ಪುರಾಣವನ್ನು ಸಹ ಸೃಷ್ಟಿಸತೊಡಗಿದೆ. ಹಾಗೆಯೇ ಅದೇ ಅಂತಿಮ ಸತ್ಯ ಎಂದು ನಂಬುತ್ತದೆ. ಬಹಳ ಕಾಲ ಹಾಗೆಯೇ ಮುಂದುವರೆಯುತ್ತದೆ. ಅರ್ಥಾತ್; ಕಪ್ಪೆಯನ್ನು ಕುಯ್ದು ಜೀವವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ ಅಂದರೆ ಆಧುನಿಕ ತಂತ್ರಜ್ಞಾನ ಕಪ್ಪೆಯನ್ನು ಕುಯ್ದಾಗ ಸಾವು ಅರ್ಥವಾದೀತೇ ಹೊರತು ಬದುಕಲ್ಲ ಹಾಗಾಗಿ ಆಧುನಿಕ ವೈದ್ಯ ವಿಜ್ಞಾನವು ಸಾವನ್ನು ತಡಮಾಡುವಲ್ಲಿ ಯಶಸ್ವಿಯಾಗಿದೆ.[1] ಆದರೆ, ಆರೋಗ್ಯವನ್ನು ಹಿಂದಿರುಗಿಸಲು ಅಸಮರ್ಥವಾಗಿದೆ ಎಂಬುದು ಪ್ರಸನ್ನರವರ ಅಭಿಪ್ರಾಯ. ಹಾಗಾದರೆ ವಿಜ್ಞಾನ ಸೋತದ್ದು ಎಲ್ಲಿ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೊದಲು ಪ್ರಕೃತಿ ಮತ್ತು ವಿಜ್ಞಾನದ ನಡುವಿನ ಸಂಬಂಧ ಎಂತಹುದೆಂದು ತಿಳಿಯುವುದು ಸೂಕ್ತ.

ಪ್ರಕೃತಿಯ ಅಂತರ್ಲಯ ಮತ್ತು ಮೌಲ್ಯಗಳು:

ವಿಜ್ಞಾನಕ್ಕೂ, ನಿಸರ್ಗದ ಲಯಕ್ಕೂ ಇರುವ ಸಂಬಂಧದ ಮೂಲಕ ನೈತಿಕತೆ; ವಿಜ್ಞಾನದ ಜೊತೆ ಬೇರ್ಪಡಿಸಲಾಗದಷ್ಟು ನಿಕಟವಾದ ಸಂಬಂಧವನ್ನು ಹೊಂದಿದೆ. ಮಾನವರು ಮತ್ತು ಅವರ ಚಟುವಟಿಕೆಗಳನ್ನು ಒಳಗೊಂಡ ನಿಸರ್ಗದ ಎಲ್ಲಾ ಸಂಗತಿಗಳು ಮತ್ತು ಪ್ರಕ್ರಿಯೆಗಳು ಒಂದು ಯುಕ್ತ ಪ್ರಮಾಣದಲ್ಲಿ ಪರಸ್ಪರ ಸಂಬಂಧಗಳಾಗಿ ಹೆಣೆದುಕೊಂಡಿವೆ. ಸಂಬಂಧಗಳ ಈ ಯುಕ್ತಜಾಲದ ಚಲನಶೀಲಶಕ್ತಿಯೇ ನಿಸರ್ಗದ ಅಂತರ್ಲಯವಾಗಿದೆ. ಆಕಾಶಕಾಯಚಲನೆ, ದಿನನಿತ್ಯಸಂಭವಿಸುವ ಸೂರ್ಯಾಸ್ತ, ಸೂರ್ಯೋದಯ, ಸಸ್ಯಗಳ ಬೆಳವಣಿಗೆ ಮತ್ತು ಕೊಳೆಯುವಿಕೆ, ನದಿಯ ಚಲನೆ, ವನ್ಯಜೀವಿಗಳ ಬದುಕು, ರಾಜ್ಯ ಮತ್ತು ಸಮಾಜದ ರಚನೆ, ಮಾನವ ಸೃಜನಶೀಲ, ಕ್ರಿಯಾಶೀಲ ಚಟುವಟಿಕೆಗಳಾದ ಸಂಗೀತ, ಕೃಷಿ, ಕೈಗಾರಿಕೆ ಇತ್ಯಾದಿಗಳೆಲ್ಲದಕ್ಕೂ ತಮ್ಮದೇ ಆದ ಲಯಗಳಿದ್ದು. ಅವು ನಿಸರ್ಗದ ಅಖಂಡ ಲಯದ ಜೊತೆ ಮೇಳೈಸಿಕೊಂಡಿವೆ.[2] ಈ ಅಂತರ್ಲಯಗಳ ಅಖಂಡತ್ವಕ್ಕೆ ಸತ್ಯಂ ಶಿವಂ ಸುಂದರಂ ಎಂದು ಕರೆಯಬಹುದು ಆದರೆ ಈ ಲಯ ಸತ್ಯಕ್ಕೆ ಅನುಗುಣವಾಗಿಯೇ ಚಲಿಸುವ ಒಂದು ಗತಿತತ್ವ. ಈ ಸತ್ಯಕ್ಕೆ ಎರಡು ಕೇಂದ್ರಗಳಿವೆ ಎಂದು ಗಾಂಧೀಜಿ ಹೇಳುತ್ತಾರೆ. ಅವರು ಸತ್ಯವೇ ದೇವರು ಎಂದು ಮಾಡಿದ ಘೋಷಣೆ, ಮತ್ತೊಂದು ಸತ್ಯದಿಂದ ಸತ್ಯಕ್ಕೆ ಚಲಿಸುತ್ತೇನೆ ಎಂಬ ಹೇಳಿಕೆಗಳನ್ನು ಗಮನಿಸಿದಾಗ ಮೊದಲನೆಯದು ಬದಲಾಗದ್ದು, ಎರಡನೆಯದು ಕ್ಷಣಕ್ಷಣಕ್ಕೂ ಬದಲಾವಣೆಗೆ ಒಳಗಾಗುವಂಥಹುದು. ಇಂದು ವಿಜ್ಞಾನವು ಎರಡನೆಯ ಮಾದರಿಗೆ ಮಾನ್ಯತೆ ನೀಡಿದರೂ, ಸಹ ಕೆಲಕಾಲ ಜಡಸ್ಥಿತಿಯಲ್ಲಿರುವುದನ್ನು ನಾವು ಕಂಡಿದ್ದೇವೆ.

ಆಧುನಿಕ ವಿಜ್ಞಾನವು ನಿಸರ್ಗದ ಹರವು ಮತ್ತು ಅದರ ನಿತ್ಯಪರಿವರ್ತನಾಶೀಲ ವಾಸ್ತವಗಳು ಅನಂತ ಆಯಾಮಗಳನ್ನು ಒಳಗೊಂಡಿದೆ. ನಿಗಮನ (Deduction) ಪ್ರದಾನವಾದ ತರ್ಕವು ಸೃಷ್ಟಿಸುವ ಸವಕಳಿಯಿಂದ ಜಡವಾದಕ್ಕೆ ವಿರುದ್ದವಾಗಿ ನಿಸರ್ಗದ ಅನಂತ ಸಾಧ್ಯತೆಗಳಲ್ಲಿ ಶ್ರೀಮಂತಿಕೆಯಿದೆ, ಜೀವ ಸಂವೃದ್ದಿಯಿದೆ. ಈ ಜೀವ ಶ್ರೀಮಂತಿಕೆಯನ್ನು ಅತಿಯಾದ ವಾದ ಮತ್ತು ವಿಶ್ಲೇಷಣೆಗಳ ಮೂಲಕ ಗ್ರಹಿಸಲಾಗದು. ಅದಕ್ಕೆ ಜೀವಂತಿಕೆಯ ಪರಸ್ಪರ ಕ್ರಿಯೆ ಸಂವಾದದ ಮಾರ್ಗ ಅಗತ್ಯ. ಈ ರೀತಿಯ ಪ್ರಕ್ರಿಯೆ, ಸಂವಾದಗಳ ಮತ್ತು

ಅದರಿಂದ ಪಡೆಯುವ ತಿಳಿವಳಿಕೆಯನ್ನು ಬದುಕುವ ಸಮಾಜದ ಹುಡುಕಾಟದ ಮೇಲೆ ನಿರ್ಧಾರವಾಗುತ್ತದೆ.

ಆದ್ದರಿಂದಲೇ, ನಿಸರ್ಗದಲಯವನ್ನು ಉಲ್ಲಂಘಿಸುವ ವಿಜ್ಞಾನಗಳೆಲ್ಲ ಆಸುರಿವಿಜ್ಞಾನಗಳು. ಇವು ಮಾನವನ ಉದ್ಯಮಶೀಲ ಬದುಕನ್ನು ಪ್ರಮುಖವಾಗಿ ನಿಯಂತ್ರಿಸುವ ಮತ್ತು ಅಹಿಂಸೆಯನ್ನು ನಿರಾಕರಿಸುತ್ತಿವೆ. ಈ ರೀತಿ ಅಹಿಂಸೆಯ ಹಳಿ ತಪ್ಪಿಸುವುದು ಮತ್ತು ನಿಸರ್ಗದ ಲಯವನ್ನು ಭಂಗಪಡಿಸುವುದು ನಿಜಕ್ಕೂ ಸತ್ಯದ ಉಲ್ಲಂಘನೆಗೆ ಸಮ. ಈ ಅರ್ಥದಲ್ಲಿ ಆಧುನಿಕ ವಿಜ್ಞಾನವು ಆಸುರಿ ಹಾಗೂ ಸ್ವಾಭಾವಿಕವಾಗಿಯೇ ಹುಸಿಯಾದುದು.[3]

ಆಧುನಿಕ ವಿಜ್ಞಾನವು ರಾಕ್ಷಸಿ ಸ್ವರೂಪಿಯಾದುದು ಎಂಬುದನ್ನು ಎರಡು ನಿರ್ಧಿಷ್ಟ ವಿಧಾನಗಳಲ್ಲಿ ತಿಳಿಯಬಹುದಾಗಿದೆ. ಮೊದಲನೆಯದಾಗಿ ಆಧುನಿಕ ವಿಜ್ಞಾನವು ವಸ್ತುಗಳ ಕಾರ್ಯಪ್ರಮಾಣಗಳಲ್ಲಿ ಮತ್ತು ನಿಸರ್ಗದ ಪ್ರಕ್ರಿಯೆಗಳಲ್ಲಿ ನೈತಿಕತೆಗೆ ಅವಕಾಶವನ್ನು ನಿರಾಕರಿಸುವ ತತ್ವದ ಮೇಲೆ ನಿಂತಿದೆ. ಎರಡನೆಯದಾಗಿ, ವಿಜ್ಞಾನದ ತವರಾದ ಆಧುನಿಕ ಯುರೋಪಿಯನ್ ಸಮಾಜವಾದಿ ಸೃಷ್ಟಿಸಿರುವ ವಿಜ್ಞಾನವು ನಿಸರ್ಗಲಯಗಳನ್ನು ಛಿದ್ರಗೊಳಿಸುವಂಥ ಮತ್ತು ಪ್ರಕೃತಿ ಲಯವನ್ನು ಭಂಗಗೊಳಿಸುವ ಕಾರ್ಯ ವಸ್ತುಗಳ ಪ್ರಮಾಣ ಮತ್ತು ಪ್ರಕ್ರಿಯೆಗಳ ಸಂಗತಿಗೆ ಮತ್ತು ಅವುಗಳಿಂದ ಪ್ರಕಟಗೊಳ್ಳುವ ಜ್ಞಾನದ ತುಣುಕುಗಳನ್ನು ಮಾತ್ರ ಗುರುತಿಸುವಂತೆ ಮಾನವರನ್ನು ರೂಪಿಸುತ್ತದೆ.[4]

ವೈಚಾರಿಕತೆ ಹೊಂದಿದ, ವಿಜ್ಞಾನಕ್ಕಿರುವ ದೊಡ್ಡ ಮಿತಿ ಎಂದರೆ, ಸೂಕ್ತವಲ್ಲದ ತಂತ್ರಜ್ಞಾನ. ಜೀವ ಪರಿಸರನಾಶಿ, ಯುದ್ಧ ಮತ್ತು ಹಿಂಸೆ, ಕೇಂದ್ರೀಕರಣ, ಶ್ರೇಣಿಕೃತ ವ್ಯವಸ್ಥೆ, ಶೋಷಣೆ, ಸಂಕುಚಿತ ಭಾವನೆ ಮುಂತಾದುವು. ಆಧುನಿಕ ಜ್ಞಾನದಿಂದ ಹುಟ್ಟಿ ಉಲ್ಬಣಗೊಂಡ ಸಮಸ್ಯೆಗಳು ಪ್ರತಿಕ್ರಿಯೆಯಾಗಿ ಹರಳುಗಟ್ಟಿದೆ. ಅಂದರೆ ವಿಜ್ಞಾನವು ಸತ್ಯದ ಅನಾವರಣ ಮಾಡುವ ಭರದಲ್ಲಿ ವೈಜ್ಞಾನಿಕ ಮೌಢ್ಯತೆಯನ್ನು ಹುಟ್ಟುಹಾಕುತ್ತಿದೆ ಎಂದರ್ಥ. ಉದಾ:– ಫೇರ್‌ನೆಸ್ ಕ್ರೀಮುಗಳಿಂದ ಕೇವಲ ಏಳುದಿನಗಳಲ್ಲಿ ಕರಿಯಚರ್ಮವು ಬಿಳಿಯಾಗುತ್ತದೆ ಎಂಬ ಜಾಹೀರಾತಾಗಲಿ ಅಥವಾ Axe effectನ ಉದ್ರೇಕಕಾರಿ ಪರಿಮಳಕ್ಕೆ ಮಾರುಹೊಗುತ್ತಿರುವುದು ವೈಜ್ಞಾನಿಕ ಮೌಢ್ಯತೆಯಲ್ಲದೆ ಮತ್ತೇನು? ಬಹುರಾಷ್ಟ್ರೀಯ ಔಷಧಿ ಕಂಪನಿಗಳು ಬಳಸುವ ಕುತಂತ್ರಗಳಿಂದ, ಶಸ್ತ್ರಾಸ್ತ್ರ ತಯಾರಿಕರು ಬಳಸುವ ಕುತಂತ್ರಗಳಿಂದ, ಷೇರು ಮಾರುಕಟ್ಟೆ ಕುತಂತ್ರಗಳಿಂದ, ವೈಜ್ಞಾನಿಕ ವಿಶ್ಲೇಷಣೆಯ ದುರ್ಬಳಿಕೆಯಾಗುತ್ತಿದೆ. ಜೊತೆಗೆ ಸತ್ಯವನ್ನು ತಿರುಚಲಾಗುತ್ತದೆ. ಹಳೆಯ ಮೂಢನಂಬಿಕೆಗಳನ್ನು ಕನಿಷ್ಠಪಕ್ಷ ದುಡ್ಡು ಕೊಟ್ಟುಕೊಳ್ಳಬೇಕಿರಲಿಲ್ಲ. ಹೊಸ ಮೂಢನಂಬಿಕೆಯನ್ನು ಲಕ್ಷಾಂತರ ರೂಪಾಯಿ ಕೊಟ್ಟು ಕೊಳ್ಳುತ್ತಿದ್ದೇವೆ. ಇದು ಸರಕು ಸಂಸ್ಕೃತಿ ವಿಜ್ಞಾನ ಖಂಡಿತಾ ಅಲ್ಲ. ವಿಜ್ಞಾನದ ಮುಖವಾಡ ಹೊತ್ತ ಯಂತ್ರಗಳು ತಾನು ತಯಾರಿಸಿದ ವಸ್ತುವನ್ನು ಮಾರಾಟಮಾಡಲು ಅನುಸರಿಸುವ ತಂತ್ರವಿದು. ಮಾರುಕಟ್ಟೆಗಳು ಗ್ರಾಹಕರನ್ನು ತನ್ನತ್ತ ಸೆಳೆದುಕೊಳ್ಳುವ ರೀತಿಯಿದು. ಸರಕು ಸಂಸ್ಕೃತಿ, ಕೊಳ್ಳುಬಾಕ ಸಂಸ್ಕೃತಿ ನಗರೀಕರಣದ ಮತ್ತೊಂದು ಪ್ರಕ್ರಿಯೆಯಾಗಿ ತಮ್ಮ ಸ್ವರೂಪವನ್ನು ಬಿಚ್ಚಿಡುತ್ತಿವೆ.

ಇವತ್ತು ವಿದ್ಯುನ್ಮಾನ ಮಾಧ್ಯಮಗಳು ಇಂಥ ಒಂದು ಹೊಸ ಸಾಧ್ಯತೆಯನ್ನು ಸತ್ಯಗೊಳಿಸಿರುವ ಸಂಗತಿಯನ್ನು ನಾವು ಮರೆಯಬಾರದು ಎಂದು ಈ ವಾದ ಹೇಳುತ್ತದೆ. ಉದಾ:- ಎಲ್ಲೋಮೂಲೆಯಲ್ಲಿರುವ ಹೋರಾಟಗಾರರು ಅವರು ಕಾಡಿನಲ್ಲಿರುವ ತಮಿಳರಾಗಿರಬಹುದು, ಆದಿವಾಸಿಗಳಿರಬಹುದು, ದೂರ ಈಶಾನ್ಯದಲ್ಲಿರುವ ಜನರಿರಬಹುದು, ಅಥವಾ ಪರಿಸರವಾದಿಗಳಿರಬಹುದು ಅವರೆಲ್ಲರೂ ಈ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ತಮ್ಮ ಹೋರಾಟಗಳನ್ನು ಇಡಿಯ ಜಗತ್ತಿನ ಮುಂದೆ ಪ್ರಸ್ತುತಪಡಿಸಬಹುದಾದ ಅನುಕೂಲವನ್ನು ಜಾಗತೀಕರಣ ಒದಗಿಸಿದೆ.[5] ಹಾಗೆಯೇ ಆಧುನಿಕ ತಂತ್ರಜ್ಞಾನವು ತನ್ನದೇ ಆದ ತಂತ್ರವಿಧಾನ ಮತ್ತು ಪ್ರಕ್ರಿಯೆಯನ್ನು ಒಳಗೊಂಡಿದೆ. ಆದ ಕಾರಣ ಪ್ರಕೃತಿಯ ಕೆಲವು ವಿಶಿಷ್ಟ ಸ್ವರೂಪಗಳಲ್ಲಿ ತಂತ್ರಜ್ಞಾನದ ಮೂಲವಿದೆ. ಈ ವಿಶಿಷ್ಟ ಸ್ವರೂಪಗಳನ್ನು ನಿರ್ಧಿಷ್ಟ ವಿಧಾನದಲ್ಲಿ ವರ್ಧಿಸಿದರೆ ಅಥವಾ ಸಂಯೋಜಿಸಿದರೆ ಅವು ಕಾರ್ಯನಿರ್ವಹಣೆಯಲ್ಲಿ ಇನ್ನಷ್ಟು ದಕ್ಷತೆಯನ್ನು ಅಥವಾ ವಿಶೇಷಗುಣಗಳನ್ನು ಪಡೆದು ಮಾನವನನ್ನು ಮತ್ತಷ್ಟು ಸಶಕ್ತಗೊಳಿಸುತ್ತದೆ. ಕೃಷಿ, ಚರಕ, ನದಿಗಳಿಗೆ ಅಣೆಕಟ್ಟು ನಿರ್ಮಾಣ ಮತ್ತು ಕಬ್ಬಿಣದ ಅದಿರನ್ನು ಕರಗಿಸುವುದು ಇವೆಲ್ಲಾ ಇಂಥ ತಂತ್ರಜ್ಞಾನಕ್ಕೆ ದೃಷ್ಟಾಂತಗಳು ಎಂದು ಸುನಿಲ್ ಸಹಸ್ರಬುಧೆ (ಕನ್ನಡಕ್ಕೆ ಅನುವಾದ ಕೆ.ವಿ. ಪುಟ್ಟಸ್ವಾಮಿ) ಹೇಳಿದ ಮಾತನ್ನೇ ಪ್ರತಿಯೊಂದು ಸೃಷ್ಟಿಕ್ರಿಯೆಯ ಜೊತೆಜೊತೆಯೂ ವಿನಾಶದ ಪ್ರಕ್ರಿಯೆಯ ಸಾಧ್ಯತೆಯ ಬೀಜಗಳಿರುತ್ತದೆ. ಮಾನವ ಕಲ್ಯಾಣಕ್ಕಾಗಿ ನಿಸರ್ಗವನ್ನು ಉಪಯೋಗಿಸಬಹುದಾದರೆ ಅವನ ವಿನಾಶಕ್ಕೂ ಅದನ್ನು ಬಳಸಬಹುದು.[6] ಅಣುಬಾಂಬು ಇದಕ್ಕೊಂದು ಸ್ಪಷ್ಟ ಉದಾಹರಣೆ.

ಹಾಗೆಯೇ ಆಧುನಿಕ ತಂತ್ರಜ್ಞಾನವು ಮುಂದಿಟ್ಟಿರುವ ಅಂತರ್ಜಾಲ ಮತ್ತು ಇ-ಮೇಲ್ ಮೊದಲಾದುವುಗಳು ಪ್ರಯೋಜನದಬಗ್ಗೆ ನಾವು ಎಷ್ಟೇ ಮಾತನಾಡಿದರು ಅವೆಲ್ಲಾ ಮೂಲಭೂತವಾಗಿ ಕಾರ್ಪೋರೇಟ್ ಪ್ರಪಂಚದ ಅಸ್ತ್ರಗಳೆಂಬುದನ್ನು ನಾವು ಮರೆಯಬಾರದು. ಜೊತೆಗೆ ಅಂತರ್ಜಾಲ ಮತ್ತು ಇ-ಮೇಲ್‌ಗಳನ್ನು ಕ್ರಮೇಣ ಉಪಭೋಗ ಸಂಸ್ಕೃತಿಗೆ ಸೀಮಿತಗೊಳಿಸುವ ಕಾರ್ಪೋರೇಟ್ ಪ್ರಪಂಚದ ತಂತ್ರವನ್ನು ಕೂಡ ನಾವು ಅರಿಯಬೇಕಾದ ಅಗತ್ಯವಿದೆ. ಮೊದ ಮೊದಲು ಜನಸಮುದಾಯಕ್ಕೆ 'ಮುಕ್ತಮಾಹಿತಿ' ಮತ್ತು ಪ್ರಜಾಪ್ರಭುತ್ವದ ವಿಚಾರಗಳನ್ನು ತಲುಪಿಸುವ ತಂತ್ರಜ್ಞಾನಗಳೆಂದು ಕಾಣಿಸಿಕೊಂಡ ಈ ಮಾಧ್ಯಮಗಳು ಹೇಗೆ ಕ್ರಮೇಣ ಬಂಡವಾಳಶಾಹಿಯ ಹಿಡಿತಕ್ಕೆ ಬರುತ್ತವೆಂಬುದನ್ನು ಹಲವಾರು ಅಧ್ಯಯನಗಳು ಈಗಾಗಲೇ ವಿವರವಾಗಿ ದಾಖಲಿಸಿವೆ. ಗ್ರಾಹಕ ಸಂಸ್ಕೃತಿಯನ್ನು ಅಂದರೆ ಇ-ಕಾಮರ್ಸ್, ಇ-ಶಾಪಿಂಗ್, ಸ್ಟಾಕ್ಸ್ ಮತ್ತು ಷೇರನ್ನು ಅಂತರ್ಜಾಲದಲ್ಲಿ ಕೊಳ್ಳುವುದೇ ಮೊದಲಾದಂಥ ವ್ಯವಹಾರಗಳನ್ನು ಮಾತ್ರ ಪ್ರೋತ್ಸಾಹಿಸುವ ಈ ಎಲ್ಲ ತಂತ್ರಜ್ಞಾನಗಳು ಕೊನೆಗೂ ಜನ ಸಮುದಾಯವನ್ನು ಬಂಡವಾಳಶಾಹಿ ಪ್ರಪಂಚದಲ್ಲಿಯೇ ಕಟ್ಟಿಹಾಕಿಬಿಡುತ್ತವೆ ಎಂಬುದನ್ನು ವಿವರವಾಗಿ ದಿ ಗ್ಲೋಬಲ್ ಮೀಡಿಯಾ ಎಂಬ ಪಠ್ಯದಲ್ಲಿ ಎಡ್ವರ್ಡ್ ಎಸ್ ಹರ್ಮನ್ ಮತ್ತು ರಾಬರ್ಟ್‌ಮ್ಯಾಕ್‌ಚಸ್ನೆ ನಮ್ಮ ಮುಂದಿಟ್ಟಿದ್ದಾರೆ ಎಂದು ಮನು ಚಕ್ರವರ್ತಿ ತಮ್ಮ ಜಾಗತೀಕರಣ ಮತ್ತು ಭಾರತ ;ಸೈದ್ಧಾಂತಿಕ ನೆಲೆಗಳು ಹಾಗೂ ಐತಿಹಾಸಿಕ ವಿಪರ್ಯಾಸ ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ.

ಬಹುತೇಕ ಪರಿಸರದ ಬಿಕ್ಕಟ್ಟುಕೂಡ ಇವತ್ತು ತೀರ್ವವಾಗಿ ಸಾಮಾನ್ಯ ಜನರು ಕೂಡ ಅದರ ಪರಿಣಾಮವನ್ನು ಎದುರಿಸುವ ಪರಿಸ್ಥಿತಿಗಳು ನಿರ್ಮಾಣವಾಗಿದೆ. ಅದರಲ್ಲೂ, ಮುಖ್ಯವಾಗಿ ತಜ್ಞರು ಹೇಳೋ ಪ್ರಕಾರ ಹಸಿರು ಚಪ್ಪರದ ನಿರ್ಮಾಣ ಓರ್ಝೋನ್ ಪದರದ ನಾಶ, ಆಮ್ಲಮಳೆ ಮತ್ತು ನಮ್ಮ ಕುಡಿಯುವ ನೀರು ಕಲುಷಿತವಾಗಿರುವುದು ಜೀವ ವೈವಿಧ್ಯಗಳ ನಾಶ. ಬಿಸಿನೀರು ಪ್ರವಾಹ ಇತ್ಯಾದಿ ಅದರ ಜೊತೆಗೆ ನಗರೀಕರಣ ಹಾಗೂ ಪರಿಸರ ಜೀರ್ಣಿಸಿಕೊಳ್ಳಲಾಗದಂತಹ ವಸ್ತುಗಳು, ಪ್ಲಾಸ್ಟಿಕ್‌ನಂಥದ್ದು ಈರೀತಿ ಅನೇಕ ವಿಧಗಳಲ್ಲಿ ಇವತ್ತು ಭೂಮಿ ಪರಿಸರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಮುಖ್ಯವಾಗಿ ಕಲುಷಿತಗೊಂಡಿರುವ ಈ ಭೂಮಿಯ ಪರಿಸರವನ್ನು ತಿಳಿ ಮಾಡಬೇಕಾದಂತಹ, ನಿರ್ಮಲಗೊಳಿಸಬೇಕಾದಂತಹ ಅರಣ್ಯದ ಸಂಖ್ಯೆಗಾತ್ರ ಕಡಿಮೆಯಾಗುತ್ತಾ ಇದೆ. ಎಂದರೆ ಅದಕ್ಕೆ ಆಧುನಿಕ ತಂತ್ರಜ್ಞಾನದ ಅತಿಯಾದ ದುರುಪಯೋಗ ಎಂದರೂ ತಪ್ಪಾಗಲಾರದು. ಈಗ ಇವುಗಳೆಲ್ಲವನ್ನು ನಾನು ವಿವರವಾಗಿ ಚರ್ಚೆಮಾಡದೆ, ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತೇನೆ. ಉದಾಹರಣೆಗೆ, ಈಗ ಹಸಿರು ಚಪ್ಪರ ನಿರ್ಮಾಣ Greenhouse effect ಇದು ಎಷ್ಟರ ಮಟ್ಟಿಗೆ ಪರಿಣಾಮ ಬೀರುತ್ತಾಇದೆ. ಭೂಮಿಯ ಶಾಖ ದಿನೇ ದಿನೇ ಹೆಚ್ಚುತ್ತಾಇದೆ. ಈ ರೀತಿ ಶಾಖ ಹೆಚ್ಚುವುದರಿಂದ ಭೂಮಿಯ ದೃವಪ್ರದೇಶದಲ್ಲಿ ಇರತಕ್ಕಂಥ ಮಂಜುಕರಗಿ ಸಮುದ್ರದಲ್ಲಿ ನೀರಿನಮಟ್ಟ ಜಾಸ್ತಿ ಆಗಿ ಅನೇಕ ದ್ವೀಪಗಳು ಮುಳುಗಡೆ ಆಗುವ ಸಂದರ್ಭ ಇದೆ ಇದರ ಮೂಲಕ ಇನ್ನೂ ಬೇರೆ ಬೇರೆ ಪರಿಸರದ ವೈಪರಿತ್ಯಗಳು, ಮಳೆಮಾರುತಗಳಲ್ಲಿ ಬದಲಾವಣೆ ಉಂಟಾಗಿವೆ. ಅದರ ಜೊತೆಗೆ ಬಿಸಿನೀರಿನ ಪ್ರವಾಹ ಇದು ಮುಂಚೆ ಹತ್ತಿಪ್ಪತ್ತು ವರ್ಷಗಳಿಗೆ ಒಮ್ಮೆ ಕಾಣಿಸಿಕೊಂಡು ಹೆಚ್ಚುದಿನ ಮುಂದುವರೀತಾ ಬಿರುಗಾಳಿಗೆ ಮತ್ತು ಮಳೆಯ ಮಾರುತಗಳಲ್ಲಿ ವ್ಯತ್ಯಾಸಗಳನ್ನು ಮಾಡುತ್ತಾ ಅಕಾಲಿಕ ಮಳೆಗಳಿಗೆ ಕಾರಣ ಆಯಿತು. ಓರ್ಝೋನ್ ಪದರ ಹರಿದಿರೋದು ಅಥವಾ ತೆಳು ಆಗಿರುವುದು ಇದಕ್ಕೆ ಕಾರಣ CFC ಮತ್ತು ಮಿಥೇನ್ ಈ ರೀತಿಯ ಆಮ್ಲಗಳು ಇದಕ್ಕೆ ಕಾರಣ ಎಂದು ಕಲ್ಕುಳಿ ವಿಠ್ಠಲ ಹೆಗಡೆ ಹೇಳುತ್ತಾರೆ.[7]

ಹಾಗೆ ನೋಡಿದರೆ, ಅಮೇರಿಕಾಗಿಂತ ವ್ಯಾಪಾರ ಹೆಚ್ಚಾಗಿ ನಡೆಯುವುದು ಭಾರತ ಮತ್ತು ಚೀನ ಈ ದೇಶಗಳಲ್ಲಿ, ಹೀಗಾಗಿ CFC ಅಥವಾ AC ಕಂಪನಿಗಳಲ್ಲಾ ಇಲ್ಲಿಗೆ shift ಮಾಡಿದ್ದಾರೆ. ಇದರ ಪರಿಣಾಮವಾಗಿ ಇವತ್ತು ಶೇಕಡ 70ರಷ್ಟು ನೀರು ಇದ್ದರೂ ಕುಡಿಯುವ ನೀರು ಕಡಿಮೆ. ಕುಡಿಯುವ ನೀರು ಇರೋದು ಒಂದು ಕೋಳಿ ಮಟ್ಟೆಯಲ್ಲಿ ಒಂದು ಸಣ್ಣ ಹನಿ ಕುಡಿಯುವ ನೀರು ಅಥವಾ ಸಿಹಿನೀರು ಅದೂಕೂಡ ಇಂದು ಎಲ್ಲೆಲ್ಲೋ ಮಂಜಾಗಿ ಸರೋವರದಲ್ಲಿ ಸಿಕ್ತಾಇದೆ. ನಮಗೆ ಸಿಗುತ್ತಾ ಇರುವುದು ಬಹಳ ಕಡಿಮೆ. ಆ ನೀರನ್ನು ಶೇಕಡಾ 75ರಷ್ಟು ಕಲುಷಿತ ಮಾಡಿದ್ದೇವೆ ಮತ್ತು ಜೀವ ವೈವಿಧ್ಯಗಳು ಗಂಟೆಗೆರಡು ಜೀವಿಗಳಂತೆ ಮಾಯ ಆಗ್ತಿದೆ ಅಂತ ಹೇಳುತ್ತಾರೆ ತಜ್ಞರು. ಈರೀತಿ ಅನೇಕ ವಾದಗಳು ಇದೆ. ಇದರ ಜೊತೆಗೆ ಜನಸಂಖ್ಯೆ ಏನು ಒಪ್ಪಿಸುತ್ತಿದ್ದಾರೆ ಇದರ ಮೂಲಕ ಅಂದರೆ ಈ ಜಲ terminator ಅಂದರೆ ವಿನಾಶಕಾರಿ ಪ್ರಭೇದ. ಈ ಮನುಷ್ಯನಿಂದ ಬಹಳ ಹಾನಿಯಾಗಿದೆ ಬಿಕ್ಕಟ್ಟು ಬಂದಿದೆ. ಇದು ಎಷ್ಟರ ಮಟ್ಟಿಗೆ ಸತ್ಯ ಅಥವಾ ಎಲ್ಲಾ ಪಾಪಗಳಿಗೆ ನಾವೇ ಹೊಣೇನಾ? ಎಷ್ಟೆಷ್ಟು ಕಾರಣರು ನಾವು? ಅಥವಾ ಇತ್ತೀಚೆಗೆ ಬಂದಂತಹ ಈ ಬಂಡವಾಳಶಾಹಿ ಧೋರಣೆ, ಅದರ

ಪ್ರತಾಪಗಳು, ಸಾಮ್ರಾಜ್ಯಶಾಹಿ ಧೋರಣೆಗಳು ಅಥವಾ ಜಾಗತೀಕರಣದ ಅಂಶಗಳು ಕಾರಣವಾ ಎಂಬುದನ್ನು ನಾವು ನೋಡಬೇಕಾಗಿದೆ.[8]

ಈ ಅಂಶಗಳನ್ನು ಅವಲೋಕಿಸಿದಾಗ ಈ ಎಲ್ಲಾ ರೀತಿಯ ಪರಿವರ್ತನೆಗೆ ಎಲ್ಲೋ ಒಂದು ರೀತಿಯಲ್ಲಿ ಯಂತ್ರನಾಗರೀಕತೆಯೇ ಮೂಲಕಾರಣ ಮತ್ತು ಅದು ತನ್ನದೇ ಆದ ಸಾಂಸ್ಕೃತಿಕ ಆಯಾಮವನ್ನು ಹೊಂದಿರುವುದೇ ಆಗಿದೆ. ಆಧುನಿಕ ವಿಜ್ಞಾನವು ಯಂತ್ರ ನಾಗರೀಕತೆಯ ತುಣುಕೆ ಆಗಿದ್ದು ಪ್ರಕೃತಿಯನ್ನು ಮೀರಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದೆ. ಈ ಮಹತ್ವಾಕಾಂಕ್ಷೆಯೇ ದುರಂತಮಯವಾಗಿದೆ. ಹಾಗೂ ತನ್ನದೇ ಆದ ನಿರ್ದಿಷ್ಟ ಸಾಂಸ್ಕೃತಿಕ ರೂಪವನ್ನು ಪಡೆದಿದೆ ಅಷ್ಟೇ! ಇದನ್ನು ಪ್ರತಿ ಸಂಸ್ಕೃತಿ ಎಂತಲೂ ಕರೆಯಬಹುದಾಗಿದ್ದು, ಪ್ರತಿ ಸಂಸ್ಕೃತಿಯೂ ಹೊರಹಾಕುವ ರೂಪಕಗಳು, ಪ್ರತಿಮೆಗಳು, ಭಾಷಾಶೈಲಿ, ಸಂಗೀತಶೈಲಿ, ಫ್ಯಾಷನ್ ಇತ್ಯಾದಿ ಎಲ್ಲವೂ ಪ್ರತಿಕ್ರಿಯಾತ್ಮಕವಾಗಿವೆ, ಅಸಹಜವಾಗಿವೆ, ಅನಿರೀಕ್ಷಿತವಾಗಿವೆ, ಬಂಡುಕೋರವಾಗಿರುತ್ತವೆ. ಕುರೂಪವೇ ಪ್ರತಿ ಸಂಸ್ಕೃತಿಯ ರೂಪ ಎಂಬುದನ್ನು ನಿಜವೆಂದು ನಂಬಬೇಕಾಗಿದೆ.[9] ಉದಾ:- ಈವರೆಗೆ ನರಕವನ್ನು ಚಿತ್ರಿಸಲಿಕ್ಕೆ ಬಳಸಲಾಗುತ್ತಿದ್ದ ಪ್ರತಿಮೆಯೊಂದು ಈಗ ಸಂಗೀತ ಸಿ.ಡಿ.ಯ ಮೇಲ್ಕವಚವಾಗಿದೆ. ಇವತ್ತಿನ ಜನಪ್ರಿಯ ಇಂಗ್ಲೀಷ್ ಬ್ರಾಂಡೊಂದರ ಹೆಸರು Iron maiden ಎಂದಿದೆ. ಐರನ್‌ಮೇಡನ್ ಎಂದರೆ ಕಬ್ಬಿಣದ ಕನ್ಯೆ ಎಂದು ಪುರಾಣಕಾಲದ ಅಥವಾ ಮೇರಿ, ಕನ್ನಿಕಾಪರಮೇಶ್ವರಿ ಸ್ಥಾನವನ್ನು ಈಗ ಕಬ್ಬಿಣದ ಕನ್ಯೆಯರು ಆಕ್ರಮಿಸಿಕೊಂಡಿದ್ದಾರೆ. ಅರ್ಥಾತ್ ಮುಂದುವರೆದ ಭಾಗವಾಗಿ ಅಭಿವೃದ್ಧಿಯ ಸಂಕೇತವಾಗಿ ಯಂತ್ರಗಳನ್ನು ಅಂದರೆ ಯಂತ್ರಜ್ಞಾನದ ಬಳಕೆಯೇ ಪ್ರತಿಸಂಸ್ಕೃತಿಯ ರೂಪವಾಗಿ, ಪ್ರತಿಭಟನೆಯ ಸ್ವರೂಪ ಪಡೆದಿರಬಹುದೇ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಅವಶ್ಯಕ.

ಇಂದಿನ ಯುವಕರು ಧರಿಸುವ ಟೀ ಶರ್ಟಿನಮೇಲೆ ಇರುವ ಮೂಳೆಗಳು, ರಕ್ತಮಾಂಸದ ಕುರುಹುಗಳು ಹಿಂದಿನ ವ್ಯವಸ್ಥೆಯ ಬಗ್ಗೆ ಪ್ರತಿರೋಧ ವ್ಯಕ್ತಪಡಿಸುವುದು ಈ ರೀತಿ ನಮಗೆ ಗೋಚರವಾಗುತ್ತಿದೆಯೇ? ಏತಿ ಎಂದರೆ ಪ್ರೇತಿಯೆನ್ನುವುದು ಪ್ರತಿಸಂಸ್ಕೃತಿಯ ಅರ್ಥ ಎಂದ ಹಾಗಾಯಿತು. ಇದು ವಿಜ್ಞಾನವೇ ಕಲಿಸಿಕೊಟ್ಟ ಪಾಠವಿದು. ಇದರಿಂದ ತೊಂದರೆಯಾಗುತ್ತಿರುವುದು, ಹಾನಿಯುಂಟಾಗುತ್ತಿರುವುದು ಮಾತ್ರ ಪರಿಸರಕ್ಕೆ[10] ಯಂತ್ರಗಳ ಜೋಡಣೆಯಲ್ಲಿ ಮುಂದಾದ ನಮ್ಮ ವಿಜ್ಞಾನಿಗಳೇ ಇಂದು ಆತಂಕಕ್ಕೆ ಒಳಗಾಗಿದ್ದಾರೆ. ಕಾರಣ ಭೂಕಂಪ, ಸುನಾಮಿಯಂತಹ ಘಟನೆಗಳು ಜರುಗುತ್ತಿರುವುದು ಹವಾಮಾನದ ವೈಪರಿತ್ಯದಿಂದಾಗಿಯೇ ಎಂದು ಅವರಿಗೂ ಸಹ ಮನನವಾಗ ತೊಡಗಿದೆ.

ಕಳೆದ ನಾಲ್ಕು ವರ್ಷಗಳ ಹಿಂದೆ ಎಲ್ನಿನೋ effect ಆದಾಗ ಪ್ರಳಯದ ಬಗ್ಗೆ ನಾರಾಯಣಸ್ವಾಮಿ ಎನ್ನುವ ಒಬ್ಬ ಸಾಯಿಬಾಬಾ ಭಕ್ತ ಅವರು ಇರುವ ಜಾಗ ಬಿಟ್ಟು ಉಳಿದದ್ದೆಲ್ಲಾ ಭೂಮಿ ಪ್ರಳಯ ಆಗುವುದೆಂದು ಬರೆದಿದ್ದರು. ಇನ್ನೇನು ಸದ್ಯದಲ್ಲೇ ಪ್ರಳಯ ಆಗಬಹುದು ಎಂದಿದ್ದರು ಅದಿರಲಿ ನಾವು ಪರಿಸರಕ್ಕೆ ಮುಖ್ಯವಾದ, ಅಗತ್ಯವಾದ ಕಾಡಿನ ನಾಶ ಎಷ್ಟು? ಮತ್ತು ಯಾರಿಂದ ಆಗಿದೆ ಎಂದು ಯೋಚಿಸಿದರೆ ಇದಕ್ಕೆ ಕಾರಣ ಮತ್ತು ಯಾರದು ಹೆಚ್ಚುಪಾಲು ಅಂತ ಸ್ಪಷ್ಟವಾಗುತ್ತದೆ. ನಾವು ಭಾರತದ ಕಾಡುಗಳನ್ನು ನೋಡಿದರೆ ಮನುಷ್ಯನ

ಅವಧಿಯ ಮೂರು ನಿಮಿಷಗಳನ್ನು ಗಣನೆಗೆ ತೆಗೆದುಕೊಂಡರೆ ಬ್ರಿಟಿಷರು ಈ ದೇಶಕ್ಕೆ ಬರುವವರೆಗೆ ಭೂಮಿ ಅಥವಾ ಮನುಷ್ಯ ಹುಟ್ಟಿ ಮನುಷ್ಯ ಕಾಡನ್ನು ನಾಶಮಾಡಿದ್ದನೋ ಅಷ್ಟು ಕಾಡನ್ನು ಬ್ರಿಟಿಷರು ಕೇವಲ ನೂರು ವರ್ಷಗಳಲ್ಲಿ ನಾಶಮಾಡಿದ್ದಾರೆ.[11] ಉದಾ:- ಅಸ್ಸಾಮಿನ ಕಾಡುಗಳನ್ನೇ ತೆಗೆದುಕೊಳ್ಳಿ. ರಸ್ತೆಮಾಡುವ ಉದ್ದೇಶದಿಂದ ಅಲ್ಲಿನ ಕಾಡನ್ನು ಕಡಿದು ರೈಲ್ವೆಮಾಡುವ ಸಲುವಾಗಿ ಅಲ್ಲಿನಮರಗಳನ್ನು ಬಳಸಿಕೊಂಡರು. ಉತ್ತರಾಂಚಲದ ಪರಿಸ್ಥಿತಿಯೂ ಸಹ ಇದೆ. ಉತ್ತರಾಂಚಲದಲ್ಲಿ ಕಡಿದು ಉರುಳಿಸಿದ ಸ್ಮಶಾನಯಾತ್ರೆ ಕಳೆದ ಶತಮಾನದಲ್ಲಿ ಅಲ್ಲಿ ನಡೆದ ವೃಕ್ಷಗಳ ಮಾರಣಹೋಮದ ಅರಿವಾಗದೇ ಇರದು. ಮನುಷ್ಯ ಹುಟ್ಟಿ 1939ನೆಯ ವರ್ಷದ ವರೆಗು ಒಟ್ಟು ಎಷ್ಟು ಲೋಹಗಳನ್ನು ಭೂಮಿಯಿಂದ ಬಳಸಿದ್ದನೋ, 1939ರಿಂದ 1980ರವರೆಗೆ ಅದಕ್ಕಿಂತ ಹೆಚ್ಚುಲೋಹವನ್ನು ಬಳಸಿರುವುದು ಗಣಿಗಾರಿಕೆಗೋಸ್ಕರ. ಇದಕ್ಕಾಗಿ ಎಷ್ಟು ಪ್ರಮಾಣದ ಕಾಡು ನಾಶವಾಗಿದೆ? ಅದರಿಂದ ಜನರಲ್ಲಿ ದುರಾಸೆ ಹೆಚ್ಚಾಗಿದೆ ಅಥವಾ ಜನರು ಹೋದಲ್ಲಿ ಯಾವುದನ್ನು ಬಿಡೋದಿಲ್ಲ ಅಂತ ವಾದ ಮಾಡಿದರೆ ಏನು ಹೇಳಿದಹಾಗಾಯಿತು? ಇದು ನಮ್ಮ ಸಂಸ್ಕೃತಿಯಲ್ಲ. ನಮ್ಮ ಸಂಸ್ಕೃತಿ ಅಂದರೆ ಕಾಡು, ಕಾಡುಪ್ರಾಣಿಗಳು ಅವುಗಳೊಟ್ಟಿಗೆ ನಾವು ಬದುಕುವಂತಹ ಸಹಬಾಳ್ವೆಯೇ ಸಂಸ್ಕೃತಿ.[12]

ಅಂತೆಯೇ ಹಿಂದಿನ ಕಾಲದಲ್ಲಿ ಪ್ರಾಣಿಗಳನ್ನು ದೈವಸ್ವರೂಪಿಯಾಗಿ ಕಾಣುತ್ತಿದ್ದ ಮನುಷ್ಯ, ದೇವರಸ್ವರೂಪ, ಮೀನು, ಆಮೆ, ಹಂದಿ, ಸಿಂಹ ಅನಂತರ ಮಾನವರೂಪಪಡೆದುಕೊಂಡ. ರಾಮಾಯಣಯುದ್ಧವನ್ನು ಗಮನಿಸಿರಿ! ಲಂಕೆಯ ಯುದ್ಧದಲ್ಲಿ ನೀತಿಪರವಾಗಿ ಹೋರಾಡುವವರು ಪ್ರಾಣಿಗಳು. ರಾವಣನಪರವಾಗಿ ಹೋರಾಡುವವರು ಶಸ್ತ್ರಧಾರಿ ಯೋಧರು. ಜಗತ್ತಿನ ಎಲ್ಲಾ ಸಂಸ್ಕೃತಿಗಳ ಎಲ್ಲ ಮಹಾಕಾವ್ಯದಲ್ಲೂ ಪ್ರಾಣಿ ಮತ್ತು ಮನುಷ್ಯನ ಸಖ್ಯ ಚಿತ್ರಿತವಾಗಿದೆ. ಆದರೆ ಇಂದು ಪ್ರಾಣಿಗಳ ದ್ವೇಷ ಸಾಧನೆಗಾಗಿ ಜನಪ್ರಿಯ ಸಿನಿಮಾಗಳಲ್ಲಿ ಮತ್ತೆ ಮತ್ತೆ 'ಅನಕೊಂಡ' ಎಂಬ ಹೆಬ್ಬಾವು ಇಡೀ ಮನುಷ್ಯಕುಲವನ್ನೇ ನಾಶಮಾಡಿಬಿಡುತ್ತದೆ ಎಂದು ತಿಳಿಸಲಾಗುತ್ತಿದೆ. ಇದೂ ಸಹ ಒಂದರ್ಥದಲ್ಲಿ ಪ್ರತಿಸಂಸ್ಕೃತಿಯ ಕುರುಹೇ. ಪ್ರಕೃತಿಯನ್ನು ಶತೃಭಾವದಿಂದ ಕಾಣುವ ಕ್ರಮ. ಆದರೆ ಅನಕೊಂಡ ಸಾವಿನಂಚಿನ ಸ್ಥಿತಿಯಲ್ಲಿರುವ ಬಡಪಾಯಿ ಜೀವಿ ಎಂಬ ಸತ್ಯ ಎಷ್ಟು ಜನಕ್ಕೆ ತಾನೆ ತಿಳಿದಿದೆ. ಹೀಗೆಯೇ ತಿಮಿಂಗಿಲ, ಹಕ್ಕಿ, ಚೇಳು, ಜೇಡ, ಓತಿಕೇತ, ಇತ್ಯಾದಿ ಪ್ರಾಣಿಸಂಕುಲವು ನಿರ್ನಾಮಗೊಳ್ಳುತ್ತಿರುವುದಕ್ಕೆ ಈ ರೀತಿಯ ತಪ್ಪುತಿಳುವಳಿಕೆಯೇ ಮೂಲಕಾರಣವಾಗಿದೆ ಎಂದು ಪ್ರಸನ್ನ ದೃಢ ನಿಲುವಿನಿಂದ ಹೇಳುತ್ತಾರೆ.[13]

ಇವತ್ತು ಮನುಷ್ಯರು ಹೋದಲೆಲ್ಲಾ ಹಾಳು ಮಾಡುತ್ತಿದ್ದಾರೆ ಎನ್ನುವ ವಾದ ಇದೆ. ಅದುಕೂಡ ಜಾಗತೀಕರಣದಿಂದ ಹಾಗೂ 90ನೇ ಇಸವಿಯಿಂದ ಇದು ಇನ್ನೂ ಹೆಚ್ಚು ತೀವ್ರವಾಗಿದೆ ಎಂಬ ವಾದ ಕೂಡ ಬಂದಿದೆ. ಆದರೆ ಇದರ ಹಿನ್ನಲೆಯಲ್ಲಿ ಇಷ್ಟೆಲ್ಲಾ ಕಾರಣಗಳಿವೆ. ಈಗ ನಾವು ಕೂಡ ತುಂಗಭದ್ರ ಉಳಿಸಿ ಅಥವಾ ಕುದುರೆಮುಖ ರಾಷ್ಟ್ರೀಯ ಉದ್ಯಾನ ರದ್ದುಪಡಿಸಿ ಎಂಬ ಚಳುವಳಿ ಮಾಡುತ್ತ ಇದ್ದೇವೆ. ಆದರೆ ಇದಕ್ಕೆ ವಿರುದ್ದವಾಗಿ ಕೆಲವರು ರಾಷ್ಟ್ರೀಯ ಉದ್ಯಾನವನ ಆಗಲೇಬೇಕು ಏಕೆಂದರೆ ಭೂಮಿ ಹೆಚ್ಚುಕಾಲ ಉಳಿಯುವುದಿಲ್ಲ. ಕುದುರೆಮುಖ

ಗಣಿಗಾರಿಕೆ ಅಂದರೆ ನಮ್ಮ ಸಂಪತ್ತನ್ನು ಬಳಸಿಕೊಳ್ಳುವುದು ಮಾತ್ರವೇ ಅಥವಾ ಅದರ ಲಾಭ ನಷ್ಟಗಳೆಷ್ಟು? ಕಳೆದ 33ವರ್ಷಗಳಿಂದ ಸುಮಾರು 700 ದಶಲಕ್ಷ ಟನ್ ಕಬ್ಬಿಣವನ್ನು ತೆಗೆದು ಕುದುರೆಮುಖ ಕಂಪನಿ ವಿದೇಶಕ್ಕೆ ಮಾರಟ ಮಾಡಿದೆ. ನಮ್ಮ ದೇಶದವರಿಗೆ ಒಂದು ಕೆ.ಜಿ. ಕಬ್ಬಿಣಸಹ ಸಿಕ್ಕಿಲ್ಲ. ನಾವು ಕೊಳ್ಳುವಹಾಗೆ 50ರಿಂದ 100 ರೂಪಾಯಿ ಲಾಭಕ್ಕೆ ಮಾರುತ್ತಲೂ ಇಲ್ಲ. ಜಾಸ್ತಿಜಾಗವನ್ನು ಆಗಲೇ ಕುದುರೆಮುಖ ಕಂಪನಿ ಆಗಲೇ ಶಾಶ್ವತವಾಗಿ ನಾಶಮಾಡಿದೆ. ಭದ್ರನದಿಗೆ ಅಷ್ಟು ನೀರಿನ ಹರಿಯುವಿಕೆ ಶಾಶ್ವತವಾಗಿ ಕಡಿಮೆಯಾಗಿದೆ. ಅವರು ತೆಗೆದ ಗಣಿಗಾರಿಕೆಯಿಂದ ತೆಗೆದ ಮಣ್ಣು ಕೊಚ್ಚಿಕೊಂಡು ಬಂದು ಭದ್ರಾನದಿಯಲ್ಲಿ ಹೂಳು ತುಂಬಿ ಅದರಲ್ಲಿ ಮೀನು ಇಲ್ಲದ ಹಾಗೆ ಜೀವಂತಿಕೆ ಕಳೆದುಕೊಂಡಿರುವುದು ದುರಂತದ ಸಂಗತಿ.[14]

ನ್ಯಾಷನಲ್ ಪಾರ್ಕ್ ಪರಿಸರ ಸಂರಕ್ಷಣೆ ಯೋಜನೆಯೇ ಕುದುರೆಮುಖ ಕಂಪನಿ ನಮ್ಮ ಅಭಿವೃದ್ಧಿಯ ಯೋಜನೆಯೇ ಅಥವಾ ಪಬ್ಲಿಕ್ ಲಿಮಿಟೆಡ್ ಕಂಪನಿಯೇ ಎಂಬ ಪ್ರಶ್ನೆಗಳನ್ನು ನಮ್ಮ ಚಳುವಳಿಗಳು ಎತ್ತುತ್ತವೆ. ಮುಖ್ಯವಾಗಿ ಕುದುರೆಮುಖ ಗಣಿಗಾರಿಕೆಯಿಂದ ಪರಿಸರಕ್ಕೆ ಆಗುವ ಹಾನಿಯಹಾಗೆ ಜನರಿಗೆ ಹಾನಿಯಾದ ಹಾಗೆ, ನೇರವಾಗಿ ತುಂಗಭದ್ರ ನದಿಯನ್ನು ನಂಬಿರುವ ಜನಕ್ಕೆ ಆಗುವ ತೊಂದರೆಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಜನಪರ ಚಳುವಳಿಯನ್ನಾಗಿ ಮಾಡುತ್ತಿದ್ದೇವೆ. ಚಳುವಳಿಗಳು ಪರಿಸರದ ವಿಷಯಗಳಿಗೆ ಸೀಮಿತವಾಗಿದ್ದರೆ ಇಷ್ಟಕ್ಕೆ ಅದರ ಬಗ್ಗೆ ಯಾರು ಆತಂಕಕ್ಕೊಳಗಾಗುವುದಿಲ್ಲ. ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಚಳುವಳಿಗೆ ಮೇಧಾ ಪಾಟ್ಕರ್ ಬರುತ್ತಾರೆ ಅದಕ್ಕೆ ಹೊಸ ಶಕ್ತಿ ಸಿಗುತ್ತದೆ ಎನ್ನುವ ಸಂದರ್ಭದಲ್ಲಿ ಶೃಂಗೇರಿಯಲ್ಲಿ ಭಜರಂಗದಳದವರಿಗೆ ಇದರ ಪ್ರಚಾರವನ್ನು ತೆಗೆದುಕೊಂಡು ಏನಾದರೂ ಮಾಡಬೇಕೆಂಬ ಯೋಚನೆಯಿಂದ ಅವರು ಚಳುವಳಿಯನ್ನು ದಿಕ್ಕು ತಪ್ಪಿಸುವುದಕ್ಕೆ ಪ್ರಯತ್ನ ಪಟ್ಟರು. ಇದುಕೂಡ ಕೋಮುವಾದದ ಸೃಷ್ಟಿಯಾಗಿದೆ. ಕೋಮುವಾದ ಹಾಗೂ ಜಾಗತೀಕರಣಕ್ಕೂ ನೇರವಾದ ಸಂಬಂಧ ಇದೆ. ಇವೆರಡಕ್ಕೂ ಜನಪರ ಚಳುವಳಿಗಳನ್ನು ಬಗ್ಗು ಬಡಿಯುವುದೇ ಅವರ ಉದ್ದೇಶವಾಗಿದೆ ಕುದುರೆಮುಖ ಗಣಿಗಾರಿಕೆಯನ್ನು ಏಕೆ ವಿರೋಧಿಸಬೇಕು? ನಮ್ಮ ಪರಿಸರದಲ್ಲಿರುವ ಸಂಪನ್ಮೂಲಗಳನ್ನು ನಾವು ಗಳಿಸಿಕೊಳ್ಳಬಾರದೇ ಎಂಬ ಪ್ರಶ್ನೆ ಎದುರಾಗುತ್ತದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನ ರದ್ದು ಪಡಿಸುವಿಕೆಯನ್ನೇ ಗಮನಿಸಿದಾಗ ಅರಣ್ಯ ಇಲಾಖೆಯ ಮೂಲ ಉದ್ದೇಶವೇನು? ಯಾವ ಕಾರಣಕ್ಕಾಗಿ ಅವು ಹುಟ್ಟಿಕೊಂಡವು ಎಂದು ಅವಲೋಕಿಸಬೇಕಾಗುತ್ತದೆ. ಹಾಗೆ ನೋಡಿದರೆ ಅರಣ್ಯ ಇಲಾಖೆ ಹುಟ್ಟಿದ್ದೇ ಅರಣ್ಯ ಕಡಿಯುವುದಕ್ಕೆ ಅರಣ್ಯ ಇಲಾಖೆ ರೈತರು ಹಾಗೂ ಮೂಲನಿವಾಸಿಗಳ ಕೈಗಳಿಂದ ಕಿತ್ತುಕೊಳ್ಳುವುದಕ್ಕೆ ಹುಟ್ಟಿಕೊಂಡಿದ್ದು. ಬ್ರಿಟಿಷರ ಕಾಲದಲ್ಲೇ ಅದನ್ನು ರಾಜರಿಗೆ ಶಿಕಾರಿ ಮಾಡುವುದಕ್ಕೋಸ್ಕರ reserve forest ಎಂದು ಮಾಡಿದ್ದರು ಮತ್ತು ಇಲ್ಲಿದ್ದ ಮರಗಳನ್ನು ಕಡಿಯಲ್ಲಿಕ್ಕೆ. ಭಗವತಿ ಅರಣ್ಯ ನೋಡಿದರೆ ಅರಣ್ಯ ಇಲಾಖೆ ಎಷ್ಟರ ಮಟ್ಟಿಗೆ ನಾಶಮಾಡಿದೆ ಎಂದರೆ ಅಲ್ಲೆಲ್ಲಾ ಗುತ್ತಿಗಳಿವೆ. ಸ್ವಾತಂತ್ರಪೂರ್ವದಲ್ಲಿ ಇಂಡಿಯನ್ ರೈಲ್ವೆ ಸ್ಲೀಪರ್ಸ್‌ಗೆ ಕೋಲುಗಳಿಗೋಸ್ಕರ ಕಡಿತಾ ಬಂದರು. ಅನಂತರ ಅರಣ್ಯ ಇಲಾಖೆಬಲಿಗೆ

ಮರಗಳನ್ನು ಎಲೆಕ್ಟ್ರಿಕ್ ಪೋಲ್‌ಗಳಿಗಾಗಿ ಕಡಿದು ಒಟ್ಟು ಹಾಕಿತ್ತು. ಅದು ಬಹಳ ಗಟ್ಟಿ ಅದರ ದುರಂತವೆಂದರೆ ಹಸಿಮರಕ್ಕೂ ಬೆಂಕಿ ಹತ್ತಿಕೊಳ್ಳುತ್ತದೆ. ಇಲ್ಲಿ ಕಾಡಿನ ನಾಶವಾಗುತ್ತಿರುವುದನ್ನು ಕಾಣಬಹುದಾಗಿದೆ. ಮತ್ತೊಂದಡೆ ಲಾಭದ ದೃಷ್ಟಿ ಕೋನದಿಂದ ಪರಿಸರವನ್ನು ಮನಬಂದಂತೆ ಉಪಯೋಗಿಸ ತೊಡಗಿದ್ದಾರೆ ಎಂದು ಗೊತ್ತಾಗುತ್ತದೆ.[15]

ಆದರೆ ದುರದೃಷ್ಟವಶಾತ್, ಈ ನಾಶಕ್ಕೆ ಸಾವಿರಾರು ವರ್ಷದಿಂದ ಅರಣ್ಯದಲ್ಲಿ ಜೀವಿಸಿರುವ ಗಿರಿಜನರೇ ಕಾರಣವೆಂದು ಅವರನ್ನು ಕಳ್ಳರೆಂದು, ಪ್ರಾಣಿವಿನಾಶಕಾರರೆಂದು, ಕಾಡಿನ ಉತ್ಪನ್ನಗಳನ್ನು ನಾಶ ಮಾಡುತ್ತಾರೆಂದು ಅವರ ಮೇಲೆ ಆರೋಪಿಸುತ್ತಿದ್ದಾರೆ. ಗಿರಿಜನರು ಎಷ್ಟುಜನ ಶಿಕಾರಿ ಮಾಡ್ತಾರೆ? ಎಷ್ಟು ಜನರ ಮನೆಯಲ್ಲಿ ಬಂದೂಕು ಇದೆ ಎಂಬುದನ್ನು ನೋಡಬೇಕು. ಹುಲಿ ಕುದುರೆಯನ್ನು ಯಾರಾದರು ಸಾಯಿಸಲು ಬಂದರೆ ಅವು ಗಿರಿಜನರ ಮನೆಗಳ ರಕ್ಷಣೆಪಡೆಯುತ್ತವೆ. ಆ ರೀತಿಯ ಸಹಬಾಳ್ವೆ ಇದೆ. ಗಿರಿಜನರ ಮತ್ತು ಕಾಡಿನ ಪ್ರಾಣಿಗಳ ಮಧ್ಯೆ ಅವುಗಳ ದನದ ಕೊಟ್ಟಿಗೆಗೆ ಬಂದುರೂ ತಿನ್ನುವ ಜನಗಳು ಕೂಡ ಸಾಯುವುದಿಲ್ಲ. ಏಕೆಂದರೆ ಅವರಿಗೆ ಸಾಯಿಸಬಾರದೆಂಬ ತಿಳಿವಳಿಕೆ ಇದೆ. ಕಾಡು ಪರಿಸರವನ್ನು ಅವರು ಬಹಳ ಪೂಜ್ಯಭಾವನೆಯಿಂದ ನೋಡಿಕೊಂಡು ಬಂದಿದ್ದಾರೆ. ಹೀಗಿರುವಾಗ ಅವರ ಮೇಲೆ ತಪ್ಪು ಆರೋಪ ಹೊರಿಸುವುದು ತಪ್ಪು ಎಂದು ನಮ್ಮ ಪರಿಸರ ತಜ್ಞರ ಅಭಿಪ್ರಾಯ. ಒಂದು ವೇಳೆ ಗಿರಿಜನರನ್ನು ಕಾಡು ಪ್ರದೇಶದಿಂದ ಹೊರಹಾಕಿದರೆ ಅದರ ದುಷ್ಪರಿಣಾಮವನ್ನೂ ನಾವೇ ಅನುಭವಿಸಬೇಕಾಗಿ ಬಂದೀತು ಎಂದು ನನ್ನ ಅಭಿಪ್ರಾಯ.[16]

ಉದಾಹರಣೆಗೆ, ಪ್ರಪಂಚದ ಪುಟ್ಟರಾಷ್ಟ್ರ ಥೈಲ್ಯಾಂಡ್ ಅತ್ಯಂತ ಹೆಚ್ಚು ರಾಷ್ಟ್ರೀಯ ಉದ್ಯಾನಗಳನ್ನು ಒಳಗೊಂಡ ದೇಶ. ಸುಮಾರು 30 ರಾಷ್ಟ್ರೀಯ ಉದ್ಯಾನಗಳು ಅಲ್ಲಿವೆ. ಅಲ್ಲಿ ಇಂದಿನ ಪರಿಸ್ಥಿತಿ ಏನಾಗಿದೆ ಎಂದರೆ ಉದ್ಯಾನ ವ್ಯಾಪ್ತಿಯ ಒಳಗಿದ್ದ ಜನರ ಬದುಕನ್ನು ಕಿತ್ತುಕೊಂಡು ಹೊರಗೆ ಹಾಕಿದ್ದರಿಂದ ಇಂದು ಅವರು ವೇಶ್ಯಾ ವಾಟಿಕೆ ಮಾಡುತ್ತಿದ್ದಾರೆ.[17] ಅಭಿವೃದ್ಧಿ ಹೊಂದುವ ಸಂದರ್ಭದಲ್ಲಿ ಅತ್ಯಂತ ಹೀನಾಯಸ್ಥಿತಿ ತಲುಪಿರುವ ಜನರಬಗ್ಗೆ ಕಾಳಜಿ ವಹಿಸದೇ ಇರುವುದು ಮರುಕವ್ಯಕ್ತಪಡಿಸಲೇ ಬೇಕಾದ ಸಂಗತಿಯೇ ಸರಿ! ಇಂತಹ ಸ್ಥಿತಿ ನಮ್ಮ ಜನರಿಗೆ ಬರದಿರಲಿ ಎಂದು ಆಶಿಸೋಣ.

ಈ ನೆಲೆಗಟ್ಟಿನಲ್ಲಿ ಶೇಕಡಾ ಒಂದರಷ್ಟು ಕಾಡನ್ನು ಉಳಿಸಿ ಜೀವ ವೈವಿಧ್ಯಗಳನ್ನು ಉಳಿಸಕೊಳ್ಳಬೇಕಾಗಿದೆ. ಆದ್ದರಿಂದ ಮನಷ್ಯರಿಂದ ಮುಕ್ತವಾಗಿ ಅದಷ್ಟನ್ನು Reserve ಮಾಡಬೇಕೆಂದು ವಾದಿಸುತ್ತಾರೆ. ಆದರೆ ಇನ್ನೂ ಕೆಲವರು ಜನರನ್ನು ಅಲ್ಲಿಂದ ಎತ್ತಂಗಡಿ ಮಾಡಬಾರದು ಏಕೆಂದರೆ ಅವರು ಪರಿಸರದ ಜೊತೆಗೆ ಸಹಬಾಳ್ವೆ ನಡೆಸಿಕೊಂಡಿದ್ದಾರೆ, ಗಿರಿಜನರನ್ನು ಅಲ್ಲಿಂದ ಎತ್ತಬಾರದೆಂದು ವಾದ ಇದೆ. ಪರಿಸರ ಚಳುವಳಿಯಲ್ಲಿ ಎಡ ಬಲಗಳೆಲ್ಲವನ್ನೂ ನೋಡಬಹುದು.[18]

ಮಾನವ ಹಕ್ಕುಗಳಿಗಾಗಿ ಹೋರಾಟ ಮಾಡಿದ ಪ್ರೊ. ಶ್ರೀಧರ್ ಅವರ ಹಾಗೆ ನಿರ್ಮಲ ತೀರ್ಥಹಳ್ಳಿ 'ಪ್ಲಾಸ್ಟಿಕ್ ನಿರ್ಮೂಲ' ಚಳುವಳಿಗಳು ಮತ್ತು ಸರ್ಕಾರಿ ಹಾಗೂ ಸಾಮ್ರಾಜ್ಯಶಾಹಿ ಕೃಪಪೋಷಿತ ಪರಿಸರವಾದಿಗಳೂ ಇದ್ದಾರೆ. ಇವರು

ಜಾಗತೀಕರಣದ ಜೊತೆಯಲ್ಲೇ ನಮ್ಮ ಕಡೆ ಬರುತ್ತಾ ಇದ್ದಾರೆ. ಇವರ ಬಗ್ಗೆ ನಾವು ಹೆಚ್ಚು ನಿಗಾವಹಿಸಬೇಕು. ಏಕೆಂದರೆ ಇವರಿಗೆ ಪ್ರಾಣಿ, ಜೀವಸಂಕುಲಗಳು ಹಾಗೂ ಕಾಡು ಬೇರೆ ಅಥವ ಮನುಷ್ಯ ಬೇರೆ ಎಂದು ಜೀವ ಪರಿಸರದಿಂದ ಹೊರತುಪಡಿಸಿನೋಡುವ ಭಾವನೆ ಇದೆ. ಆದರೆ ಇವರು ಆಧುನಿಕ ಸೌಲಭ್ಯಗಳನ್ನೆಲ್ಲಾ ಯೆಥೇಚ್ಛವಾಗಿ ಬಳಸಿಕೊಂಡು ಪ್ರತಿಷ್ಠಿತವಾಗಿ ಬದುಕುತ್ತಾರೆ.[19] ಅಂದಹಾಗೆ ಪ್ಲಾಸ್ಟಿಕ್ ಕಸ ನಿರ್ವಹಣೆ ಸಮಸ್ಯೆಯೇ? ಅದೊಂದನ್ನು ನಿಯಂತ್ರಿಸಲೇಬೇಕೆ? ಹೌದು. ಘನತ್ಯಾಜ್ಯ ವಸ್ತುಗಳನ್ನು ಕರಗಿಸಲು ಯಾವುದಾದರೂ ಒಂದು ಹೊಸ ಸಾಧನವನ್ನು ಕಂಡುಕೊಳ್ಳಲೇಬೇಕು. ಇಲ್ಲವಾದಲ್ಲಿ ಜನರಿಗೆ ಸಾಕಷ್ಟು ತೊಂದರೆಗಳುಂಟಾಗಿ ವಿಷಅನಿಲ ಮತ್ತು ಅಶುದ್ಧ ಗಾಳಿ ಸೇವನೆಯಿಂದ ಸಾವನ್ನಪ್ಪುತ್ತಿರುವ ಸಂದರ್ಭಗಳನ್ನು ಈಗಾಗಲೇ ನಾವು ಕಂಡಿದ್ದೇವೆ.

ಇತ್ತೀಚಿನ ದಿನಗಳಲ್ಲಿ ಮಂಡೂರು ಗ್ರಾಮಸ್ಥ ಜನರು ಕೆಟ್ಟವಾತಾವರಣ ಕಲುಷಿತ ಗಾಳಿ ಸೇವನೆಯಿಂದಾಗಿ ಅಕಾಲಿಕ ಮರಣಕ್ಕೆ ತುತ್ತಾಗುತ್ತಿದ್ದಾರೆ ಎಂದು ನಮ್ಮೆಲ್ಲರಿಗು ತಿಳಿದಿರುವ ಸಂಗತಿ. ದಿನೇ ದಿನೇ ಅಲ್ಲಿನ ಜನರ ಪರಿಸ್ಥಿತಿ ಹದಗೆಡುತ್ತಿದ್ದು ಆಕ್ರೋಶಗೊಂಡ ಗ್ರಾಮದ ಜನರು ಸತ್ಯಾಗ್ರಹ ಮಾಡಿದರೂ ಸಹ ಯಾವುದೇ ರೀತಿಯ ಪ್ರಯೋಜನವಾಗುತ್ತಿಲ್ಲ. ಈ ವೇಳೆಯಲ್ಲಿ ಕಸದ ವಿಲೇವಾರಿ ಮಾಡುವುದು ಅಥವಾ ಸ್ಥಳಾಂತರಿಸುವುದು ವ್ಯರ್ಥಪ್ರಯತ್ನವಾಗಿ ಪರಿಣಮಿಸಿದೆ. ಈ ಸಮಸ್ಯೆ ಬಗೆ ಹರಿಸಲು ಯಾವ ಕ್ರಮ ಕೈಗೊಳ್ಳಬೇಕು?

ಹಾಗಿದ್ದಲ್ಲಿ ಯಾವರೀತಿಯ ಕ್ರಮಕೈಗೊಳ್ಳಬೇಕು ಎಂಬುದಕ್ಕೆ ಪುತ್ತೂರಿನ ವಿವೇಕಾನಂದ ತಾಂತ್ರಿಕ ಮತ್ತು ಎಂಜನಿಯರಿಂಗ್ ಕಾಲೇಜಿನ ಮೆಕ್ಯಾನಿಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳು 'ಡೊಮಸ್ಟಿಕ್ ಪ್ಲಾಸ್ಟಿಕ್ ಗ್ರಾನುಲೇಟಿಂಗ್ ಮಿಷನ್' ಎಂಬ ಯಂತ್ರವನ್ನೇ ರೂಪಿಸಿದ್ದಾರೆ.

ಮನೆಯಲ್ಲಿ ಸಂಗ್ರಹವಾಗುವ ಪ್ಲಾಸ್ಟಿಕ್ ಚೀಲಗಳು, ಪ್ಲಾಸ್ಟಿಕ್ ಸಾಮಗ್ರಿಗಳನ್ನು ಈ ಯಂತ್ರ ಪುಡಿಮಾಡುತ್ತದೆ. ಇದನ್ನು ಕರಗಿಸಿ ಕಚ್ಚಾ ಪ್ಲಾಸ್ಟಿಕ್ ಕಸ, ಕಚ್ಚಾ ಪ್ಲಾಸ್ಟಿಕ್ ಆಗಿ ಬದಲಾಗಲು ತೆಗೆದುಕೊಳ್ಳುವ ಸಮಯ ಕೇವಲ ಮೂರು ನಿಮಿಷ. ಬೇರೆಬೇರೆ ಸ್ವರೂಪದ ಪ್ಲಾಸ್ಟಿಕ್ ವಸ್ತುಗಳನ್ನು ಪುಡಿಮಾಡಲು ಮತ್ತು ಕರಗಿಸಲು ಯಂತ್ರದ ಉಷ್ಣತೆಯನ್ನು ನಿಯಂತ್ರಿಸಬೇಕಾಗಿದೆ. ಇದಕ್ಕಾಗಿ ಸ್ವಯಂಚಾಲಿತ ಉಷ್ಣ ನಿಯಂತ್ರಕಗಳನ್ನು ಅಳವಡಿಸಲಾಗಿದೆ. ಕಡಿಮೆ ಬೆಲೆಯ ಮತ್ತು ಅತ್ಯಲ್ಪ ನಿರ್ವಹಣಾ ವೆಚ್ಚ ಹೊಂದಿರುವ ಈ ಯಂತ್ರ ನಗರದ ಪ್ಲಾಸ್ಟಿಕ್ ಕಸ ನಿರ್ವಹಣೆಯ ಸಮಸ್ಯೆಗೆ ಪರಿಣಾಮಕಾರಿ ಪರಿಹಾರ ಒದಗಿಸಬಲ್ಲದು ಎಂಬುದು ಅವರ ವಾದ. ಕಸಸಂಗ್ರಹಿಸುವ ಪೌರ ಕಾರ್ಮಿಕರೇ ಈ ಯಂತ್ರಗಳನ್ನು ಖರೀದಿಸಿ ಕಚ್ಚಾ ಪ್ಲಾಸ್ಟಿಕ್ ಉತ್ಪಾದನಾ ಘಟಕಗಳನ್ನು ಆರಂಭಿಸಬಹುದು.[20] ಇನ್ನಾದರು ಇಂತಹ ಯಂತ್ರಗಳನ್ನು ಬಳಸಿ ಪರಿಸರ ಸಂರಕ್ಷಣೆಗೋಸ್ಕರ ಒಂದಷ್ಟು ಕಾರ್ಯಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಪರಿಸ್ಥಿತಿಯನ್ನು ಸುಧಾರಣೆ ತರಬಹುದು. ಎಷ್ಟೋ ಜನ ವಾಸಿಸುವ ಪ್ರದೇಶಗಳು ಇಂದು ಕೊಳೆಗೇರಿಗಳಾಗಿದ್ದು, ಅವುಗಳನ್ನು ಜೀರ್ಣೋದ್ದಾರ ಮಾಡಬೇಕಾದುದು ಅನಿವಾರ್ಯವಾಗಿದೆ. ಇಲ್ಲವಾದಲ್ಲಿ ಪರಿಸ್ಥಿತಿ ತೀರಾ ವಿಕೋಪಕ್ಕೆ ಹೋಗುವ ಸಾಧ್ಯತೆಯಿದ್ದು, ಮುಂದೊಂದು ದಿನ ಇಡೀ ದೇಶವೇ ಕೊಳಚೆ ಪ್ರದೇಶವಾಗುವುದರಲ್ಲಿ ಅನುಮಾನವೇ ಇಲ್ಲ.

ಮಲ್ಯಾರವರು ಕಳೆದ ವರ್ಷ ರಾಷ್ಟ್ರಿಯ ಉದ್ಯಾನದ ಒಳಗೆಯಿರುವ ಮರುಗನ ಹುಳಿ ಅದರಮೇಲೆ ಒಂದು ಪೇಟೆಂಟ್ ಮಾಡಿಕೊಂಡದ್ದಾರೆ. ಅದು ಕೂಡ ಬಹಳ ಪೈಪೋಟಿಯಲ್ಲಿ ಎಷ್ಟೋ ಬಿಲಿಯನ್ ಡಾಲರ್ ಖರ್ಚುಮಾಡಿದ್ದಾರಂತೆ. ನಾವು ಜೀವ ವೈವಿಧ್ಯಗಳನ್ನು, ನಾಟಿ ಔಷಧಿಗಳನ್ನು, ಗಿಡಮೂಲಿಕೆಗಳನ್ನು ಕಂಡುಹಿಡಿಯುವ ಮೂಲಕ ಪರಿಸರವನ್ನು ಸಂರಕ್ಷಿಸುತ್ತೇವೆ ಎನ್ನುವಂತಹ ಭಾವನೆ ಇದ್ದರೂ ಅದೂಕೂಡ ಈ ಜಾಗತೀಕರಣ ಅಥವಾ ವಿದೇಶಿ ಬಂಡವಾಳಗಾರರ ಕೈಗೆ ಸುಲಭವಾಗಿ ತಲಪುತ್ತದೆ ಎನ್ನುವ ಜಾಗ್ರತೆ ಇರಬೇಕು ಹಾಗೆಂದು ನಾವು ಯಾವುದನ್ನು ಸಂಶೋಧನೆ ಮಾಡಬಾರದೆ ಅದನ್ನು ತಿಳಿದುಕೊಳ್ಳಬಾರದೇ ಎಂದು ಕೆಲವರು ನಮ್ಮನ್ನು ಪ್ರಶ್ನಿಸಬಹುದು. ಆದರೆ ಯಾವುದೇ ಸಂಶೋಧನೆಗೆ ಯಾರು ಹಣಕೊಡುತ್ತಾರೆ ಅವರ ಉದ್ದೇಶ ಏನು ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಆದರೆ world bank ಅಥವಾ multi national company ಹಣಕೊಡುತ್ತದೆಂದರೆ ಅದರ ಉದ್ದೇಶ ಅಥವಾ ಲಾಭದ ದೃಷ್ಟಿಕೋನಗಳನ್ನು ಇಟ್ಟುಕೊಂಡೆ ಈ ಯೋಜನೆಗಳು ಬರುತ್ತಾ ಇವೆ ಎಂಬುದು ನಾವು ಕಂಡುಕೊಂಡಿರುವ ಸತ್ಯವಾಗಿದೆ.

ಜಗತ್ತಿನ ಸೂಕ್ಷ್ಮ ಜೀವ ವೈವಿಧ್ಯತಾಣಗಳಾದ ಭಾರತದ ಹಿಮಾಲಯಶ್ರೇಣಿ, ಪಶ್ಚಿಮಘಟ್ಟ, ಈಶಾನ್ಯ ಪ್ರದೇಶಗಳು ಮತ್ತು ನಿಕೋಬಾರ್ ದ್ವೀಪಗಳಲ್ಲಿ ಸಸ್ಯ ಮತ್ತು ಜೀವ ಪ್ರಭೇದಗಳು ತೀವ್ರ ಅಪಾಯಕ್ಕೆ ಸಿಲುಕಿವೆ ಎಂದು ನಮ್ಮ ವಿಜ್ಞಾನಿಗಳು, ಪರಿಸರ ತಜ್ಞರು, ಸಂಶೋಧಕರು ಹೇಳುತ್ತಲೇ ಇದ್ದಾರೆ. ಇದಕ್ಕೆ ಕಾರಣವೇನೆಂಬುದು ನಮಗೆ ಈಗಾಗಲೆ ತಿಳಿದಿದೆ.

ಅವು ಯಾವುದೆಂದರೆ, ಸಂಪನ್ಮೂಲಗಳ ಅತಿಯಾದ ಬಳಕೆ, ಕಾಳ್ಗಿಚ್ಚು ಮತ್ತು ಹವಾಮಾನ ವೈಪರಿತ್ಯವೇ ಇದಕ್ಕೆ ಕಾರಣ ಎಂದು ಪರಿಸರ ಸಚಿವಾಲಯದ ವರದಿ ಸ್ಪಷ್ಟವಾಗಿ ಹೇಳಿದೆ. ಪರಿಸರ ಸಂರಕ್ಷಣೆ ಮತ್ತು ಕೈಗಾರಿಕಾ ಬೆಳವಣಿಗೆ ಕುರಿತು ತೀರ್ವ ಚರ್ಚೆ ನಡುಯುತ್ತಿರುವ ಸಂದರ್ಭದಲ್ಲಿ ಹೊರ ಬಂದಿರುವ ಈ ವರದಿ ಎಚ್ಚರಿಕೆಯ ಗಂಟೆ ಬಾರಿಸಿದೆ. ಈ ಪರಿಸ್ಥಿತಿಯಲ್ಲಿ ನಾವು ಯಾವ ಕಾರ್ಯ ಚಟುವಟಿಕೆ ಜಾರಿಗೆ ತಂದರೆ ಪರಿಸ್ಥಿತಿ ಹತೋಟಿ ತರಬಹುದು ಎಂಬುದೇ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

1980ರಲ್ಲಿ ಅರಣ್ಯ ಸಂರಕ್ಷಣಾ ಕಾಯಿದೆಯು ಜಾರಿಗೊಂಡನಂತರ 23,000 ಅಭಿವೃದ್ಧಿ ಕಾಮಗಾರಿಗಳಿಗಾಗಿ 41.82 ಲಕ್ಷ ಎಕರೆಗೂ ಹೆಚ್ಚಿನ ಅರಣ್ಯ ಪ್ರದೇಶವನ್ನು ಬಿಟ್ಟುಕೊಡಲಾಗಿದೆ. ಜೀವ ವೈವಿಧ್ಯ ಸಂರಕ್ಷಣೆಗಾಗಿ ಕಾರ್ಯತಂತ್ರ ಯೋಜನೆ ಸಿದ್ಧಗೊಳಿಸುವ ಮುನ್ನ ಸಲ್ಲಿಸಲಾಗಿರುವ ಐದನೇ ರಾಷ್ಟ್ರೀಯ ವರದಿ ಇದಾಗಿದೆ. ಅದಿರು ಗಣಿಗಾರಿಕೆ ಮತ್ತು ಕಲ್ಲು ಗಣಿಗಾರಿಗಳು ಆವಾಸಸ್ಥಾನಗಳ ನಾಶಕ್ಕೆ ಪ್ರಮುಖ ಕಾರಣವಾಗಿವೆ. ಇದು ಅರಾವಳಿ ಮತ್ತು ಪಶ್ಚಿಮ ಘಟ್ಟ ಶ್ರೇಣೀಯಲ್ಲಿ ಪರಿಸರದ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತಿವೆ.

ಹಿಮಾಲಯ ಮತ್ತು ದಕ್ಷಿಣ ಭಾರತದ ಉಷ್ಣವಲಯ, ಎಲೆಉದುರುವ ಅರಣ್ಯಗಳಲ್ಲಿ ಕಾಳ್ಗಿಚ್ಚು ಪ್ರಮುಖ ಬೆದರಿಕೆಯಾಗಿದೆ. ಮಾನವನ ಚಟುವಟಿಕೆಗಳಿಂದ ಆಗಿರಿವು ಹವಾಮಾನ ವೈಪರಿತ್ಯವು ಸೂಕ್ಷ್ಮವಾದ ಜೀವವೈವಿಧ್ಯ ಪರಿಸರಗಳಾದ

ಪರ್ವತಶ್ರೇಣಿ ಮತ್ತು ಕರಾವಳಿ ಪ್ರಧೇಶಗಳಿಗೆ ದಕ್ಕೆ ತಂದೊಡ್ಡಿದೆ ಎಂದು ವರದಿ ವಿವರಿಸಿದೆ.

ಬಹುತೇಕ, ಹುಲ್ಲುಗಾವಲು ಅವಲಂಬಿತ ಬೆಂಗಾಲ್ ಫ್ಲೋರಿಕಾನ್, ಲೇಸರ್ ಫ್ಲೋರಿಕಾಂಶ ಹೌಬಾರಾಬಸ್ಟರ್ಡ್, ಗ್ರೇಟ್ ಇಂಡಿಯನ್ ಬಸ್ಟರ್ಡ್ (ಕೊಕ್ಕರೆ ಪ್ರಭೇದಗಳು) ತೋಳ, ನರಿ, ಕೃಷ್ಣಮೃಗ, ಜಿಂಕೆ, ಚಿಗರೆ ಸಂತತಿಗಳು ಸಂಕಷ್ಟಕ್ಕೆ ಸಿಲುಕಿವೆದ ಮಾಂಸಕ್ಕಾಗಿ ಹಾಗೂ ಮಾರುಕಟ್ಟೆ ಪೂರೈಕೆಗಾಗಿ ಕಾಡುಪ್ರಾಣಿಗಳ ಬೇಟೆಯು ಮುಖ್ಯವಾಗಿ ಈಶಾನ್ಯ ಭಾರತದ ದೊಡ್ಡ ಕಂಟಕವಾಗಿ ಪರಿಣಮಿಸಿದೆ.

ಜಗತ್ತಿನ ಕೆಲ ಪರಿಶುಭ್ರ ದ್ವೀಪಗಳನ್ನು ಹೊಂದಿರುವ ಅಂಡಮಾನ್ ನಿಕೋಬರ್ ದ್ವೀಪಸಮೂಹದಲ್ಲಿ ಆವಾಸಸ್ಥಾನ ನಾಶ ಮತ್ತು ಭೂ ಸವಕಳಿಯು ಅಲ್ಲಿನ ಜೀವ ವೈವಿಧ್ಯಕ್ಕೆ ದೊಡ್ಡ ಕುತ್ತಾಗಿದೆ. ದೊಡ್ಡಸ್ತನಿಗಳಿಂದ ಮುಕ್ತವಾದ ಹಾಗೂ ಅಪರೂಪದ ಮರ ಇಣಚಿ ಸಂತತಿಯ ಅವಸ ಸ್ಥಾನವೂ ಆದ ನಿಕೋಬರ್ ದ್ವೀಪ ಸಮೂಹವು ವರ್ಣವೈಭವದ ಹವಳದ ದಿಬ್ಬಗಳಿಗೂ ಹೆಸರಾಗಿದ್ದು ಈಗಿನ ಪರಿಸರ ನಾಶವು ಈ ಖ್ಯಾತಿಗೆ ದಕ್ಕೆತರುವ ಭೀತಿ ತಂದೊಡ್ಡಿದೆ.[21]

ಜೀವ ವೈವಿಧ್ಯ ಸಂರಕ್ಷಣೆಗಾಗಿ ಸರ್ಕಾರ ದೊಡ್ಡ ಮೊತ್ತದ ಹಣವನ್ನು ವ್ಯಯಿಸುತ್ತಿದ್ದರೂ, ಭೀತಿ ಇನ್ನೂ ತಪ್ಪಿಲ್ಲ. ಇನ್ನು ಪ್ರಾಣಿಸಂಕುಲದಲ್ಲಿ ತನ್ನದೇ ಆದ ವಿಶಿಷ್ಟತೆ ಪಡೆದು ಕೊಂಡಿರುವ ಹುಲಿಯನ್ನು ವಿಶ್ವ ಸಂಸ್ಥೆಯ ಅಂಗ ಸಂಸ್ಥೆ ಯುನೆಸ್ಕೊ, ವಿಶ್ವದಲ್ಲಿ ಅಳಿವಿನ ಅಂಚಿನಲ್ಲಿರುವ ಹುಲಿಗಳ ಸಂರಕ್ಷಣೆಗೆ ಕ್ರಮಕೈಗೊಳ್ಳುವಂತೆ ನಿಯಮಗಳನ್ನು ರೂಪಿಸಿ ಸದಸ್ಯರಾಷ್ಟ್ರಗಳಿಗೆ ಕಳುಹಿಸಿಕೊಟ್ಟಿದೆ. ಅದರಂತೆ ಭಾರತವು ಹುಲಿಗಳ ಸಂರಕ್ಷಣೆಗೆ ಮುಂದಾಗಿದ್ದು ದೇಶದ ಕೆಲವು ಅರಣ್ಯಪ್ರದೇಶಗಳನ್ನು ಹುಲಿ ಸಂರಕ್ಷಿತ ಪ್ರದೇಶ ಎಂದು ಗುರ್ತಿಸಿ ಆ ಪ್ರದೇಶದಲ್ಲಿ ಹುಲಿಗಳನ್ನು ಸಂರಕ್ಷಿಸಲು ಕ್ರಮ ಕೈಗೊಂಡಿದೆ.[22] ಆದರೆ ಇಂದು ಪ್ರಾಣಿಗಳ ಸಂರಕ್ಷಣೆಗೋಸ್ಕರ ಅನೇಕ ರೀತಿಯ ಯೋಜನೆಗಳನ್ನು ಕೈಗೊಂಡಿದ್ದರೂ ಸಹ ಯಾವುದೇ ರೀತಿಯ ಪ್ರಯೋಜನವಾಗುತ್ತಿಲ್ಲ ಎಂಬುದು ನಮ್ಮ ಅರಿವಗೆ ಬರುತ್ತಿದೆ.

ಇಂದು ಬೆಂಗಳೂರಿನ ಮಾಲಿನ್ಯ ಪ್ರಮಾಣ ಶೇ. 42.2ರಷ್ಟಾಗಿದ್ದು, ಮಾಲಿನ್ಯದಲ್ಲಿ ದೇಶದಲ್ಲೇ ಮೊದಲ ಸ್ಥಾನಕ್ಕೆ ಸ್ಪರ್ಧೆನಡೆಸುತ್ತಿದೆ. ದೆಹಲಿ, ಚೆನ್ನೈ, ಮುಂಬೈ ಹಾಗೂ ಕೋಲ್ಕತ್ತಾ ವಿಶ್ವದಲ್ಲೇ ಅತಿ ಹೆಚ್ಚು ಮಲಿನಗೊಂಡಿರುವ ನಗರಗಳು ಎಂಬ ಕುಖ್ಯಾತಿಗೆ ಪಾತ್ರವಾಗಿದೆ. ಅದೇ ದಾರಿಯಲ್ಲಿ ಈಗ ಬೆಂಗಳೂರು ಸಹಸಾಗಿದೆ. ಇಲ್ಲಿ ಒಂದು ವರ್ಷಕ್ಕೆ 57,000 ಮೆಟ್ರಿಕ್‌ಟನ್ ಇ–ತ್ಯಾಜ್ಯ ಉತ್ಪಾದನೆಯಾಗುತ್ತಿದೆ ಎಂಬುದು ಅಸೋಚಾಂ ವರದಿಯಿಂದ ದೃಡಪಟ್ಟಿದೆ. ಇ–ಕಸ ನಿರ್ವಹಣೆಗೆ ಸೂಕ್ತವ್ಯವಸ್ಥೆಯೇ ಇಲ್ಲ. ಹೀಗಾಗಿ ಉತ್ಪತ್ತಿಯಾಗುವ ಇ–ಕಸದ ಬಹುಪಾಲು ಮರುಬಳಕೆ ಅತ್ಯಂತ ಅವೈಜ್ಞಾನಿಕವಾಗಿ ನಡೆಯುತ್ತಿದೆ ಎಂದು ವರದಿ ನೀಡಿದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಡಾ. ವಾಮನ ಆಚಾರ್ಯ, ನಗರದಲ್ಲಿನ ಮಾಲಿನ್ಯದ ಪ್ರಮಾಣದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಳಕಂಡುಬಂದಿದೆ.[23] ಮಾಲಿನ್ಯ ನಿಯಂತ್ರಣ ಮಂಡಳಿಯು ತನ್ನ ವ್ಯಾಪ್ತಿಯಲ್ಲಿ ಮಾಲಿನ್ಯವನ್ನು ಕಡಿಮೆ ಮಾಡಲು ಅನೇಕ ಕಾರ್ಯ ಕ್ರಗಳನ್ನು ಆಯೋಜಿಸಿದೆ ಎಂದು

ಹೇಳುತ್ತಿದೆ. ಆದರೆ ಅದು ತನ್ನ ಕಾರ್ಯ ನಿರ್ವಹಣೆಯಲ್ಲಿ ಎಷ್ಟರಮಟ್ಟಿಗೆ ತನ್ನನ್ನು ತಾನು ತೊಡಗಿಸಿಕೊಂಡಿದೆ ಎಂಬುದು ಯಕ್ಷಪ್ರಶ್ನೆಯಾಗಿದೆ.

ಈ ವಿಷ ವರ್ತುಲದಿಂದ ಹೊರಬರಲು ನಾವು ಹಿಂದೆಗಿಂತಲೂ ಹೆಚ್ಚಿನ ಶ್ರಮ ಹಾಗೂ ಮುತವರ್ಜಿವಹಿಸಬೇಕಾಗಿದೆ. ಪ್ರಗತಿ ಮತ್ತು ಐಶಾರಾಮಿ ಜೀವನಕ್ಕಾಗಿ ಪಾಶ್ಚಾತ್ಯರ ಜೀವನ ಕ್ರಮವನ್ನು ಅನುಸರಿಸಬಯಸುವ ನಾವು ಪರಿಸರ ಸಂರಕ್ಷಣೆಯ ವಿಷಯದಲ್ಲಿ ಅವರ ಮಾರ್ಗವನ್ನೇಕೆ ಅನುಸರಿವುದಿಲ್ಲ?

ಇಂದು ಯೂರೋಪ್, ಅಮೇರಿಕ, ಆಸ್ಟ್ರೇಲಿಯಾ, ಜಪಾನ್‌ಗಳಲ್ಲಿ ಹಿಂದೆಗಿಂತ ಹೆಚ್ಚಿನ ಜನಜಾಗೃತಿಯ ಕಾರ್ಯಕ್ರಮಗಳು ನಡೆಯುತ್ತಿವೆ. ಉದಾಹರಣೆಗೆ 'ಗ್ರೀನ್ ಪೀಸ್' ನಂತಹ ಪೃಥ್ವಿ ರಕ್ಷಣಾ ಯೋಧರ ಕೆಚ್ಚೆದೆಯ ಸಾಹಸಗಳು, ದಟ್ಟವಾದ ಹೊಗೆ ಕಾರುವ ಕಾರ್ಖಾನೆಗಳ, ಚಿಮಣಿಗಳ ಮೇಲೆ ಹತ್ತಿ 'ಶುದ್ಧ ಗಾಳಿ' ನಮ್ಮೆಲ್ಲರ ಹಕ್ಕು ಎಂದು ಧೈರ್ಯವಾಗಿ ಘೋಷಣೆ ಮಾಡುತ್ತಾರೆ. ಅಮೇರಿಕಾದ ಬಾಲ್ಟಿಮೋರ್ ನಲ್ಲಿ ರೀಸೈಕಲಿಂಗ್ ಸ್ಪರ್ಧೆ ನಡೆಯುವುದನ್ನು ನೋಡಿದ್ದೇವೆ. ಹೀಗೆ ಪಾಶ್ಚಾತ್ಯ ದೇಶಗಳು ತಮ್ಮ ರಕ್ಷಣೆಯ ಸಲುವಾಗಿ ಪರಿಸರ ಕಾರ್ಯಕ್ರಮಗಳನ್ನು ಹಾಕಿಕೊಂಡರೆ, ನಮ್ಮ ನಾಡಿನಲ್ಲಿ ಇರುವ ಕಾಡನ್ನು ಕಡಿದು ಹಸಿರನ್ನು ಧ್ವಂಸ ಮಾಡಿ ಪ್ರಕೃತಿಯನ್ನು ವಿಕೃತಿಗೊಳಿಸಿ ತನ್ನ ರಕ್ಕಸತನಕ್ಕೆ ಮಾನವ ಬಲಿ ಕೊಡುತ್ತಿದ್ದಾನೆ.

ಇನ್ನಾದರೂ ವಿಜ್ಞಾನಿಗಳು ತಮ್ಮ ಪ್ರಯೋಗಾಲಯವನ್ನು ತ್ಯಜಿಸಿ, ಹೊರಬಂದು, ಜನರನಡುವೆ ಬೆರೆತು ವೈಜ್ಞಾನಿಕ ಮನೋಭಾವ ಮತ್ತು ಸಂಸ್ಕೃತಿಯನ್ನು ಹರಡಬೇಕೆಂಬ ತತ್ವವನ್ನು ಜನಪದೀಯ ಜ್ಞಾನಚಳುವಳಿಗಳು ಪ್ರೋತ್ಸಾಹಿಸುತ್ತಿವೆ. (ಆಧುನಿಕ ವಿಜ್ಞಾನಕ್ಕೆ ಗಾಂಧೀಜಿ ಸವಾಲು – 8) ಸೂಕ್ತ ತಂತ್ರಜ್ಞಾನ ಚಳುವಳಿಗಳು ವಿವಿಧ ರಾಷ್ಟ್ರಗಳಲ್ಲಿ ಬೇರೆಬೇರೆ ಕಾಲಘಟ್ಟದಲ್ಲಿ ಆಯಾಪ್ರದೇಶದ ನಿರ್ದಿಷ್ಟ ಅಗತ್ಯತೆ ಮತ್ತು ಅವುಗಳ ಅಭಿವೃದ್ಧಿಯ ಪ್ರಮಾಣಕ್ಕೆ ತಕ್ಕಂತೆ ಅನೇಕ ಸ್ವರೂಪಗಳನ್ನು ತಳೆದಿವೆ. ಈ ಆಂದೋಲನದ ಪ್ರಮುಖ ಲಕ್ಷಣಗಳೆಂದರೆ 1. ಅಗಾಧ ಜನಸಾಮಾನ್ಯರು ಬಳಸುವ ದೈನಂದಿನ ಉಪಕರಣಗಳ (ಉದಾ:- ನೇಗಿಲು ಎತ್ತಿನಬಂಡಿ, ಸೌದೆಒಲೆ, ರಿಕ್ಷಾ, ಇತ್ಯಾದಿ) ಸುಧಾರಣೆಗೆ ಆಧುನಿಕ ವೈಜ್ಞಾನಿಕ ಜ್ಞಾನದ ಬಳಕೆ. 2. ಬಳಸುವ ತಂತ್ರಜ್ಞಾನವು ಆಯಾ ಪ್ರದೇಶದ ಅಭಿವೃದ್ಧಿ ಮಟ್ಟವನ್ನು ಆಧರಿಸಿರಬೇಕೆಂಬ ಎಚ್ಚರ. (ಉದಾ:- ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಸಣ್ಣ ಮತ್ತು ಸರಳಯಂತ್ರಗಳು ಸಾಕು ಎಂಬ ನಿಲುವು) 3. ಆಯಾರಾಷ್ಟ್ರಗಳ ಸಂಪನ್ಮೂಲಗಳನ್ನು ಸಂಪೂರ್ಣವಾಗಿ, ಸಮರ್ಪಕವಾಗಿ ಬಳಸಿಕೊಳ್ಳಲು ಸೂಕ್ತವಾದ ತಂತ್ರಜ್ಞಾನ ಅಭಿವೃದ್ಧಿ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ಪದಾರ್ಥಗಳನ್ನು ಕೈಗಾರಿಕೆಗಳಲ್ಲಿ ಬಳಸುವ ಬಗ್ಗೆ ಒತ್ತು ನೀಡಬೇಕು ಎಂದು ಪರಿಸ್ಥಿತಿ ಸುದಾರಣೆ ತರುವ ಸಲುವಾಗಿ ಸುನಿಲ್ ಸಹಸ್ರಬುದೆಯವರು ಮತ್ತೊಮ್ಮೆ ಹಳೆಯ ಬದುಕಿನ ಶೈಲಿ ನೆನಪಿಸಿಕೊಡುವ ಪ್ರಯತ್ನ ಮಾಡಿದರು, ಹೊಸ ಮಾರ್ಪಾಡುಗಳೊಂದಿಗೆ ವ್ಯವಸ್ಥೆಯನ್ನು ಬದಲಾಯಿಸಲು ಮುಂದಾಗಬೇಕು ಎಂಬ ಸೂಚನೆ ನೀಡುತ್ತಾರೆ.

ಇದೇ ರೀತಿಯ ಆಶಯವನ್ನು ಪ್ರಸನ್ನರವರು ಸಹ ಬಯಸುತ್ತಿರುವುದು ಎಂಬುದು ಅವರ ಕೃತಿಯ ಹಿನ್ನಲೆಯಿಂದ ತಿಳಿದು ಬರುತ್ತದೆ.

ಇನ್ನು ಮುಂದಾದರೂ ದೊಡ್ಡ ಪ್ರಮಾಣದಲ್ಲಿ ಯೋಜನಾಬದ್ಧ ಕಾರ್ಯಕ್ರಮಗಳು ಕ್ರಿಯಾತ್ಮಕವಾಗಿ ನಿರ್ವಹಣೆಯಾಗದಿದ್ದರೆ ಭವಿಷ್ಯದಲ್ಲಿ ನಾವೇ ಭಸ್ಮಾಸುರರಾಗುತ್ತೇವೆ ಎಂಬುದನ್ನು ಮರೆಯದಿರೋಣ.

ಪರಿಸರ ಸಂರಕ್ಷಣೆ ಮತ್ತು ಪರಿಸರ ಸ್ವಚ್ಛತೆ ಒಂದು ದಿನದ ಕೆಲಸವಲ್ಲ. ನಮ್ಮ ಆರೋಗ್ಯ ರಕ್ಷಣೆಗೆ ಹಾಗೂ ಸಂವರ್ಧನೆಗೆ ನಾವೇನು ವರ್ಷಕ್ಕೊಮ್ಮೆ ಸ್ನಾನ ಊಟ ಮಾಡುತ್ತೇವೆಯೇ? ಇಲ್ಲತಾನೆ, ಆದ್ದರಿಂದ ಪರಿಸರ ಸಂರಕ್ಷಣೆಯ ಕೆಲಸ ವರ್ಷವಿಡೀ ನಡೆಯುವಂತಹುದು. ಆಗ ಮಾತ್ರವೇ ಪ್ರತಿದಿನ ಪರಿಸರ ದಿನವಾದಂತೆ ಎಂದು ತಿಳಿಯೋಣ.

ಒಟ್ಟಾರೆಯಾಗಿ, ಸಾಧ್ಯವಾದಷ್ಟು ಪರಿಸರದ ಬಗ್ಗೆ ಕಾಳಜಿ ಹೊಂದಿ ಪ್ರಾಣಿ ಪಕ್ಷಿಗಳ ರಕ್ಷಣೆ ಮಾಡುವುದರ ಮೂಲಕ ವೈರುಧ್ಯಯತೆಯನ್ನು ಕಡಿತಗೊಳಿಸಬೇಕು ಎಂಬುದು ಈ ಅಧ್ಯಯನದ ಆಶಯ.

ಈ ಅಧ್ಯಯನದ ಗ್ರಹೀತಗಳು :

- ಈ ಅಧ್ಯಯನದಲ್ಲಿ ಪ್ರಾಣಿಸಂಕುಲ ಮತ್ತು ಜೀವ ಸಂಕುಲಗಳ ನಡುವಿನ ಸಂಬಂಧದ ಸೌಹಾರ್ದ ಸಾಧ್ಯತೆಯನ್ನು ಶೋಧಿಸಲಾಗಿದೆ.
- ಪರಿಸರವನ್ನು ಲಾಭಕೋಸ್ಕರ ನಾಶಮಾಡುವ ತಂತ್ರೋಪಾಯಗಳ ಮಹತ್ವವನ್ನು ಅರಿಯಲಾಗಿದೆ.
- ಯಂತ್ರಗಳು ತಯಾರಿಸಿದ ಉತ್ಪನ್ನಗಳು ಪರಿಸರಕ್ಕೆ ಪ್ರತಿಕೂಲ ಪರಿಣಾಮ ಉಂಟು ಮಾಡುವ ವಿಚಾರದ ಚರ್ಚೆ.
- ಪರಿಸರ ಸಂರಕ್ಷಣೆಗೋಸ್ಕರ ಸೂಕ್ತ ಕ್ರಮ ಕೈಗೊಳ್ಳುವ ಕುರಿತು ಚಿಂತನೆ
- ಪ್ರತಿ ಸಂಸ್ಕೃತಿಯು ಪ್ರತಿಭಟನೆಯ ಸಂಕೇತವಾಗಿ ರೂಪುಗೊಳ್ಳುತ್ತಿರುವುದನ್ನು ವಿವೇಚಿಸುತ್ತದೆ.
- ಹೊಸ ತಂತ್ರಜ್ಞಾನದ ಅವಿಷ್ಕಾರಗೊಳ್ಳುತ್ತಿದ್ದರೂ ಅದನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳದೆ ಇರುವುದನ್ನು ಗುರುತಿಸಬಹುದಾಗಿದೆ.
- ಆಧುನಿಕ ವಿಜ್ಞಾನ,ತಂತ್ರಜ್ಞಾನದ ದುರ್ಬಳಕೆ ಮಾಡಿಕೊಳ್ಳುತ್ತಿರುವ ಜನ ವರ್ಗ ಯಾವುದು ಎಂಬುದರ ಚರ್ಚೆ ಅದನ್ನು ನಿಯಂತ್ರಿಸುವ ವಿಧಾನಗಳ ಬಗ್ಗೆ ತಿಳಿವನ್ನು ಪಡೆದುಕೊಳ್ಳಲಾಗಿದೆ.

ಕೊನೆ ಟಿಪ್ಪಣಿ :

1. ಯಂತ್ರಗಳನ್ನು ಕಳಚೋಣ ಬನ್ನಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 22
2. ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು; ಪ್ರೊ॥ ಸುನಿಲ್ ಸಹಸ್ರಬುಧೆ; ಕನ್ನಡಕ್ಕೆ ಅನುವಾದ ಕೆ.ವಿ. ಪುಟ್ಟಸ್ವಾಮಿ; ಪುಟ ಸಂಖ್ಯೆ 40
3. ಅದೇ – ಪುಟ ಸಂಖ್ಯೆ 42
4. ಅದೇ – ಪುಟ ಸಂಖ್ಯೆ 43
5. ಜಾಗತೀಕರಣ ಒಂದು ಸಮಗ್ರ ಮಂಥನ; ರಾಜೇಂದ್ರಚೆನ್ನಿ; ಸಂ; ಕರ್ನಾಟಕ ಸಾಹಿತ್ಯ ಅಕಾಡೆಮಿ; 2004; ಪುಟ ಸಂಖ್ಯೆ 58
6. ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು; ಪ್ರೊ॥ ಸುನಿಲ್ ಸಹಸ್ರಬುಧೆ; ಕನ್ನಡಕ್ಕೆ ಅನುವಾದ ಕೆ.ವಿ. ಪುಟ್ಟಸ್ವಾಮಿ; ಪುಟ ಸಂಖ್ಯೆ 20
7. ಜಾಗತೀಕರಣ ಒಂದು ಸಮಗ್ರ ಮಂಥನ: ರಾಜೇಂದ್ರಚೆನ್ನಿ; ಸಂ; ಕರ್ನಾಟಕ ಸಾಹಿತ್ಯ ಅಕಾಡೆಮಿ; 2004; ಪುಟ ಸಂಖ್ಯೆ 56. 57
8. ಅದೇ – ಪುಟ ಸಂಖ್ಯೆ 157
9. ಯಂತ್ರಗಳನ್ನು ಕಳಚೋಣ ಬನ್ನಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 43
10. ಅದೇ – ಪುಟ ಸಂಖ್ಯೆ 22
11. ಜಾಗತೀಕರಣ ಒಂದು ಸಮಗ್ರ ಮಂಥನ; ರಾಜೇಂದ್ರಚೆನ್ನಿ; ಸಂ; ಕರ್ನಾಟಕ ಸಾಹಿತ್ಯ ಅಕಾಡೆಮಿ; 2004; ಪುಟ ಸಂಖ್ಯೆ 158
12. ಯಂತ್ರಗಳನ್ನು ಕಳಚೋಣ ಬನ್ನಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 64
13. ಜಾಗತೀಕರಣ ಒಂದು ಸಮಗ್ರ ಮಂಥನ; ರಾಜೇಂದ್ರಚೆನ್ನಿ; ಸಂ; ಕರ್ನಾಟಕ ಸಾಹಿತ್ಯ ಅಕಾಡೆಮಿ; 2004; ಪುಟ ಸಂಖ್ಯೆ 158
14. ಅದೇ – ಪುಟ ಸಂಖ್ಯೆ 162
15. ಅದೇ – ಪುಟ ಸಂಖ್ಯೆ 165
16. ಅದೇ – ಪುಟ ಸಂಖ್ಯೆ 166
17. ಅದೇ – ಪುಟ ಸಂಖ್ಯೆ 167, 168
18. ಯಂತ್ರಗಳನ್ನು ಕಳಚೋಣ ಬನ್ನಿಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 160
19. ಪ್ರಜಾವಾಣಿ ವೃತ್ತ ಪತ್ರಿಕೆ – ಜೂನ್ 15, 2014
20. ಅದೇ – ಜೂನ್ 15, 2014
21. ಅದೇ – ಜೂನ್ 16, 2014
22. ಅದೇ – ಜೂನ್ 16 , 2014
23. ಅದೇ – ಜೂನ್ 5, 2014

ಅಧ್ಯಾಯ - 4

ದೇಸಿ ಜೀವನಕ್ಕೆ ಮರಳುವ ವಿಧಾನಗಳು ಮತ್ತು ಕೈಮಗ್ಗ ಪರಂಪರೆಯ ಬಗೆಗಿನ ಕಾಳಜಿ.

ಪಾಶ್ಚಾತ್ಯ ಜೀವನ ಶೈಲಿ, ಬದುಕಿನ ರೀತಿ, ಆಚರಣೆ ವಿಧಿ-ವಿಧಾನಗಳನ್ನು ಎಂದಿನಿಂದ ನಾವು ಅನುಸರಿಸ ತೊಡಗಿದವು ಅಂದಿನಿಂದ ನಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಾ ಇದ್ದೇವೆಂದು ಭಾಸವಾಗುತ್ತಿದೆ. ಏಕೆಂದರೆ ನಾವು ಮಾಡುವ ಕೆಲಸ ಕಾರ್ಯಗಳು ಅತ್ಯಂತ ಕಠಿಣ ಮತ್ತು ಶ್ರಮದಾಯಕ ಹಾಗಾಗಿ ಸುಲಭ ಮಾರ್ಗವನ್ನು ಕಂಡುಕೊಳ್ಳುವ ಸಲುವಾಗಿ ನಮ್ಮ ಸಂಸ್ಕೃತಿ, ಪರಂಪರೆಯನ್ನು ಮೂಲೆಗುಂಪಾಗಿಸುವುದಕ್ಕೆ ನಾವೇ ಕಾರಣರೆಂದು ಗೋಚರವಾಗುತ್ತಿದೆ. ಇದರಿಂದ ತೊಂದರೆಯನ್ನು ಅನುಭವಿಸಬೇಕಾದವರು ನಾವೇ ಎಂಬುದನ್ನು ಮನಗಾಣಬೇಕಾಗಿದೆ. ನಮ್ಮ ಮನಸ್ಥಿತಿ ಹೇಗಿದೆಯೆಂದರೆ ಅಭಿವೃದ್ಧಿ ಹೊಂದಲು ಪಾಶ್ಚಾತ್ಯರ ಮಾರ್ಗ ಬೇಕು. ತಮ್ಮ ತನವನ್ನು ಬಿಡಬಾರದು ಈ ರೀತಿಯ ದ್ವಂದ್ವ ಪರಿಸ್ಥಿತಿಯಲ್ಲಿ ನಾವಿದ್ದು ಬದಲಾಗುತ್ತಿರುವ ಸನ್ನಿವೇಶದಲ್ಲಿ ಮರಳಿ ತುಸು ಮಾರ್ಪಾಡುಗಳೊಂದಿಗೆ ಹಿಂದಿನ ಜೀವನ ಪದ್ಧತಿಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ. ಯಂತ್ರ ನಾಗರೀಕತೆಯು ನಮ್ಮ ಮೇಲೆ ಹಿಡಿತ ಸಾಧಿಸಿರುವ ಈ ಸಂದರ್ಭದಲ್ಲಿ ಹೊಸ ರೀತಿಯ ಬದಲಾವಣೆ ಅನಿವಾರ್ಯವಾಗಿದೆ.

ಅಂದಹಾಗೆ, ಈ ಯಂತ್ರಗಳನ್ನು ಬಲವಂತದಿಂದ ಧ್ವಂಸಮಾಡಬಹುದೆ? ಎಲ್ಲೆಲ್ಲಿ ಕಾರ್ಖಾನೆಗಳಿವೆಯೋ, ಅಲ್ಲಿಗೆ ಹೋಗಿ ಪಿಕೆಟಿಂಗ್ ಮಾಡಿ, ಕಾರ್ಖಾನೆ ಮುಚ್ಚಿಸಬಹುದೇ? ಅಥವಾ ವಿಧ್ವಂಸಕ ಕೃತ್ಯಗಳ ಮೂಲಕ ಅರ್ಥಾತ್ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವ ಮೂಲಕ ಯಂತ್ರಗಳನ್ನು ಉಡಾಯಿಸಬಹುದೇ? ಹೇಗೆ ಕಳಚುತ್ತೀರಿ ಯಂತ್ರಗಳನ್ನ!

ಇಂದಿನ ಮನುಷ್ಯನ ಜೀವನ ಯಂತ್ರಗಳಿಲ್ಲದೆ ಊಹಿಸಲೂ ಸಹ ಸಾಧ್ಯವಿಲ್ಲ. ಇಂತಹ ಸ್ಥಿತಿ ತಲುಪಿರುವ ಅಂತಹ ಸ್ಥಿತಿಯಲ್ಲಿ ಯಂತ್ರಗಳನ್ನು ಕಳಚುವುದು ಸರಳ ಸುಲಭದ ಕೆಲಸವಲ್ಲವೆಂಬುದನ್ನು ನಾವು ಮನಗಾಣಬೇಕಾಗಿದೆ. ಹೀಗಿರುವಾಗ ಪ್ರಸನ್ನ ಯಾವ ಬಗೆಯ ಯಂತ್ರಗಳನ್ನು ಕಳಚಬೇಕೆಂದು ಹೇಳುತ್ತಾರೆ. ಆ ವಿಧಾನವಾದರೂ ಯಾವುದು? ಎಂಬುದನ್ನು ಕುರಿತು ದೀರ್ಘವಾಗಿ ಚರ್ಚೆ ಮಾಡುತ್ತಾಹೋದರೆ ನಾವು ಕಳಿಚಬೇಕಾದ ಯಂತ್ರಗಳು ಯಾವುದು? ಕಳಚುವುದು ಅನಿವಾರ್ಯವೇ? ಎಂಬ ಪ್ರಶ್ನೆ ಹಾಕಿಕೊಂಡರೆ ಉತ್ತರಿಸಲು ಸಾಕಷ್ಟು ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ ಕಳಚುವಿಕೆ ಅಸಾಧ್ಯವಾಗಿಬಿಡುವ ಸಂಭವವುಂಟು!

ಹಾಗಾದರೆ ನಾವು ಮಾಡಬೇಕಾದದ್ದೇನು?

ಯಂತ್ರಯುಗದ ದುಷ್ಪರಿಣಾಮಗಳನ್ನು ಎದುರಿಸಲೆಂದು ರಾಜಕೀಯ ಪಕ್ಷವನ್ನು ಕಟ್ಟುವುದಾಗಲೀ, ಕಾನೂನು ಮಾಡುವುದಾಗಲೀ, ಅಥವಾ ಧಾರ್ಮಿಕ ನಿರ್ಬಂಧ ಹೇರುವುದಾಗಲೀ, ಈಗಿನ ಸಂದಂರ್ಭದಲ್ಲಿ ನಿರಿಕ್ಷಿತ ಫಲ ನೀಡಲಾರದು.

ಅವೆಲ್ಲವನ್ನು ನಾವು ಈಗಾಗಲೇ ಮಾಡಿ ಆಗಿದೆ. ಹಾಗಾಗಿ ಯಂತ್ರಗಳಿಗೆ ಕೊಡುವ ಪ್ರತಿಯೊಂದು ಪೆಟ್ಟೂ ಅದನ್ನು ಅಪ್ಪಿಹಿಡಿದಿರುವ ಮಾನವ ಕೈಗಳ ಮೇಲೆ ಬೀಳುತ್ತದೆ. ಕೋಟ್ಯಾಂತರ ಮಂದಿ ಕೆಲಸ ಕಳೆದು ಕೊಳ್ಳುತ್ತಾರೆ. ಹಿಂಸೆ, ನೋವು ಹೆಚ್ಚಾಗಿ ಮಾನವ ತಿರುಗಿ ಬೀಳುತ್ತಾನೆ. ತಾನು ಬದುಕಲು ಎಂತಹ ಹಿಂಸಾತ್ಮಕ ಕೃತ್ಯಗಳನ್ನು ಮಾಡಲು ಸಿದ್ಧನಾದುದರ ಪರಿಣಾಮವಾಗಿ ಯಂತ್ರಗಳ ಬಳಕೆ ಮಾಡಿ ಇತರರ ಮೇಲೆ ದೌರ್ಜನ್ಯ, ದಬ್ಬಾಳಿಕೆ, ಶೋಷಣೆ, ಅನ್ಯಾಯ ಎಸಗಲು ಮುಂದಾಗುತ್ತಾನೆ.[1]

ಹಾಗಾಗಿ, ನಾವು ಅಷ್ಟಾಗಿ ಗಮನಿಸದ ಸರಳ ಸತ್ಯವೊಂದಿದೆ! ಅದೆಂದರೆ ಯಂತ್ರಗಳು ನಮ್ಮನ್ನು ಹಿಡಿದಿಲ್ಲ. ನಾವು ಯಂತ್ರಗಳನ್ನು ಹಿಡಿದಿದ್ದೇವೆ. ಆದ್ದರಿಂದ ಇಂದಿನ ಚಳುವಳಿಯು ವೈಯುಕ್ತಿಕ ಸ್ತರದಲ್ಲಿ ಸಡೆಯಬೇಕಾದ್ದು ಹಾಗೂ ಇತ್ಯಾತ್ಮಕವಾದ ಸಾಧನೆಯಾಗ ಬೇಕಾದ್ದು ಅನಿವಾರ್ಯ.

ಪ್ರತಿಯೊಬ್ಬ ವ್ಯಕ್ತಿಯೂ ಸ್ವ-ಇಚ್ಛೆ ಹಾಗೂ ಸ್ವಸಂತೋಷದಿಂದ ತನ್ನ ಬದುಕಿನಲ್ಲಿ ಯಂತ್ರಗಳ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿಕೊಳ್ಳ ಬಲ್ಲನಾದರೆ, ಆಗ ಮಾತ್ರ ಬದಲಾವಣೆ ಸಾಧ್ಯವಾಗುತ್ತದೆ. ಎಂಬುದು ಪ್ರಸನ್ನರವರ ನಿಲುವು. ಇದು ಸಾಧ್ಯವಾಗುವ ಮಾತೇ? ಅಂತೂ ಎಲ್ಲೆಲ್ಲಿ ನಮ್ಮದೇ ಕೈಗಳಿಂದ ಕೆಲಸಮಾಡುವುದು ಸಾಧ್ಯವೋ, ಎಲ್ಲೇಲ್ಲಿ ನಮ್ಮದೇ ಕಾಲುಗಳಿಂದ ನಡೆಯುವುದು ಸಾಧ್ಯವಿದೆಯೋ ಅಲ್ಲಲ್ಲಿ ಯಂತ್ರಗಳ ಅವಲಂಬನೆ ಕಡೆಮೆ ಮಾಡಬೇಕು.[2] ಅಂದಹಾಗೆ ನಾವು ಯಂತ್ರಗಳನ್ನು ಕಳಚಬೇಕಾಗಿರುವುದು ಮೊದಲು ನಮ್ಮ ಜೀವನದಲ್ಲಿ, ಕಾರ್ಖಾನೆಗಳಲ್ಲಲ್ಲ. ಇದು ಎಷ್ಟರ ಮಟ್ಟಿಗೆ ಸಾಧ್ಯವೋ, ನನಗಂತೂ ತಿಳಿಯದು.

ಮೊದಲು ಕಳಚಬೇಕಾದದ್ದು ನಮ್ಮ ಜೀವನದಲ್ಲಿ ಅಂದರೆ ಅರ್ಥಾತ್ ಬದಲಾಗ ಬೇಕಾಗುವುದು ನಮ್ಮ ಜೀವನಕ್ರಮ. ಅದಕ್ಕಾಗಿ ನಾವು ತ್ಯಾಗ ಮಾಡಬೇಕಾಗಿದೆ. ಸುಲಭ ಜೀವನ ಐಷಾರಾಮಿ ಬದುಕು ಹಾಗೂ ಅತಿವೇಗದ ಹವ್ಯಾಸವನ್ನು ತ್ಯಾಗ ಮಾಡಬೇಕಾಗಿದೆ. ಇದಕ್ಕಾಗಿ ಜನರು ಸಿದ್ದರಾಗುವರೇ? ಕಾದು ನೋಡಬೇಕಾಗಿದೆ. ಆದರೂ ಕಳಚುವುದು ಅನಿವಾರ್ಯ.

ಇಂತಹ ಸಂದರ್ಭದಲ್ಲಿ ಯಂತ್ರಗಳನ್ನು ಕಳಚ ಹೊರಟ ಗಾಂಧೀಜಿಯನ್ನು ನೆನೆಯದೆ ಗತ್ಯಂತರವಿಲ್ಲ. ಮನುಷ್ಯ ಯಂತ್ರಗಳ ಅಡಿಯಾಳಾಗುತ್ತಿದ್ದಾನೆ ಎಂದು ಇವರು ಒಂದು ನೂರು ವರ್ಷಗಳ ಹಿಂದೆ ಎಚ್ಚರಿಕೆ ನೀಡಿದ್ದರು. ಮಹಾನ್ ಲೇಖಕ ಟಾಲ್‌ಸ್ಟಾಯ್ ಕೂಡ ಐಷರಾಮಿ ಜೀವನ ಹಾಗೂ ಯಂತ್ರನಾಗರೀಕತೆಯ ವಿರುದ್ದ ಎಚ್ಚರಿಕೆ ನೀಡಿದ್ದ. ಇನ್ನೂ ಅನೇಕರು ಸಹ ಎಚ್ಚರಿಕೆ ನೀಡಿದ್ದರು.

ಗಾಧೀಜಿಯುವರನ್ನು ಇಲ್ಲಿ ನೆನೆಯಲಿಕ್ಕೆ ಮತ್ತೊಂದು ಕಾರಣವಿದೆ. ಗಾಂಧೀಜಿಯವರು ಪ್ರತಿಪಾದಿಸಿದ ಸತ್ಯಾಗ್ರಹದ ತಂತ್ರವು ಯಂತ್ರಗಳನ್ನು ಕಳಚುವ ಆಂದೋಲನಕ್ಕೆ ಸೂಕ್ತಮಾರ್ಗವಾಗಿದೆ. ಸತ್ಯಾಗ್ರಹ ಎಂಬುದು ತನ್ನ ಶಬ್ದದಲ್ಲೇ, ಅದು ಸತ್ಯಕ್ಕಾಗಿ ಒತ್ತಾಯಿಸುವ ಅರ್ಥವನ್ನೊಳಗೊಂಡಿದೆ. ಅಂದರೆ ಸತ್ಯದ ಹಾದಿಯನ್ನು ಬಿಟ್ಟು ತಪ್ಪುದಾರಿ ಹಿಡಿದರೆ ಅದನ್ನು ಸರಿಪಡಿಸುವ ಕ್ರಮ. ಆದ್ದರಿಂದ ಸತ್ಯಾಗ್ರಹ ವೈಯುಕ್ತಿಕವಾಗಿರಲಿ, ಸಾಮೂಹಿವಾಗಿರಲಿ ಅವುಗಳ ಉದೇಶ ಬೇರೆ

ಬೇರೆಯಲ್ಲ. ಹಾಗಾಗಿ ಸತ್ಯಾಗ್ರಹದ ಮಾರ್ಗ ಕೇವಲ ಯಾಂತ್ರಿಕ ವಿಧಾನ ಅಥವಾ ತಾತ್ಕಾಲಿಕ ತಂತ್ರವಲ್ಲ. ಅಥವಾ ಕೇವಲ ಸದ್ಗುಣ, ನೀತಿ, ಇತ್ಯಾದಿಯಲ್ಲ. ಆದುದರಿಂದ ಒಂದು ದಮನಕಾರಿ ಮತ್ತು ಅನ್ಯಾಯದ ಸಾಮಾಜಿಕ ವ್ಯವಸ್ಥೆಯಲ್ಲಿ ಸತ್ಯಾಗ್ರಹವು ಒಬ್ಬ ನಿಜವಾದ ವ್ಯಕ್ತಿಯ ಬದುಕಿನ ಮಾರ್ಗ. ಗಾಂಧೀಯವರ ಬದುಕೇ ಒಂದು ದೀರ್ಘ ಸತ್ಯಾಗ್ರಹ.[3] ಸ್ವತಃ ಸೂಟುಧರಿಸಿ ಲಾಯರಿಕೆ ಮಾಡಲು ಕಲಿತಿದ್ದ ಗಾಂಧೀಜಿ, ತನ್ನೆಲ್ಲಾ ವೇಷ ಭೂಷಣಗಳನ್ನು ಒಂದೊಂದಾಗಿ ಕಳಚಿ ಭಾರತದ ಬಡ ರೈತನ ಉಡಿಗೆಗೆ ಬಂದು ನಿಂತರು. ಗಾಂಧೀಜಿ ಬದಲಾವಣೆ ತಂದದ್ದು ತನ್ನದೇ ಬದುಕಿನಲ್ಲಿಯೇ ವಿನಃ ಇತರರಲ್ಲಲ್ಲ.

ಕಾಂಬೋಡಿಯಾದ ಪೋಲ್‌ಪಾಟ್ ತನ್ನ ದೇಶದ ಲಕ್ಷಾಂತರ ಜನರ ಸಾವಿಗೆ ಕಾರಣನಾದ. ದುರಂತವೆಂದರೆ ಆತನ ಉದ್ದೇಶ ಒಳ್ಳೆಯದೇ ಆಗಿತ್ತು. ತನ್ನ ದೇಶದ ಜನಸಂಖ್ಯೆಯನ್ನು ಗ್ರಾಮೀಣ ಪ್ರದೇಶಗಳಿಗೆ ಹಿಂದಕ್ಕೆ ಕಳಿಸುವುದು ಹಾಗೂ ವಿಕೇಂದ್ರೀಕೃತ ಆರ್ಥಿಕ ವ್ಯವಸ್ಥೆಯುನ್ನು ಜಾರಿಗೆ ತರುವುದು ಅವನ ಉದ್ದೇಶವಾಗಿತ್ತು. ಉದ್ದೇಶ ಹಾಳಾಗಿ ಅಪಾರ ನೋವು ಅನುಭವಿಸಿದರು.[4] ಆದುದರಿಂದ ಯಾವುದೇ ಬದಲಾವಣೆ ತರಬೇಕಾದರೂ ತನ್ನ ಸ್ವಂತ ಬದುಕಿನಲ್ಲಿ ತರುವ ಪ್ರಯತ್ನ ಮಾಡಬೇಕೇ ಹೊರತು ಇತರರಲ್ಲಿ ಅಲ್ಲ. ಈ ಮಾತು ಜನಸಾಮಾನ್ಯರಿಗಿಂತ ಮಿಗಿಲಾಗಿ ಜನನಾಯಕರಿಗೆ ಹೆಚ್ಚಾಗಿ ಅನ್ವಯಿಸುತ್ತದೆ. ಗಾಂಧೀಜಿ ಬದಲಾವಣೆ ತಂದದ್ದು ತನ್ನದೇ ಬದುಕಿನಲ್ಲಿ. ಕ್ರಿಸ್ತ ಬದಲಾವಣೆ ತಂದದ್ದು ತನ್ನದೇ ಬದುಕಿನಲ್ಲಿ ಅವರು ತಮ್ಮ ಬದುಕಿನಲ್ಲಿ ತಂದ ಬದಲಾವಣೆ ಅನೇಕರಿಗೆ ಮಾದರಿಯಾಗಿದೆ. ಆದರೆ ಹಿಟ್ಲರ್ ಬದಲಾವಣೆ ತರಬಯಸಿದ್ದು ಇತರರ ಬದುಕಿನಲ್ಲಿ ಈಗ ಅಮೇರಿಕಾದ ಅಧ್ಯಕ್ಷ ತರಹೊರಟಿರುವುದು ತನ್ನದಲ್ಲದೆ ಮತ್ತೊಂದು ಜನಾಂಗ ಹಾಗೂ ಮತ್ತೊಂದು ದೇಶದಲ್ಲಿ. ಹೀಗಿರುವಾಗ[5] ಯಂತ್ರಗಳನ್ನು ಕಳಚುವ ಚಳುವಳಿಯೆಂದರೆ ಇತ್ತ ವೈಯುಕ್ತಿಕ ಬದುಕಿನಲ್ಲಿ ಯಂತ್ರಗಳ ಅವಲಂಬನೆ ಕಡಿಮೆ ಮಾಡಿಕೊಳ್ಳುವ ನೈತಿಕ ಚಳುವಳಿಯೂ ಹೌದು. ಅತ್ತ ಪಾರಂಪರಿಕ ಉತ್ಪಾದನಾ ಪದ್ಧತಿಗಳನ್ನು ಗಟ್ಟಿಗೊಳಿಸುವ ಆರ್ಥಿಕ ಹಾಗೂ ಸಾಮಾಜಿಕ ಚಳುವಳಿಯೂ ಹೌದು. ಅರ್ಥಾತ್ ಅಂತರಂಗ ಹಾಗೂ ಬಹಿರಂಗ ಶುದ್ಧಿಯ ಚಳುವಳಿಗಳು ಮಿಳಿತವಾಗಿ ಆಧ್ಯಾತ್ಮಿಕ ಚಳುವಳಿಯೂ ಹೌದು. ಈ ಅಂಶಗಳನ್ನು ಗಮನಿಸದಾಗ ಸತ್ಯಾಗ್ರಹದ ಅಸ್ತ್ರವು ಪ್ರಸಕ್ತ ದಿನಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದೇ? ಪಾರಂಪರಿಕ ಉತ್ಪಾದನಾ ಪದ್ಧತಿಯನ್ನು ಗಟ್ಟಿಗೊಳಿಸುವುದಾದರೆ, ಮತ್ತೆ ಜಾತಿ ವ್ಯವಸ್ಥೆ, ವರ್ಣವ್ಯವಸ್ಥೆಯನ್ನು ಗಟ್ಟಿಗೊಳಿಸಿದಂತಗಾಗುವುದಿಲ್ಲವೇ? ಪಾರಂಪರಿಕ ಉತ್ಪಾದನಾ ವ್ಯವಸ್ಥೆ ಉಳಿಸಬೇಕೆಂಬುದಾದರೆ, ಎಲ್ಲಾ ವರ್ಗದ ಜನರು ಎಲ್ಲಾರೀತಿ ವೃತ್ತಿಗಳನ್ನು ನಿರ್ವಹಿಸಬಹುದು ಎಂಬ ನಿಲುವು ಇವರ ಈ ಚಳುವಳಿಗೆ ಪುಷ್ಟಿಯಾಗಲಿದೆ ಎಂಬುದು ನನ್ನ ಅಭಿಮತ.

ಯಂತ್ರನಾಗರೀಕತೆಯು ಪರಿಸರ ನೈತಿಕತೆ, ಧರ್ಮ, ರಾಜಕಾರಣ, ಕುಟುಂಬ ವ್ಯವಸ್ಥೆ, ಹಣಕಾಸು, ಇತ್ಯಾದಿಯಾಗಿ ಬದುಕಿನ ಎಲ್ಲಾ ಕ್ಷೇತ್ರಗಳನ್ನು ಅದು ಆವರಿಸಿಕೊಂಡಿದೆ. ಆದ ಕಾರಣ ಬದಲಾವಣೆ ಏನಾದರೂ ತರುವುದಿದ್ದರೆ, ಅದು ನಮ್ಮ ಬದುಕಿನ ಉಳಿದ ಕ್ಷೇತ್ರಗಳಲ್ಲಿ ಬದಲಾಗಲು ಪ್ರೇರೇಪಿಸುತ್ತದೆ. ಹಾಗಾದರೆ

ಏನು ಮಾಡಬೇಕು? ಇಷ್ಟೇ, ರಾಜಕಾರಣ ವಿಕೇಂದ್ರಿಕೃತವಾಗಬೇಕು. ರಾಜಕಾರಣಿಗಳ ಕೈ ಕೆಸರಾಗಬೇಕು. ಬಟ್ಟೆ ಮಲಿನವಾಗಬೇಕು. ಅತಿಯಾದ ವ್ಯಾಮೋಹ ಬಿಡಬೇಕು. ಸರಳ ಉದ್ದೇಶಗಳೊಂದಿಗೆ ಹೋರಾಡಬೇಕು ಮತ್ತೆ ಮನುಷ್ಯ ಆಲಸ್ಯ ತೊಡೆದು ಚೈತನ್ಯಶೀಲತೆಯಿಂದ ಕೆಲಸ ಮಾಡಿದಾಗ ಮಾತ್ರ ಕಳಚುವಿಕೆ ಸುಲಭಸಾಧ್ಯವಾಗುತ್ತದೆ.[5]

ಹಾಗೆ ನೋಡಿದರೆ ಗಾಂಧೀಜಿಯೇನು ಯಂತ್ರವಿರೋಧಿಯಲ್ಲ. ನಮ್ಮ ಮೈಯೇ ಕುಶಲವಾದ ಒಂದು ಯಂತ್ರವಲ್ಲವೇ? ರಾಟೆಯೇ ಒಂದು ಯಂತ್ರ, ಹಲ್ಲಿನ ಸಂದಿಯೊಳಗೆ ಸೇರಿದ ಕಸ ತೆಗೆವ ಹುಲ್ಲು ಕಡ್ಡಿಯೂ ಯಂತ್ರ. ಯಂತ್ರವನ್ನೆಲ್ಲ ಬೇಡ ಎನ್ನುವುದು ಯಂತ್ರ ಯಂತ್ರ ಎಂಬ ಬ್ರಾಂತಿಯನ್ನು ಶರೀರ ಶ್ರಮವನ್ನು ಕಡಿಮೆ ಮಾಡುವ ಯಂತ ಬೇಕೆಂಬ ಭ್ರಾಂತಿ ಈಗ ಬೆಳೆಯುತ್ತಿದೆ. ದುಡಿಮೆ ಕಡಿಮೆಯಾಗಿ ಸಾವಿರಾರು ಜನ ಹಸಿವಿನಿಂದ ಸಾಲಾಗಿ ಬೀದಿಯಲ್ಲಿ ಬಿದ್ದಾರು. ಹತ್ತು ಜನ ದುಡಿಮೆ ಮಾಡುವ ಉದ್ದೇಶವಲ್ಲ ನನ್ನದು ಇಡೀ ಮಾನವ ಕೋಟಿಗೇ ದುಡಿಮೆ ಮಾಡಬಯಸುತ್ತೇನೆ. ಹತ್ತು ಜನರ ಕೈಯಲ್ಲಿ ಧನ ಸಂಗ್ರಹವಾಗಲೆಂದಲ್ಲ. ಎಲ್ಲರ ಕೈಯಲ್ಲೂ ಹಣ ಸೇರಲಿ ಎಂದು ನನ್ನ ಬಯಕೆ ಮೂಲತಃ ಯಂತ್ರವೇ ಬೇಡವೆನ್ನುವುದು ನನ್ನ ನಿಲುವಲ್ಲ, ಅವುಗಳ ದುರುಪಯೋಗ ಪಡೆಯುವುದು. ವಿಜ್ಞಾನದ ಸತ್ಯ ಸೂತ್ರಗಳು ಶೋಧನೆಗಳು ಲೋಭದ ಸಾಧನಗಳಾಗಬಾರದು. ಇದು ನಿಲ್ಲಬೇಕು. ಆಗ ಕೂಲಿಗಾರರಿಗೆ ಈ ಅತಿ ದುಡಿತ ತಪ್ಪೀತು. ಯಂತ್ರ ಪ್ರತಿಕೂಲವಾಗುವ ಬದಲು ಅನುಕೂಲವಾದೀತು. ಯಂತ್ರವೆಂಬುದೇ ಹಾಳಾಗಲಿ ಎಂಬುದಲ್ಲ ನನ್ನಗುರಿ. ಅದಕ್ಕೊಂದು ಪರಿಮಿತಿಯಿರಲಿ ಎಂಬುದು. ಯಂತ್ರವು ಮನುಷ್ಯನ ಕೈಕಾಲು ಕಟ್ಟಿಹಾಕಿದರೆ ಅದು ಸರಿಯಲ್ಲ. ಉದಾ:- ಹೊಲಿಗೆ ಯಂತ್ರವನ್ನೇ ತೆಗೆದುಕೊಳ್ಳಿ. ತನ್ನ ಹೆಂಡತಿ ಕಷ್ಟಪಟ್ಟು ಹೊಲಿಯುತ್ತಿದ್ದುದನ್ನು ನೋಡಿ ಸಿಂಗರ್ ಹೊಲಿಗೆ ಯಂತ್ರ ಕಂಡುಹಿಡಿದ. ಅದರಿಂದ ಆ ಯಂತ್ರವನ್ನು ಕೊಳ್ಳಬಲ್ಲವರೆಲ್ಲರಿಗೂ ದುಡಿತವನ್ನು ಕಡಿಮೆ ಮಾಡಿದ. ಈ ಹೊಲಿಗೆ ಯಂತ್ರವನ್ನು ಮಾಡಲು ಕಾರ್ಖಾನೆ ಬೇಡವೇ ಮತ್ತೆ! ಅದಕ್ಕೆ ಪ್ರಕೃತಿ ಬಲದಿಂದ ನಡೆವ ಸಾದಾ ಯಂತ್ರವಾದರೂ ಬೇಕಲ್ಲವೆ?[6] ನಿಜ ಬೇಕು ಅಂಥವನ್ನು ರಾಷ್ಟ್ರದ ಆಡಳಿತಕ್ಕೆ ಒಳಪಡಿಸಿ, ನಡೆಸಬೇಕೆನ್ನುವಷ್ಟರ ಮಟ್ಟಿಗೆ ನಾನು ಸಮಾಜವಾದಿ ಆದರ್ಶ ರೀತಿಯಲ್ಲಿ ಆಕರ್ಷಕವಾಗುವಂತೆ ಅದನ್ನು ನಡೆಸಬೇಕು. ಅದರ ಮೂಲ ದುರಾಸೆಯಾಗಬಾರದು. ಮೈಯದ್ದಂತೆಯೇ ಯಂತ್ರ ಬೇಡವೆಂದರೂ ಅಂಟಿಕೊಂಡೇ ತೀರುತ್ತದೆ. ಅನಿವಾರ್ಯ, ಆಗಲೇ ಹೇಳಿದೆನಲ್ಲ. ನಮ್ಮ ಮೈಯೇ ಒಂದು ಕುಶಲವಾದ ಯಂತ್ರ. ಹಾಗಾದರೆ ಕಳಚಬೇಕಾದ ಯಂತ್ರಗಳು ಯಾವುವು? ಎಲ್ಲಿ ಯಂತ್ರ ಸ್ಥಾವರ ಅನಿವಾರ್ಯವೋ, ಅಲ್ಲೆಲ್ಲ ಅವುಗಳ ರಾಷ್ಟ್ರೀಕರಣ ಮಾಡಬೇಕು. ಯಂತ್ರಗಳು ಲಾಭ ಬಡುಕರ ಕೈಗೆ ಸಿಕ್ಕದ ಹಾಗೆ ಮಾಡಬೇಕು. ದುಡಿಯುವ ವರ್ಗದ ಜನರ ಕೈಗಳಿಗೆ ನೆರವಾಗಬೇಕು. ಅಂತಹ ಯಂತ್ರಗಳು ಉಳಿದು ಬಂದರೆ ಅಡ್ಡಿಯಿಲ್ಲ.[7] ಅರ್ಥಾತ್ ಅಂತಹ ಯಂತ್ರಗಳಿಗೆ ವಿನಾಯಿತಿ ನೀಡಬೇಕೆಂಬ ವಾದ ಮಂಡನೆಯನ್ನು ಮಾಡುತ್ತಾರೆ ಪ್ರಸನ್ನ.

ಯಂತ್ರ ತಯಾರಿಸುವ ಯಂತ್ರಗಳು:

ಯಂತ್ರ ತಯಾರಿಸುವ ಯಂತ್ರಗಳು ನೇರವಾಗಿ ನಮ್ಮನ್ನು ತಾಕುವುದಿಲ್ಲ, ದಿನ ನಿತ್ಯದ ಬದುಕಿನಲ್ಲಿ ಅವುಗಳ ಬಳಕೆಯಾಗುವುದಿಲ್ಲ. ಆದರೆ ನಗರಗಳ ಹೊರವಲಯದ ಬೃಹತ್ ಸ್ಥಾವರಗಳ ಒಳಗೆ, ಕಾಂಪೌಂಡುಗಳ ನಡುವೆ ಮರೆಯಾಗಿ ಕುಳಿತು ಹೊಗೆಯಾಡುತ್ತಿರುತ್ತವೆ. ಇಂತಹ ಯಂತ್ರಗಳನ್ನು ಕಡಿಮೆ ಮಾಡಬೇಕು. ಹಿಂದೆಯೂ ಯಂತ್ರಗಳಿದ್ದವು. ಬಡಗಿನ, ಕಮ್ಮಾರಿಕೆ, ಎರಕ ಹುಯ್ಯುವುದು, ಬಂಡಿ, ಗಾಡಿ, ಕತ್ತಿ, ಕುಡುಗೋಲು, ನೊಗ, ಪಾತ್ರೆಪಗಡಿ, ಆಭರಣ, ಇತ್ಯಾದಿ ತಯಾರಿಸುತ್ತಿದ್ದವು. ಇವುಗಳಿಂದ ಪರಿಸರಕ್ಕೆ ಯಾವುದೇ ಹಾನಿಯಾಗುತ್ತಿರಲಿಲ್ಲ. ಆದರೆ ಇಂದು ಬಳಕೆಯಾಗುತ್ತಿರುವ ಯಂತ್ರಗಳು ಪ್ರಕೃತಿಗೆ ಪ್ರತಿಕೂಲ ಪರಿಣಾಮವಾಗಿವೆ. ಯಂತ್ರಕಳಚಲು, ಫರಮಾನು ಹೊರಡಿಸಬೇಕಿಲ್ಲ. ಕೆಲವು ಸರಳ ತಂತ್ರಜ್ಞಾನ ಉಳಿದು ಬಂದರೆ ಯಾವುದೇ ಅಡ್ಡಿಯಿಲ್ಲ. ಪರಿಸರಕ್ಕೆ ಹಾನಿಕರವಲ್ಲದ್ದು, ಕೈಕೆಲಸಗಳಿಗೆ ಪೂರಕವಾಗುವಂತಹದ್ದು ಉಳಿದು ಬಂದರೆ ಉಳಿಯಲಿ. ಪ್ರತಿಯೊಬ್ಬರಿಗೂ ಅವರದ್ದೇ ಆದ ಬದುಕಿದೆ. ಅವರದ್ದೇ ಆದ ಅವಲಂಬನೆ ಇದೆ. ಕಳಚುವುದು ಅವರವರ ಮಿತಿಯಲ್ಲಿ ನಡೆಯಬೇಕಿದೆ. ಯಂತ್ರಗಳ ಕಳಚುವಿಕೆ ಎಲ್ಲಿಗೆ ನಿಂತೀತು? ಕಳಚಿದ ನಂತರ ಬದುಕು ಯಾವ ರೂಪ ಪಡೆದೀತು? ಯಾವುದು ಉಳಿದೀತು? ಯಾವುದು ಬೆಳೆದೀತು? ಕಾದುನೋಡಬೇಕಾಗಿದೆ. ಇನ್ನು ವಾಹನವೆಂಬ ಯಂತ್ರ ಕಳಚುವುದು ಸಾಧ್ಯವೇ? ವಾಹನಗಳ ಸಹಜತೆ, ದೇಹ ಮನಸ್ಸುಗಳ ಅವಿರತ ಓಡಾಟ, ವೇಗ ಮತ್ತು ಆವೇಗಗಳು ಮನುಷ್ಯನಿಗೆ ಒಳ್ಳೆಯದೇ? ಮುಂದುವರೆಯುವ ಭರದಲ್ಲಿ ನಾವೇನಾದರೂ ತಪ್ಪು ಹೆಜ್ಜೆಗಳನ್ನು ಹಾಕುತ್ತಿದ್ದೇವೆಯೇ? ಗಾಂಧೀಜಿ ಹಿಂದ್ ಸ್ವರಾಜ್‌ನಲ್ಲಿ ರೈಲನ್ನು ವಿರೋಧಿಸುತ್ತಾರೆ. ಆದರೂ ರೈಲು ವ್ಯವಸ್ಥೆ ಉಳಿದುಬಂದಿದೆ. ಈಗಿರುವ ವೇಗದ ಕಾರು ಸೂಪರ್ ಸಾನಿಕ್, ಚಂದ್ರಯಾನ ನೌಕೆ, ಅಣುಚಾಲಿತ ಜಹಾಜು ಇತ್ಯಾದಿಗಳು ಅಂದೇ ಬಳಕೆಯಲ್ಲಿದ್ದರೆ ಆಗ ಗಾಂಧೀಜಿಯವರ ನಿಲುವೇನಾಗಿರುತ್ತಿತ್ತು? ಈ ಎಲ್ಲಾ ರೀತಿಯ ವಾಹನಗಳು ಒಂದರ್ಥದಲ್ಲಿ ಜನರಿಗೆ ಸಹಾಯಕವಾಗಿದೆ ಎನ್ನುವುದಕ್ಕಿಂತಲೂ ಯುದ್ಧ ಮತ್ತು ಮಾರುಕಟ್ಟೆಯ ಕಾರಣಕ್ಕಾಗಿ ಬಳಕೆಯಾಗುತ್ತಿರುವುದೇ ಹೆಚ್ಚು.

ಉದಾ:- ಡಾಂಬರು ಬಂದ ಸಂದರ್ಭದಲ್ಲಿ ಹುಟ್ಟಿಕೊಂಡ ಅನೇಕ ಮಾರಾಟದ ಮಳಿಗೆಗಳು, ಹೆಂಡದಂಗಡಿ, ವೇಶ್ಯಾವಾಟಿಕೆ, ಗ್ಯಾರೇಜು, ಲಾಡ್ಜು, ಡಾಭಾಗಳನ್ನು ತೆಗೆಯಲಾಯಿತು. ಕಡಿಮೆ ಪ್ರಗತಿಯ ಮುಖವಾಡ ಹೊತ್ತ ಪಾಶ್ಚಾತ್ಯ ಸಂಸ್ಕೃತಿ ನಮ್ಮನ್ನು ಆಕರ್ಷಿಸಿದ್ದು ಈ ರೀತಿಯಲ್ಲಿ.[8] ಶಸ್ತ್ರಾಸ್ತ್ರ ತಯಾರಿಕೆಯನ್ನು 'ರಕ್ಷಣಾ ಉದ್ದಿಮೆ'ಯೆಂಬ ಸುಳ್ಳು ಹೆಸರಿನಿಂದ ಕರೆಯಲಾಗುತ್ತದೆ. ಶಸ್ತ್ರಾಸ್ತ್ರ ರಕ್ಷಣೆಗಾಗಿವೆ ಎಂಬುದು ಅರ್ಧಸತ್ಯ. ರಾಮಾಯಣದ ಅರಣ್ಯಕಾಂಡದಲ್ಲಿ ಶಸ್ತ್ರಾಸ್ತ್ರಗಳ ಬಗ್ಗೆ ತಿಳಿವು ನೀಡುವ ಒಂದು ಪುಟ್ಟಕಥೆ ಬರುತ್ತದೆ.

ಒಮ್ಮೆ ಕೆಲವು ಋಷಿಗಳು ಆಶ್ರಮಕ್ಕೆ ಬರುತ್ತಾರೆ. ತಮ್ಮ ತಪಸ್ಸಿಗೆ ತೊಂದರೆ ಕೊಡುತ್ತಿರುವ ರಾಕ್ಷಸರ ಬಗ್ಗೆ ವಿವರಿಸಿ ಹೇಳಿ ತಮಗೆ ರಾಕ್ಷಸರಿಂದ ರಕ್ಷಣೆ ನೀಡಬೇಕೆಂದಾಗ ರಾಮ ಒಪ್ಪಲು, ಸೀತೆ ರಾಮನಿಗೆ ಒಂದು ಕಥೆಯನ್ನು

ಹೇಳುತ್ತಾಳೆ. ಒಮ್ಮೆ ಸನ್ಯಾಸಿ ತಪಸ್ಸು ಮಾಡುತ್ತಿರಲು ತನ್ನ ಆಯುಧ ಆಶ್ರಮದಲ್ಲಿ ಇಟ್ಟುಹೋಗಲು ಸನ್ಯಾಸಿಯನ್ನು ಕೈಬೀಸಿ ಕರೆಯುತ್ತದೆ. ಅದೇ ಆಯುಧದಿಂದ ಬೇಡರವನು ಸಾಯುತ್ತಾನೆ. ಆಧುನಿಕ ಪ್ರಜಾ ಪ್ರಭುತ್ವಗಳು ಸೀತೆ ಹೇಳಿದ ಕಥೆಯನ್ನು ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು. ಶಸ್ತ್ರಾಸ್ತ್ರ ತಯಾರಿಕೆ ಎಂಬುದು ಇಂದು ವಿಶ್ವದ ಅತೀ ದೊಡ್ಡ ಉದ್ದಿಮೆಯಾಗಿದ್ದು, ಕೇವಲ ಸರ್ವಾಧಿಕಾರಿಗಳು, ದುರಾಡಳಿತಗಾರರು, ಕಳ್ಳರು, ದರೋಡೆಕೋರರು ಮಾತ್ರವೇ ಅಲ್ಲ ಪ್ರಜಾಪ್ರಭುತ್ವ ವ್ಯವಸ್ಥೆ, ಸಮಾಜವಾದಿ ದೇಶಗಳು, ಅಹಿಂಸಾತ್ಮಕ ನಾಗರೀಕರು ಹಾಗೂ ಬೌದ್ದರು ಸಹ ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಭಾಗೀದಾರಿಗಳಾಗಿದ್ದಾರೆ. ಶಸ್ತ್ರಾಸ್ತ್ರ ಅಭಿವೃದ್ಧಿ ಯುದ್ಧಕಲೆಯ ಅಭಿವೃದ್ದಿ ಮತ್ತು ರಕ್ಷಣಾವಲಯದ ಸಂಶೋಧನೆಗಾಗಿ ಇಂದು ಬೇರೆಲ್ಲಾ ಉದ್ದಿಮೆಗಿಂತ ಹೆಚ್ಚಿನ ಹಣವು ಖರ್ಚಾಗುತ್ತಿದೆ. ಅನೇಕರಿಗೆ ತಾವು ಶಸ್ತ್ರಾಸ್ತ್ರ ತಯಾರಿಕೆ ಹಾಗೂ ಯುದ್ಧಕಲೆಗಳ ಅಭಿವೃದ್ಧಿಗಾಗಿ ಕೆಲಸಮಾಡುತ್ತಿದ್ದೇವೆಂಬ ಅರಿವು ಕೂಡಾ ಇಲ್ಲ. ಅಷ್ಟೊಂದು ವಿಶಾಲವಾಗಿ ಹಾಗೂ ಸಂಕೀರ್ಣವಾಗಿ ಆವರಿಸಿದೆ. ಈ ಅಂತರಾಷ್ಟ್ರೀಯ ಉದ್ದಿಮೆ, ಶಿಕ್ಷಣ, ಬಡತನ ನಿರ್ಮೂಲನ, ಸಂಸ್ಕೃತಿ, ಆರೋಗ್ಯ, ಗ್ರಾಮೀಣಾಭಿವೃದ್ದಿ, ಅರಣ್ಯ, ಇತ್ಯಾದಿ ಕ್ಷೇತ್ರಗಳ ಮೇಲೆ ಸರ್ಕಾರಗಳು ಖರ್ಚುಮಾಡುವ ಒಟ್ಟು ಹಣವು ದೇಶವೊಂದರ ರಕ್ಷಣಾ ಇಲಾಖೆಯ ಬಜೆಟ್‌ಗೆ ಹೋಲಿಸಿದರೆ, ಪುಡಿಕಾಸಿನಂತೆ ತೋರುತ್ತದೆ.

ಶತೃತ್ವ ಸದಾಕಾಲ ಉಳಿಯುವಂತೆ ಮಾಡಿರುವ ಅಮೇರಿಕಾ ದೇಶವು ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳಿಗೂ ಶಸ್ತ್ರಾಸ್ತ್ರವೊದಗಿಸುತ್ತಿದ್ದು 'ಎಲ್ಲೋ ಗುಂಡಿ ಒತ್ತಿ, ಇನ್ನೆಲ್ಲೋ ಕೊಲ್ಲು' ಎಂಬ ತಂತ್ರಜ್ಞಾನದ ಆವಿಷ್ಕಾರ. ಇವೆಲ್ಲವನ್ನು ನೋಡಿದಾಗ ಪರಿಸ್ಥಿತಿ ಯಾವ ಹಂತ ತಲುಪುವುದೋ ಎಂಬುದು ಲೇಖಕರಿಗಿರುವ ಆತಂಕ. ಆದರೆ ಇಂದು ಶಸ್ತ್ರಾಸ್ತ್ರವಿಲ್ಲದೇ ಇಡೀ ದೇಶವೇ ನಿರ್ನಾಮವಾಗುವ ಹಂತ ತಲುಪಿರುವಾಗ ಎಷ್ಟರಮಟ್ಟಿಗೆ ಇವುಗಳ ಬಳಕೆ ಕಡಿಮೆ ಮಾಡಲು ಸಾಧ್ಯ ಎಂಬುದು ಕಾದು ನೋಡಬೇಕಾಗಿದೆ.

ಮಾರಕವಾದ ಶಸ್ತ್ರಾಸ್ತ್ರಗಳನ್ನು ಹೇಗೆ ರಕ್ಷಣಾ ಉದ್ದಿಮೆ ಎಂಬ ಕಡಿಮೆ ಮುಜುಗರದ ಹೆಸರಿನಿಂದ ಕರೆದು ಸತ್ಯವನ್ನು ಮರೆಮಾಚಲಾಗುತ್ತದೆಯೋ, ಹಾಗೆಯೇ ಸಂವಹನ ಮಾಧ್ಯಮ ಎಂಬುದು ಸಹಾ ಸತ್ಯವನ್ನು ಮರೆಮಾಚುವ ಹೆಸರೇ ಆಗಿದೆ. ಮಾಧ್ಯಮಗಳು ನೀಡುವ ಹೇಳಿಕೆಗಳೇ ಅಂತಿಮ ಸತ್ಯ ಎಂದು ನಂಬುವ ಅನೇಕ ಜನರಿದ್ದಾರೆ. ಮತದಾರನಿಗೆ ಪತ್ರಿಕೆಯೆಂದರೆ ಬೈಬಲ್ ಇದ್ದಹಾಗೆ! ಇನ್ನು ಪತ್ರಿಕೆಗಳೋ ಅವು ಮತ್ತೆ ಮತ್ತೆ ಅಭಿಪ್ರಾಯ ಬದಲಿಸುತ್ತಾ ಇರುತ್ತವೆ. ಶುದ್ಧ, ಅಪ್ರಾಮಾಣಿಕ ಸಂಸ್ಥೆಗಳು ಎಂದರೂ ತಪ್ಪಾಗಲಾರದು.

ಯಂತ್ರ ನಾಗರೀಕತೆಯೇ ಐಹಿಕ ಸುಖ ಹಾಗೂ ಸಂಪತ್ತು ಬದುಕಿನ ಅಂತಿಮ ಸತ್ಯ. ಮೊದಲು ನೇಗಿಲಿನಿಂದ ಉಳುತ್ತಾ ಇದ್ದೆವು ಈಗ ಯಂತ್ರಗಳಿಂದ ಉಳುತ್ತಾ ಇದ್ದೇವೆ. ಭಾರಿ ಭಾರಿ ಜಮೀನನ್ನು ಒಂದೇ ಸಲ ಉಳುತ್ತೇವೆ ಯಾರು ಕೈಕಾಲು ಬಳಸಬೇಕಿಲ್ಲ, ಗುಂಡಿ ಒತ್ತಿದರೆ ಸಾಕು ಊಟ ಬಂದು ಬೀಳುತ್ತದೆ. ಬಟ್ಟೆ ಬಂದು ಬೀಳುತ್ತದೆ. ಪೇಪರ್ ಬಂದು ಬೀಳುತ್ತದೆ. ಮತ್ತೊಂದು ಗುಂಡಿ ಒತ್ತಿದರೆ ಸಾಕು ಗಾಡಿ ಸಿದ್ದವಾಗಿ ನಿಂತಿರುತ್ತೆ. ಇದು ನಾಗರೀಕತೆನಾ? ಕೆಲಸ ಮಾಡಲು ಇಚ್ಛಿಸದ ಸೋಮಾರಿಗಳಿಗೆ ಅನುಕೂಲ ಮಾಡಿಕೊಟ್ಟಂತೆಯಲ್ಲವೇ? ಮೊದಲು

ಮನುಷ್ಯರನ್ನು ಬಲವಂತದಿಂದ ಗುಲಾಮರನ್ನಾಗಿ ಮಾಡುತ್ತಿದ್ದೆವು. ಈಗ ದುಡ್ಡಿನಾಸೆಗೆ ನಾವೇ ಸಂತೋಷದಿಂದ ಗುಲಾಮರಾಗುತ್ತೇವೆ. ಇದು ನಾಗರೀಕತೆಯ ಪರಾಕಾಷ್ಟತೆಯೆಲ್ಲವೇ?[9]

ಓದುಗನು ಹಾಕಿದ ಪ್ರಶ್ನೆಗೆ ಗಾಂಧೀಜಿಯವರು ಸಂಪಾದಕರಾಗಿ ಹೇಳುವ ಮಾತುಗಳಿವು. ಈ ಮಾತುಗಳನ್ನು ಗಾಂಧೀ ಆಧುನಿಕತೆಯ ವಿರೋಧಿ ಎಂದು ನನಗನಿಸುತ್ತದೆ. ಯಂತ್ರವಿರೋಧಿಯೂ ಆಗಿರಬಹುದು. ನಾಟಕದಲ್ಲಿ ಚರ್ಚೆ ನಡೆಯುವಾಗ ಗುಂಪಿನಿಂದ ಬಂದ ಮಾತುಗಳು ಇವು. ಈ ವಿಚಾರ ಕುರಿತು ನಟಿಯೊಬ್ಬಳು ಪ್ರತಿಕ್ರಿಯಿಸುವುದು ಹೀಗೆ: ಇದು ಗಂಭೀರವಾದ ಪ್ರಶ್ನೆ. ಉದಾ:– ಮಿಸ್ಟರ್ ಮಿಡ್ಲಟನ್ ಮರ‍್ರೆ ಹೀಗೆ ಹೇಳ್ತಾರೆ... ತನ್ನ ಆದರ್ಶದ ಆತುರದಲ್ಲಿ ಗಾಂಧಿ ಚರಕ ಕೂಡ ಒಂದು ಯಂತ್ರ ಅನ್ನೋ ಸಂಗತಿನೇ ಮರೆತುಬಿಡ್ತಾರೆ ಅಂತಾರೆ_ ಹಾಗಿದ್ದರೆ ಚರಕ ಬಹಿಷ್ಕರಿಸ ಬೇಕಾ ಅಂತ ಪ್ರಶ್ನೆ ಮಾಡ್ತಾರೆ. ನಟಿಯ ಮಾತಿಗೆ ನಟನಾದವನು ಪೂರಕವಾದ ಮಾತುಗಳನ್ನು ವ್ಯಕ್ತಪಡಿಸುವುದು ಹೀಗೆ. ಪ್ರೊಫೆಸರ್ ಬರ್ನ್ಸ್ ಗಾಂಧೀಜಿಯವರನ್ನು ಟೀಕೆ ಮಾಡುತ್ತಾ ಯಾವುದೇ ತಂತ್ರಜ್ಞಾನವನ್ನು ದುರ್ಬಳಕೆ ಮಾಡಬಹುದು. ದುರ್ಬಳಕೆಯ ನೈತಿಕ ಜವಾಬ್ದಾರಿ ಯಂತ್ರಗಳನ್ನು ಬಳಕೆ ಮಾಡುವ ಮನುಷ್ಯನದ್ದೇ ಹೊರತು ಯಂತ್ರದ್ದಲ್ಲಾ ಅಂತಾರೆ...[10]

ಈ ರೀತಿಯ ಮಾತುಗಳನ್ನು ಕೇಳಿದಾಗ ಯಂತ್ರಗಳನ್ನು ಕಳಚುವುದು ಬದುಕಿನಲ್ಲಿ ಎಂಬುದರ ಅರ್ಥ ನಮಗೆ ಗೋಚರವಾಗುತ್ತದೆ. ಯಾವುದೇ ಒಂದು ವಸ್ತುವಿನಿಂದ ಅನುಕೂಲವೂ ಆಗಬಹುದು ಅನಾನುಕೂಲವೂ ಆಗಬಹುದು. ಬಳಕೆಯು ಮಿತಿಯಲ್ಲಿದ್ದರೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ... 'ಅತಿಯಾದರೆ ಅಮೃತವೂ ಸಹ ವಿಷ' ಎಂಬ ಮಾತಿನಂತೆ ಮಿತಿ ಮೀರಿದರೆ ಅದರ ದುಷ್ಪರಿಣಾಮ ಅನುಭವಿಸಬೇಕಾದವರು ನಾವು ಎಂಬುದು ಈ ಅಧ್ಯಯನದ ಆಶಯ.

ಯಂತ್ರ ಆಗಮನವಾದ ಪ್ರಾರಂಭದಲ್ಲಿ ಅದು ಅನ್ಯತೆಯ, ಬುದ್ಧಿ ವಿಕಲ್ಪದ, ಪ್ರಧಾನ ಮೂಲ ಎಂದು ಕಾಣಲಾಗಿತ್ತು. ಈಗ ಅದು ಮಾನವ ಕ್ರಿಯೆಯ ಮೂಲಾಧಾರವಾಗಿದೆ. ಶೋಷಣೆ, ವಿನಾಶ, ವಿಧ್ವಂಸ ಮತ್ತು ಅಮಾನವೀಕರಣ ತುಂಬಿದ ಕತೆಯೊಂದು ಇಂದು ಮನುಕುಲದ ವಿಶಿಷ್ಟ ಹಾಗೂ ಅಭೂತಪೂರ್ವ ಯಶಸ್ಸಿನ ಸಂಕೇತವಾಗಿ ಪರಿಗಣಿಸಲ್ಪಟ್ಟಿದೆ. ಉಗಿಯಂತ್ರದಿಂದ ಕಂಪ್ಯೂಟರ್ ವರೆಗೆ ಸಾಗಿ ಬಂದ ಸ್ಪಷ್ಟವಾಗಿ ಗೋಚರಿಸುವ ಆಧುನಿಕ ವಿಜ್ಞಾನದ ಫಲವು ಯಂತ್ರಯುಗವೆಂದು ವ್ಯಾಖ್ಯಾನಗೊಂಡಿದೆ.[11]

ಯಂತ್ರಕ್ಕೆ ಗಾಂಧಿಯ ವಿರೋಧ ಎಷ್ಟು ಪರಿಪೂರ್ಣ ಮಟ್ಟದಲ್ಲಿತ್ತೆಂದರೆ ಅವರ ಯಂತ್ರ ವಿರೋಧವು ಆಧುನಿಕ ವಿಜ್ಞಾನಕ್ಕೆ ಮತ್ತು ತಾನು ಸಾರ್ವತ್ರಿಕ ಸತ್ಯತೆ, ಶ್ರೇಷ್ಠ ತಿಳುವಳಿಕೆ ಮತ್ತು ಭೌತಿಕ ಕಲ್ಯಾಣದ ಸಾಧನ ಎಂದು ಹೇಳಿಕೊಳ್ಳುವ ಅದರ ವಿಚಾರಧಾರೆಗ ಪ್ರಬಲ ಸವಾಲಿನಂತೆ ಕಾಣುತ್ತಿತ್ತು.[12]

ದಾದಾಬಾಯಿ ನವರೋಜಿಯವರು ಆರ್ಥಿಕ ಸೋರುವಿಕೆಯ ಬಗ್ಗೆ ಪ್ರಸ್ತಾಪಿಸುತ್ತಾ, ಮಹಾತ್ಮ ಗಾಂಧಿಯವರು ನಾವು ಸೋಮಾರಿಗಳ ರಾಷ್ಟ್ರವಾಗಿ ಪರಿವರ್ತಿತವಾಗುತ್ತಿರುವುದೇ ಅತ್ಯಂತ ದೊಡ್ಡ ಸೋರಿಕೆ ಎಂದು ಹೇಳಿದರು. ಸೋಮಾರಿತನವನ್ನು ನಿರುದ್ಯೋಗದ ಜೊತೆ ತಳುಕು ಹಾಕಬಾರದು ಅವೆರಡು ಸಂಪೂರ್ಣ ವಿಭಿನ್ನ ಸಂಗತಿಗಳು. ಒಂದೆಡೆ, ಮನುಷ್ಯನನ್ನು ಯಂತ್ರವಾಗಿ ಪರಿವರ್ತಿಸುವ ಹೊಸ ಬಗೆಯ ವೇಗ ಮತ್ತು ಯಂತ್ರಾಗಾರ ಇನ್ನೊಂದೆಡೆ ಕಾಲದ ಪರಿಕಲ್ಪನೆಯಲ್ಲಿ ಅಸಂಗತಗೊಳಿಸುವ ಸೋಮಾರಿತನ.

ಈ ಸೋಮಾರಿತನವು ಸಮುದ್ರದಲ್ಲಿ ತೇಲುವ ಮಂಜುಗಡ್ಡೆಯ ರಾಶಿಯಂತೆ. ಆತನ ಸುತ್ತಲಿರುವ ಮನುಷ್ಯರು ಮತ್ತು ಬೇರೆಲ್ಲಾ ಸಂಗತಿಗಳು ಪ್ರಕೃತಿ ಮತ್ತು ಅದರ ಸೂಕ್ಷ್ಮ ವಿದ್ಯಮಾನಗಳ ಬಗೆಗಿನ ಆತನ ಜ್ಞಾನವನ್ನು ಗಮನಿಸಿದರೆ ಅಥವಾ ಆತನಲ್ಲಿರುವ ಕಲೆ ಹಾಗೂ ಕರ ಕೌಶಲ್ಯಗಳ ವಿಸ್ತಾರವನ್ನು ಸೂಕ್ಷ್ಮ ವಿದ್ಯಮಾನಗಳ ಬಗೆಗಿನ ಆತನ ಜ್ಞಾನವನ್ನು ಗಮನಿಸಿದರೆ ಅಥವಾ ಆತನಲ್ಲಿರುವ ಕಲೆ ಹಾಗೂ ಕರ ಕೌಶಲ್ಯಗಳ ವಿಸ್ತಾರವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಮಂಜುಗಡ್ಡೆಯಲ್ಲಿ ಕಾಣುವ ತಲೆಯಂತೆ ಕೇವಲ ಹತ್ತರಲ್ಲಿ ಒಂದರಷ್ಟು ಕಾಣುವ ಅವನ ಪ್ರಕಟರೂಪದ ಅಡಿಯಲ್ಲಿರುವ ಆತನ ಅನಂತ ಜ್ಞಾನ ಭಂಡಾರವನ್ನು ಯಂತ್ರದ ಚಟುವಟಿಕೆಗಳು ಮುಚ್ಚಿಹಾಕಿದೆ ಎಂಬುದು ಅರಿವಾಗುತ್ತದೆ.[13]

ಈ ವಿಫಲ ದೇಸೀ ಜ್ಞಾನಭಂಡಾರವು ಕೇವಲ ಹತ್ತು ಶೇಕಡ ಯಂತ್ರಜ್ಞಾನಕ್ಕೆ ಅಸಂಗತ ಎನಿಸಿಬಿಟ್ಟಿದೆ. ಹಾಗಾಗಿ ಈ ಜ್ಞಾನಸಂಪತ್ತು ಅತಿ ವಿಮರ್ಶೆ, ವಿಶ್ಲೇಷಣೆಗೊಳಪಟ್ಟಿದೆ. ರಾಷ್ಟ್ರದ ಉದ್ದಗಲಕ್ಕೂ ಹರಡಿರುವ ರೈತರು, ಕುಶಲಕರ್ಮಿಗಳು, ಬುಡಕಟ್ಟು ಜನಾಂಗದವರು, ಹೆಂಗಸರು ಹೆಚ್ಚು ಜ್ಞಾನ ಸಂಪನ್ನರು ಮತ್ತು ವೈಜ್ಞಾನಿಕವಾಗಿ ತಮ್ಮ ಕಾರ್ಯಗಳನ್ನು ನಿರ್ವಹಿಸಬಲ್ಲ ಸಾಮರ್ಥ್ಯವುಳ್ಳವರು ಆದರೆ ಅವರು ಯಂತ್ರಗಳೊಡನೆ ಸಂಬಂಧವಿಲ್ಲದವರು. ಯಂತ್ರವೂ ಜನರನ್ನು ನಾಶಗೊಳಿಸುವ ಮನುಷ್ಯನನ್ನು ಕೇವಲ ಕೂಲಿ ಕಾರ್ಮಿಕರನ್ನಾಗಿ ಪರಿವರ್ತಿಸುವ ಮಾನವ ಕ್ರಿಯೆಯನ್ನು ಅನ್ಯರಿಗೆ ದುಡಿಮೆಯನ್ನಾಗಿ ಪರಿವರ್ತಿಸುವ ಅತ್ಮೋತ್ಸರ್ಗವು ಕೇವಲ ಸ್ವಾರ್ಥ ದುರಾಶೆ ಯನ್ನಾಗಿ ಮಾಡುವ ಸಮುದಾಯ ಭ್ರಾತೃತ್ವವನ್ನು ಛಿದ್ರಗೊಳಿಸಿ ಕೇವಲ ಆರ್ಥಿಕ ವರ್ಗಸೃಷ್ಟಿಸುವ ಸಾಧನ. ಯಂತ್ರದ ಯಶೋಗಾಥೆಯು ಸಾಧನೆಗಳೆಲ್ಲವೂ ಏನನ್ನು ಒಳಗೊಳ್ಳದ ಯಶೋಗಾಥೆಯಾಗಿದೆ ಮತ್ತು ಇದು ಸೋಮಾರಿಗಳೆಂದೆನಿಸಿರುವ ಶೇಕಡ 90ರಷ್ಟು ಜನರು ಮಂಜುಗಡ್ಡೆಯಂತೆ ಮುಳುಗಿರುವವರೆಗೆ ಮುಂದುವರೆಯುತ್ತದೆ.[14]

ಯಂತ್ರವು ಎಂದೂ ಮನುಷ್ಯನಿಗೆ ಬದಲಿಯಾಗಬಾರದು. ಅದು ಮನುಷ್ಯನಿಗೆ ಕೇವಲ ನೆರವಾಗಬೇಕು ಅಂದರೆ ಮಾನವನ ಕೈಯಲ್ಲಿ ಅದು ಸಾಧನವಾಗಬೇಕು ಎಂದು ಗಾಂಧೀಯವರು ಪದೇಪದೆ ಹೇಳುತ್ತಿದ್ದರು. ಮಾನವನಿಗೆ ಬದಲಿಯಾಗಿ ರೂಪುಗೊಂಡಿರುವ ಆಧುನಿಕ ಯಂತ್ರದ ವಿಶಿಷ್ಟತೆಯಿಂದಾಗಿ ಸಮಾಜದಲ್ಲಿ ಅದು ಮಾನವನಿಗೆ ಹೊರತಾದ ಶಕ್ತಿಗೆ ಜನ್ಮನೀಡಿದೆ. ಈ ಶಕ್ತಿಯೇ ಬಂಡವಾಳ. ಇದರ ಜೊತೆಗೆ ವಸ್ತುನಿಷ್ಠತೆ, ಸಾರ್ವತ್ರಿಕತ್ವ ಮತ್ತು ಮೌಲ್ಯಮುಕ್ತತೆ ಮುಂತಾದ ಪರಿಕಲ್ಪನೆ ನ್ಯಾಯಸಮ್ಮತ ಗುಣಗಳನ್ನು ಪಡೆದುಕೊಂಡು ಬಿಟ್ಟಿವೆ. ಮನುಷ್ಯನ ವೈಚಾರಿಕ ತರ್ಕ

ಅವನಿಂದ ಹೊರನಿಂತು ಆಧುನಿಕ ವಿಜ್ಞಾನ ಮತ್ತು ಆಧುನಿಕ ಪ್ರಭುತ್ವದಲ್ಲಿ ಆತನಿಗೆ ಮುಖಾಮುಖಿಯಾಗಿ ನಿಲ್ಲುತ್ತದೆ.[15]

ಯಂತ್ರವನ್ನು ಹೊಂದದೆ ಅಥವಾ ದಾಸ್ಯಕ್ಕೂ ಒಳಗಾಗದೆ ರೈತರು ಕುಶಲಕರ್ಮಿಗಳು ಬಂಡವಾಳ ಪ್ರಬಲವಾಗಿರುವ ಈ ಯಂತ್ರಯುಗದಲ್ಲಿ ಜೀವನ ದೂಡುತ್ತಿದ್ದಾರೆ. ಅವರು ಏನು ಮಾಡಬೇಕಾದರೂ ಹಣ ಅವಶ್ಯಕ. ಈ ಅವಶ್ಯಕತೆಯು ಅವರ ಸಾಮಾಜಿಕ ಸಂರಚನೆಗಳನ್ನು ಹಣಕಾಸು ಚಲಾವಣೆಯ ರೂಪಕ್ಕೆ ತೆರೆಯುತ್ತದೆ. ಒಂದು ಕಡೆ ಅವರಲ್ಲಿ ಹಣವಿಲ್ಲ. ಮತ್ತೊಂದೆಡೆ ಹಣಕಾಸು ವ್ಯವಹಾರವನ್ನು ನಿರ್ವಹಿಸುವ ಜ್ಞಾನವೂ ಇಲ್ಲ. ಏಕೆಂದರೆ ಯಂತ್ರ ಮತ್ತು ಮಾರುಕಟ್ಟೆ ವ್ಯವಹಾರ ತರ್ಕವೆಂದರೆ ಬಂಡವಾಳ ತರ್ಕವೇ ಆಗಿದೆ. ಮತ್ತು ಅವರಿಂದ ಹೊರಗಿನ ಮತ್ತು ವಸ್ತುನಿಷ್ಠ ಶಕ್ತಿಯ ಮೂಲವಾದ್ದರಿಂದ ಅವರು ಅದನ್ನು ಅಂತರಂಗೀಕರಿಸಿಕೊಂಡಿಲ್ಲ. ಆದುದರಿಂದ ಬಂಡವಾಳಮುಕ್ತ ವಿಶ್ವವು ಯಂತ್ರಮುಕ್ತ ವಿಶ್ವವಾಗಲು ಸಾಧ್ಯ. ಇಂತಹ ಜಗತ್ತನ್ನು ಹೊಸದಾಗಿ ಪುನರ್‌ನಿರ್ಮಿಸಲು ಇನ್ನೂ ಯಂತ್ರ ತನ್ನ ಅಡಿಯಾಳಾಗಿ ಮಾಡಿಕೊಳ್ಳದ ಜನರಿಂದ ಮಾತ್ರ ಸಾಧ್ಯ.[16] ಇಂತಹ ವರ್ಗವೊಂದು ಇದೆ ಎನ್ನುವುದಾದರೆ ಆ ವರ್ಗದ ಅವಲೋಕನೆ ಮಾಡುವುದು ಅವಶ್ಯಕವಿದೆ!

<u>ಯಂತ್ರದಿಂದ ಮಾನವನ ಉಚ್ಚಾಟನೆ:</u>

ಮಹಾನಗರಗಳಿಂದ ಹೊರಗಿರುವ ಯಾರನ್ನೇ ಪ್ರಶ್ನಿಸಿ, ಅವರು ಯಂತ್ರ ತಮ್ಮ ದುಡಿಮೆಯನ್ನು ಕಸಿದು ಕೊಂಡ ಕತೆಯನ್ನು ಹೇಳುತ್ತಾರೆ. ಕುಂಬಾರರು, ನೇಕಾರರು, ಕಮ್ಮಾರರು, ಬಡಗಿಗಳು ಇವರೆಲ್ಲರನ್ನು ಯಂತ್ರ ಅವರ ಕೆಲಸದಿಂದ ಉಚ್ಚಾಟಿಸಿ ಅವರ ಸ್ಥಾನದಲ್ಲಿ ತಾನು ಬದಲಿಯಾಗಿ ಕಾರ್ಯನಿರ್ವಹಿಸುತ್ತಿದೆ. ಮಹಿಳೆಯರ ಕೆಲಸವನ್ನೂ ಎಲ್ಲಾ ಕಡೆಯಲ್ಲೂ ಯಂತ್ರ ಕಸಿದುಕೊಂಡಿದೆ. ಗ್ರಾಮೀಣ ಪ್ರದೇಶದಲ್ಲಿ ಸುಮ್ಮನಿರುವ ಲಕ್ಷಾಂತರ ಮಂದಿ ಕೆಲಸ ಕಳೆದುಕೊಂಡಿದ್ದಾರೆ. ನಗರದ ಜನತೆ ಸಹ ತಮ್ಮ ಕೆಲಸವನ್ನು ಕಳೆದು ಕೊಂಡಿದ್ದಾರೆ. ಆದರೆ ಅವರು ಆ ಬಗ್ಗೆ ದೂರುವುದಿಲ್ಲ. ಏಕೆಂದರೆ ಅವರ ಪರಾವಲಂಬಿ ಜೀವಿತಕ್ಕೆ ಕೂಲಿ ಸಂದಾಯವಾಗುತ್ತದೆ. ಮಹಾನಗರಗಳಲ್ಲಿ ಸೇವಾ ಕ್ಷೇತ್ರಗಳ ಕ್ಷಿಪ್ರ ಬೆಳವಣಿಗೆ ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ವ್ಯಾಪಕವಾಗಿ ಹರಡಿಕೊಳ್ಳುತ್ತಿರುವ ನಿರುದ್ಯೋಗ ಇವು ಎರಡೂ ಒಂದೇ ನಾಣ್ಯದ ಎರಡು ಮುಖಗಳು. ಮನುಷ್ಯ ಎಲ್ಲೇ ಇರಲಿ, ಆಧುನಿಕ ಯಂತ್ರ ಅವನ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿದೆ.

ಇದೇ ಚರಕದಿಂದ ನೂಲಿಗೆ, ಮಗ್ಗದಿಂದ ಗಿರಣಿಗೆ, ಬೈಸಿಕಲ್‌ನಿಂದ ಮೋಟಾರ್‌ಕಾರಿಗೆ ಮತ್ತು ಸೌದೆ ಒಲೆಯಿಂದ ಗ್ಯಾಸ್ ಅಥವಾ ವಿದ್ಯುತ್ ಒಲೆಗೆ ಬದಲಾದ ಕತೆ. ಮನುಷ್ಯನನ್ನು ತನಗೆ ಉಪಯುಕ್ತವಾದ ಸಾಧನಗಳನ್ನು ತಯಾರಿಸುವವನೆಂದು ಕರೆಯಲಾಗುತ್ತಿತ್ತು. ಅವನು ಈ ಮೊದಲು ತನ್ನ ಹಾಗೂ ಸಹವರ್ತಿಗಳ ಅಪೇಕ್ಷೆಗನುಗುಣವಾಗಿ ಉಪಕರಣಗಳನ್ನು ತಯಾರಿಸಿ ಬಳಸುತ್ತಿದ್ದ. ಆದರೆ ಈಗ ಯಂತ್ರಗಳೇ ಉಪಕರಣಗಳನ್ನು ಎರಕಕ್ಕೆ ಹಾಕಿ ಅಚ್ಚುಹಾಕುತ್ತವೆ. ಇಷ್ಟೇ ಅಲ್ಲಾ ಅಕ್ಷರಶಃ ಮನುಷ್ಯನ ಸ್ಥಾನಕ್ಕೆ ಬದಲಿಯಾಗುವ ಯಂತ್ರಗಳು

ಮಾನವನ ಸ್ವಾಭಾವಿಕ ಬದುಕನ್ನೇ ಮೂಲಭೂತವಾಗಿ ಉಲ್ಲಂಘಿಸುತ್ತವೆ. ಈಗ ಮನುಷ್ಯ ಮನುಷ್ಯನಾಗಿ ಉಳಿದಿಲ್ಲ. ಇದು ಕೇವಲ ಆರ್ಥಿಕ ವಿದ್ಯಮಾನವಲ್ಲ ಅಥವಾ ಸಾಂಸ್ಕೃತಿಕ ಆಘಾತ ಮಾತ್ರವಲ್ಲ. ಇದು ಮಾರಣಾಂತಿಕ ಹೊಡೆತ. ಮಾನವನ ಸ್ಥಾನಕ್ಕೆ ಯಂತ್ರಗಳು ಬಂದ ಪ್ರಾರಂಭದಿಂದ ಇಂದಿನವರೆಗೆ ಲಕ್ಷಾಂತರ ಜನರು ಸತ್ತಿದ್ದಾರೆ.

ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಬೆಳಬವಣಿಗೆಗಳು ಈ ಬದಲಿಕೆಯ ಅರ್ಥ ಇನ್ನಷ್ಟು ಗಾಢಮಾಡಿವೆ. ಕಂಪ್ಯೂಟರ್ ಮತ್ತು ದೂರಸಂಪರ್ಕ ಕ್ಷೇತ್ರಗಳಲ್ಲಾದ ಸಾಧನೆಗಳು ಮಾಹಿತಿ ಸಂಗ್ರಹ ವ್ಯವಸ್ಥೆ, ಸಂಸ್ಕರಣ ಮತ್ತು ದೂರದ ಪ್ರದೇಶಗಳಿಗೆ ಯಂತ್ರಗಳು ಮಾಹಿತಿಯನ್ನು ವರ್ಗಾವಣೆ ಮಾಡುವ ವಿಧಾನಗಳಿಗೆ ಹೊಸ ಅರ್ಥವನ್ನೇ ಕಲ್ಪಿಸಿವೆ. ಇವು ಅಸಂಪ್ರದಾಯಕ ಆಧುನಿಕ ಯಂತ್ರಗಳು. ಏಕೆಂದರೆ ಇವುಗಳ ಕಾರ್ಯ ನಿರ್ವಹಣೆಯು ಹೆಚ್ಚು ವಿದ್ಯುತ್ ಅಥವಾ ಶಕ್ತಿಯನ್ನು ವ್ಯಯಿಸುವುದಿಲ್ಲ. ಹಾಗೆಯೇ ಪರಿಸರಕ್ಕೆ ಅವು ಹಾನಿ ಮಾಡುವುದೂ ಇಲ್ಲ. ಅಂಥ ಸಂಗತಿಗಳನ್ನು ಈ ಯಂತ್ರಗಳ ಪ್ರಕ್ರಿಯೆಯು ಒಳಗೊಂಡಿದೆ. ಆದರೆ ಈ ಯಂತ್ರಗಳು ಸಾಮಾನ್ಯವಾಗಿ ಯಾವಾಗಲೂ ನೇಪಥ್ಯದಲ್ಲೇ ಇರುವುದರಿಂದ ಮಾನಸಿಕ ಪ್ರಭಾವಬೀರುವುದಿಲ್ಲ. ಆದರೆ ಪರಿಸ್ಥಿತಿ ಈಗ ತೀರಾ ಕೆಟ್ಟದೆ. ಇಂಥ ಯಂತ್ರಗಳು ಮಾನವನಿಗೆ ಬದಲಿಯಾಗುವಲ್ಲಿ ಇದ್ದ ಅಡಚಣೆಗಳನ್ನು ತೆಗೆದು ಹಾಕುತ್ತವೆ. ಆದರೆ ಈ ಯಂತ್ರಗಳು ಮಾನವನಿಗೆ ಬದಲಿಯಾದರೆ ಅತ್ಯಂತ ಕರಾಳವಾಗಿರುತ್ತವೆ. ಏಕೆಂದರೆ, ಈ ಯಂತ್ರಗಳು ಮಾನವನ 'ಮಿದುಳು' ಮಾಡುವ ಕಾರ್ಯವನ್ನು ಮಾಡಬಲ್ಲವೆಂಬ ಹೆಗ್ಗಳಿಕೆಯನ್ನು ವ್ಯಾಪಕವಾಗಿ ಹೇಳಿಕೊಳ್ಳುತ್ತವೆ. ಈಗ 'ಕಂಪ್ಯೂಟರ್ ಪ್ರಜ್ಞೆ' (computer intelligence) ಎಂಬ ಸಂಶೋಧನಾ ಕ್ಷೇತ್ರವೇ ಇದೆ. ಹಾಗಾಗಿ ಈಗ ಮಾನವನಿಗೆ ಬದಲಾಗಿ ಯಂತ್ರಗಳು ಕಾರ್ಯನಿರ್ವಹಿಸಬಲ್ಲವೆಂಬ ಸಿದ್ಧಾಂತವನ್ನು ಖಡಾಖಂಡಿತವಾದ ವೈಜ್ಞಾನಿಕ ಪರಿಭಾಷೆಯಲ್ಲಿ ಸಮರ್ಥಿಸುವ ಪ್ರಯತ್ನಗಳು ನಡೆಯುತ್ತಿವೆ. ಇದು 'ಮಾನವನಿಗೆ ಬದಲಿಕೆ' ಎಂಬುದರ ಅರ್ಥನ್ನೇ ಇನ್ನಷ್ಟು ಗಾಢಗೊಳಿಸುತ್ತಿದೆ.

ಸತ್ಯದ ಉಲ್ಲಂಘನೆ ಕೇವಲ ಈ ಬದಲಿಕೆ ಪರಿಣಾಮವಲ್ಲ. ಅದು ಆ ಬದಲಿಕೆಯು ಹರಡಿಸುವ ಅರ್ಥದ ಭಾಗವೇ ಆಗಿದೆ. ಆದುದರಿಂದ ಸತ್ಯದ ಉಲ್ಲಂಘನೆಯೂ 'ಯಂತ್ರ' ಪದದ ಅಂತರಾರ್ಥದ ಭಾಗವೇ ಆಗಿದೆ. ಮನುಷ್ಯನಿಗೆ ಬದಲಿಕೆಯಾಗಿ ಬರುವ ಯಂತ್ರಗಳು ಎರಡು ಜಗತ್ತುಗಳ ಸೃಷ್ಟಿಗೆ ಕಾರಣವಾಗುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಕ್ರಮಬದ್ಧವಾಗಿ ಬೋಧಿಸಿ ಬೆಳಸಿದ ಜ್ಞಾನ ವ್ಯವಸ್ಥೆಯು 'ಲೋಕ ವಿದ್ಯೆ'ಯ ಹೆಸರಿನಲ್ಲಿ ಬದುಕಿರುವ ಅದರ ಸೋದರ ಸಂಬಂಧಿಯಾದ ಅಸಂಘಟಿತ ಜ್ಞಾನಧಾರೆಗಳನ್ನು ನುಂಗಿ ಹಾಕುತ್ತದೆ.[17]

ಕೆಲಸವನ್ನು ಕ್ಷಿಪ್ರವಾಗಿ ಮಾಡುವ ಹಿಂದಿನ ಸ್ಥಾನಮಾನದಿಂದ ಯಂತ್ರವು ಇಂದಿನ ಜಗತ್ತಿನಲ್ಲಿ ಅಧಿಕಾರ ಎಂಬ ಅರ್ಥ ಪಡೆದಿದೆ. ಇದರ ಮೂಲಕಾರಣಗಳು ಸಾಮಾಜಿಕ ರಚನೆ, ಆಸ್ತಿ ಸಂಬಂಧಗಳು, ರಾಜಕೀಯ ಅಧಿಕಾರ ವ್ಯವಸ್ಥೆಯ ಸ್ವರೂಪ ಮತ್ತು ಆಧುನಿಕ ವಿಜ್ಞಾನದಲ್ಲಿದೆ. ಪರಿವರ್ತನಯು ಎಲ್ಲಾ ಕ್ಷೇತ್ರಗಳನ್ನು

ಆವರಿಸಿರುವಾಗ ಬದಲಾವಣೆ ಹೊಂದುವುದು ಅನಿವಾರ್ಯ ಮತ್ತು ಅವಶ್ಯಕ. ಇಂತಹ ಸಂದರ್ಭದಲ್ಲಿ ನಾವು ಸಾಕಷ್ಟು ಎಚ್ಚರ ವಹಿಸಬೇಕು. ಇಲ್ಲವಾದಲ್ಲಿ ಪ್ರತಿಕೂಲ ಪರಿಣಾಮ ಅನುಭವಿಸಬೇಕಾಗುತ್ತದೆ.

ಈ ಅಂಶಗಳನ್ನೇ ಆಧಾರವಾಗಿಟ್ಟುಕೊಂಡು ಪ್ರಸನ್ನರವರಿಗಿರುವ ಅತಂಕವ್ಯಾವುದೆಂದು ಪುನರ್ ಅವಲೋಕಿಸುವ ಪ್ರಕ್ರಿಯೆಯಲ್ಲಿ ಕೈ ಮಗ್ಗವೂ ಸಹ ತನ್ನದೇ ಆದ ವೈಶಿಷ್ಟತೆ ಪಡೆದುಕೊಂಡಿದ್ದು, ಕೈಮಗ್ಗ ಪ್ರಕ್ರಿಯೆ ನಿಂತು ವಿದ್ಯುತ್ ಮಗ್ಗಕ್ಕೆ ಪ್ರಾಮುಖ್ಯತೆ ದೊರಕುತ್ತಿರುವ ಇಂತಹ ಪರಿಸ್ಥಿತಿಯಲ್ಲಿ ಕೈಮಗ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವವರ ಪರಿಸ್ಥಿತಿಯನ್ನು ಸುಧಾರಿಸ ಬೇಕೆಂಬ ಹಂಬಲದಿಂದ ಸತ್ಯಾಗ್ರಹ ಕಾರ್ಯಕ್ಕೆ ಕೈಹಾಕುತ್ತಾರೆ. ಹಾಗದರೆ, ಈ ಕೈಮಗ್ಗ ಪರಂಪರೆಯ ಹಿನ್ನೆಲೆ ಹೇಗಿದೆ? ಈಗ ಅದರ ಪರಿಸ್ಥಿತಿ ಹೇಗಿದೆ? ಎಂಬುದರ ಅವಲೋಕನೆ ಈ ಮುಂದಿನ ಭಾಗದಲ್ಲಿ ಚರ್ಚೆಯಾಗುತ್ತಿದೆ.

ಕೈಮಗ್ಗ ಸತ್ಯಾಗ್ರಹ ಏಕೆ?

ಕೈಮಗ್ಗವು ಸಾಯುತ್ತಿರುವ ಉದ್ದಿಮೆ ಎಂಬ ಕಲ್ಪನೆಯು ನಮ್ಮದೇಶದಲ್ಲಿ ಮನೆ ಮಾಡಿದೆ. ಇದೇ ತಪ್ಪು ಕಲ್ಪನೆ ಪಾರಂಪರಿಕ ಬೇಸಾಯ ಪದ್ದತಿ, ಪಾರಂಪರಿಕ ಹೈನುಗಾರಿಕೆ ಹಾಗೂ ಪಾರಂಪರಿಕ ಕುಶಲಕರ್ಮದ ಬಗ್ಗೆಯೂ ಇದೆ. ಕೈಮಗ್ಗ ಉದ್ದಿಮೆಯ ಬಗ್ಗೆ ಇರುವ ತಪ್ಪು ಕಲ್ಪನೆಗಳು ಒಂದೆರಡಲ್ಲ. ಉದಾ: ಕೈಮಗ್ಗ ಒಂದೆರಡು ಸಣ್ಣ ಜಾತಿಗಳಿಗೆ ಸೀಮಿತವಾದ ಉದ್ದಿಮೆಯೆಂದೂ, ಗಂಡಸರಿಗೆ ಸೀಮಿತವಾದ ಉದ್ದಿಮೆಯೆಂದೂ ತಪ್ಪು ಭಾವನೆ ಇದೆ. ನೇಕಾರಿಕೆ ಮಾಡದೇ ಇರುವ ಜನಾಂಗವೇ ಈ ದೇಶದಲ್ಲಿಲ್ಲ. ಬ್ರಾಹ್ಮಣರಿಂದ ಹಿಡಿದು ದಲಿತರ ವರೆಗೆ, ಮುಸಲ್ಮಾನರಿಂದ ಹಿಡಿದು ಕ್ರೈಸ್ತರವರೆಗೆ ಎಲ್ಲಾ ಜನಾಂಗಗಳಲ್ಲೂ ನೇಕಾರರಿದ್ದಾರೆ. 2009–10ರ ಕೈಮಗ್ಗ ಸರ್ವೆಕ್ಷಣೆಯ ಪ್ರಕಾರ ಕೈಮಗ್ಗ ನೇಕಾರಿಕೆಯಲ್ಲಿ ತೊಡಗಿಕೊಂಡಿರುವ ಮಹಿಳೆಯರ ಸಂಖ್ಯೆ ಶೇಕಡ 78, ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟು ಜನರ ಸಂಖ್ಯೆ ಶೇಕಡ 28, ಹಿಂದುಳಿದ ವರ್ಗಕ್ಕೆ ಸೇರಿದ ಬಡವರ ಸಂಖ್ಯೆ ಶೇಕಡ 45, ಈಗಲೂ 43 ಲಕ್ಷ ಜನರು ಈ ದೇಶದಲ್ಲಿ ಕೈಮಗ್ಗ ನೇಕಾರಿಕೆಯ ಉದ್ದಿಮಯಲ್ಲಿ ನಿರತರಾಗಿದ್ದಾರೆ. ಈಗಲೂ ನಾವು ಇಷ್ಟೆಲ್ಲ ಹಾಳುಗೆಡವಿದ ನಂತರವೂ, ನಮ್ಮ ದೇಶದಲ್ಲಿರುವ ಕೈಮಗ್ಗಗಳ ಸಂಖ್ಯೆ 24 ಲಕ್ಷವಾಗಿರುತ್ತದೆ. ಈ ಸಂಖ್ಯೆಯ ಮಹತ್ವವನ್ನು ಒತ್ತಿಹೇಳುವ ಅಗತ್ಯವಿದೆ. ನಮ್ಮದೇಶದ ಕೈಮಗ್ಗಗಳ ಸಂಖ್ಯೆಯು ಇಡೀ ವಿಶ್ವದಲ್ಲಿರುವ ಒಟ್ಟು ಕೈಮಗ್ಗಗಳ ಸಂಖ್ಯೆಗಿಂತ ಹೆಚ್ಚಿನದಾಗಿದೆ.

ಹೌದು ಈಗಲೂ ಕೈಮಗ್ಗ ಎಂಬುದು ನಮ್ಮ ದೇಶದ ಮಹತ್ವದ ರಾಷ್ಟ್ರೀಯ ಸಂಪತ್ತಾಗಿರುತ್ತದೆ. ಈ ಸಂಪತ್ತನ್ನು ಸಮರ್ಥವಾಗಿ ದುಡಿಸಿಕೊಂಡರೆ ಭಾರತವು ಆರ್ಥಿಕ ಪ್ರಗತಿ ಹೊಂದುವುದು ಸಾಧ್ಯವಿದೆ. ಪರಿಸರವನ್ನು ಹಾಳುಗೆಡವದೆ, ಹಳ್ಳಿಗಾಡನ್ನೂ ಬರಡಿಸದೆ, ಶ್ರೀಮಂತ ಬಡವ ಎಂಬ ಭೇದವನ್ನು ಹೆಚ್ಚುಮಾಡದೆ, ಆರ್ಥಿಕ ಪ್ರಗತಿಯನ್ನು ಸಾಧಿಸುವುದು ಕೈಮಗ್ಗ ಉದ್ದಿಮೆಯಿಂದ ಸಾಧ್ಯವಿದೆ. ಆದರೆ ನಮ್ಮ ಸರಕಾರಗಳು, ಸರಕಾರಿ ಅಧಿಕಾರಿಗಳು ಮಾಡುತ್ತಿರುವ ಕೆಲಸ

ತದ್ವಿರುದ್ಧವಾಗಿದೆ. ಸರಕಾರಿ ಅಧಿಕಾರಿಗಳು, ಗ್ರಾಮೀಣ ನೇಕಾರಿಕೆ ಕ್ಷೇತ್ರಗಳ ಮನೆಮನೆಗಳಿಗೂ ಹೋಗಿ, ಕೈಮಗ್ಗ ನೇಕಾರಿಕೆಯನ್ನು ತೊರೆದು ಬನ್ನಿ ವಿದ್ಯುತ್‌ಮಗ್ಗ ಹಾಕಿ ಎಂದು ದುಡ್ಡಿನ ಆಮಿಷ ಒಡ್ಡುತ್ತಿದ್ದಾರೆ. ನಮ್ಮ ಕರ್ನಾಟಕದ ಪರಿಸ್ಥಿತಿಯನ್ನೇ ಗಮನಿಸಿ! ಕರ್ನಾಟಕ ಸಾಂಸ್ಕೃತಿಕ ಹೆಮ್ಮೆಯ ಸಂಕೇತವಾಗಿದ್ದ ಇಳಕಲ್ ಸೀರೆ, ಮೇಲುಕೋಟೆಯ ಪಂಚೆ, ಉಡುಪಿಯ ಅಂಗವಸ್ತ್ರ, ಚಳ್ಳಕೆರೆಯ ಕಂಬಳಿಗಳು, ಹೆಚ್ಚೂಕಡಿಮೆ ನಾಶವಾಗಿ ಹೋಗಿವೆ.[18]

ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಬಟ್ಟೆತಯಾರಿಕೆ ವಿಧಾನವೂ ಸಹ ಆಧುನೀಕರಣಕ್ಕೆ ಒಳಪಟ್ಟಿದ್ದು, ಸುಲಭಕಾರ್ಯ ನಿರ್ವಹಣೆಯ ಸಲುವಾಗಿ ಜನ ಕೈಮಗ್ಗ ತೊರೆದು ವಿದ್ಯುತ್‌ಮಗ್ಗ ಅಳವಡಿಸಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲಾ ಕೈಮಗ್ಗದಲ್ಲಿ ತೊಡಗಿಸಿಕೊಳ್ಳುವ ಪ್ರಕ್ರಿಯೆಯು ಹೆಚ್ಚು ಶ್ರಮದಾಯಕ. ಒಂದು ದಿನಕ್ಕೆ ಒಂದು ಸೀರೆ ನೇಯಲು ಮಾತ್ರ ಸಾಧ್ಯ. ಅದೇ ವಿದ್ಯುತ್ ಮಗ್ಗದಿಂದ ದಿನಕ್ಕೆ ಮೂರರಿಂದ ನಾಲ್ಕು ಸೀರೆಗಳನ್ನು ನೇಯಬಹುದು. ಅಷ್ಟೇ ಅಲ್ಲದೆ ಕೈಮಗ್ಗ ಬಟ್ಟೆ ದುಬಾರಿಯಾದುದು, ವಿದ್ಯುತ್ ಮಗ್ಗದ ಬಟ್ಟೆ ಕಡಿಮೆ ದರದಲ್ಲಿ ದೊರಯುತ್ತದೆ. ಆದುದರಿಂದ ಜನ ವಿದ್ಯುತ್ ಮಗ್ಗದ ಬಟ್ಟೆಗಳಿಗೆ ಮಾರುಹೋಗುತ್ತಾರೆ. ಕೈ ಮಗ್ಗದಿಂದ ತಯಾರಾದ ಬಟ್ಟೆಗಳು ಮೂಲೆಗುಂಪಾಗುತ್ತವೆ. ಇದು ಇಂದಿನ ಪರಿಸ್ಥಿತಿಯ ದುರಂತ ಸ್ಥಿತಿ.

ಆದರೇ ವಿವಿಧ ಸರಕಾರಗಳು ಕೈ ಮಗ್ಗ ಮೀಸಲಾತಿ ಅಭಿನಿಯಮವನ್ನು ಗಾಳಿಗೆ ತೂರಿ ನೇಕಾರಿಕೆ ಕ್ಷೇತ್ರಗಳಲ್ಲಿ ವಿದ್ಯುತ್ ಮಗ್ಗಗಳನ್ನು ಅಳವಡಿಸುವ ಆತ್ಮಹತ್ಯಾಕಾರಕ ಕಾರ್ಯವನ್ನು ಮಾಡುತ್ತಾ ಬಂದಿವೆ. ನೇಕಾರರ ರಾಷ್ಟ್ರೀಯ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸುತ್ತಿರುವ ನಾವುಗಳು ಕೈ ಮಗ್ಗ ನೇಕಾರಿಕೆಯ ಯಂತ್ರೀಕರಣ ಪ್ರಕ್ರಿಯೆಯನ್ನು ಈ ಕೂಡಲೇ ನಿಲ್ಲಿಸಿ ಎಂದು ಕರೆಕೊಡುತ್ತೇವೆ. ಆದರೆ ಒಂದು ತಪ್ಪನ್ನು ತಿದ್ದುವ ಅರಸರದಲ್ಲಿ ಮತ್ತೊಂದು ತಪ್ಪು ಘಟಿಸದಿರಲಿ ಎಂಬ ಕಿವಿ ಮಾತನ್ನು ಸರಕಾರಗಳಿಗೆ ನಾವು ಹೇಳ ಬಯಸುತ್ತೇವೆ. ಕೈಮಗ್ಗ ಮೀಸಲಾತಿ ಅಧಿನಿಯಮವನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಿದಾಗ ಗ್ರಾಮೀಣ ಪ್ರದೇಶದ ವಿದ್ಯುತ್ ಮಗ್ಗಗಳ ಕಾರ್ಮಿಕರು ಬೀದಿಗೆ ಬೀಳಬಾರದು. ಅವರ ಪಾಲನೆ ಸರಕಾರದ ಹೊಣೆ. ಹಾಗಾಗಿ ವಿವಿಧ ಸರಕಾರಗಳು ವಿದ್ಯುತ್‌ಮಗ್ಗಗಳ ಕಾರ್ಮಿಕರಿಗೆ ನೂಲನ್ನು ಒದಗಿಸಿ ಕೈಮಗ್ಗ ಮೀಸಲಾತಿ ಅಧಿನಿಯಮದಡಿ ಒಳಪಡದೆ ಇರುವ ಬಟ್ಟೆಗಳನ್ನು ನೇಯಿಸಿ, ಸರ್ಕಾರಿ ಶಾಲೆಗಳ ಸಮವಸ್ತ್ರ, ಸರ್ಕಾರಿ ಆಸ್ಪತ್ರೆಗಳ ಹಾಸಿಗೆ ಹೊದಿಕೆ ರೈಲು ಹಾಗು ಬಸ್ಸುಗಳ ಹೊದಿಕೆ ಮುಂತಾದುವುಗಳನ್ನು ಕೊಂಡುಕೊಳ್ಳುವ ಮೂಲಕ ವಿದ್ಯುತ್ ಬಡಕಾರ್ಮಿಕರನ್ನು ಸಲಹಬೇಕು ಎಂದು ಆಗ್ರಯಿಸುತ್ತೇವೆ.

ಕೈಮಗ್ಗ ಕೈಗಾರಿಕೆಯನ್ನು ನಾವು ಬಳಸಿಕೊಳ್ಳಬೇಕು ಬೃಹತ್ ಕೈಗಾರಿಕೆಗಳಿಗೆ ನೀಡುವ ಪ್ರೋತ್ಸಾಹದ ರೀತಿಯಲ್ಲೇ ಕೈಗಾರಿಕೆಗೆ ಪ್ರೋತ್ಸಾಹ ನೀಡಬೇಕು ಎಂದು ಎಂ.ಎಸ್. ಸತ್ಯು ಹೇಳುತ್ತಾರೆ. ಕೈಮಗ್ಗ ನೇಕಾರಿಕೆಯ ಹಿಂದೆ ಕುಶಲತೆ ಇದೆ. ಕುಶಲ ಕೈಗಳನ್ನು ಆಧುನಿಕ ಯಂತ್ರದಡಿಗೆ ಹಾಕಿ ತುಳಿಯಬೇಡಿ ಎಂದು ಹೇಳಿದ ಬಿ. ಜಯಶ್ರೀಯವರ ಮಾತುಗಳು ವಿದ್ಯುತ್ ಮಗ್ಗದಿಂದ ನೇಯದ ಉತ್ಪನ್ನಗಳಿಗಿಂತಲೂ ಕೈಮಗ್ಗ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆಯಿದೆ ಎಂಬ ವಿಚಾರ

ತಿಳಿಸಿದ ಕೆ.ಹೆಚ್.ಮುನಿಯಪ್ಪನವರು, ಕೈಮಗ್ಗ ಮೀಸಲಾತಿ ಅಧಿನಿಯಮವನ್ನು ತಿದ್ದುಪಡಿಮಾಡಿ ದುರ್ಬಲಗೊಳಿಸಬಾರದು. ಅನಾಥ ಸ್ಥಿತಿಯಲ್ಲಿರುವ ಕೈಮಗ್ಗ ನೇಕಾರರನ್ನು ಆತ್ಮಹತ್ಯೆಗೆ ದೂಡಬಾರದು ಎಂದು ಬಡಜನರ ಬಗ್ಗೆ ಕಾಳಜಿ ಹೊಂದಿದ ದೇವನೂರು ಮಹದೇವರವರು ಜಾತಿ ವ್ಯವಸ್ಥೆಯ ಹಂಗಿಲ್ಲದಂತೆ ಪಾರಂಪರಿಕ ಕುಲಕಸುಬುಗಳನ್ನು ಪೋಷಿಸುವಂತಹ ಕೆಲಸವಾಗಬೇಕು ಎಂದ ಯು.ಆರ್. ಅನಂತಮೂರ್ತಿ, ಹಳ್ಳಿಗಳ ಗುಡಿ ಕೈಗಾರಿಕೆಗಳು ಹಾಗೇ ಉಳಿಯಬೇಕು. ಅವುಗಳೇ ನಮ್ಮ ಬದುಕು ಅವುಗಳೇ ನಮ್ಮ ಸೊಬಗು. ಕೈಮಗ್ಗದ ಬಟ್ಟೆ ಚಂದ. ಕೈಯಲ್ಲಿ ಹೊಲಿದ ಚಪ್ಪಲಿ ಚಂದ ಇಂತಹ ಕರಕುಶಲ ಕಲೆಯಿಲ್ಲದ ಊರಿನಲ್ಲಿ ಏನಿದೆ ಎಂದು ಕೈಕೆಲಸಕ್ಕೆ ಹೆಚ್ಚಿನ ಆಧ್ಯತೆ ನೀಡುವ ಮುಖ್ತಿಯಾರ್ ಅಲಿ (ಖ್ಯಾತ ಸೂಫಿ ಗಾಯಕ) ಹೀಗೆ ಹತ್ತು ಹಲವು ರೀತಿಯಲ್ಲಿ ಕೈಮಗ್ಗದ ಪರಂಪರೆ ಉಳಿಸುವ ಬಗ್ಗೆ ವಿದ್ಯಾವಂತ, ಬುದ್ಧಿಜೀವಿ ಚಿಂತಕರು ಒಮ್ಮತದ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಈರೀತಿಯ ಅಭಿಪ್ರಾಯ ಸೂಚಿಸಲು ಕಾರಣ ಇಷ್ಟೇ. ಭಾರತ ಸರಕಾರವು ತನ್ನ ಜವಳೀ ನೀತಿಯಲ್ಲಿ ಬದಲಾವಣೆ ತರಲು ಹೊರಟಿದೆ. ರಾಷ್ಟ್ರೀಯ ಚಳುವಳಿಯ ಲಾಂಛನದಂತಿದ್ದ ಕೈಮಗ್ಗ ಉದ್ದಿಮೆಯ ಮೂಲಸ್ವರೂಪವನ್ನೇ ಅದು ಬುಡಮೇಲು ಮಾಡ ಹೊರಟಿದೆ. ಈ ಬದಲಾವಣೆಯು ಒಂದೊಮ್ಮೆ ಜಾರಿಗೆ ಬಂದದ್ದೇ ಆದರೆ ಈಗಾಗಲೇ ಸಂಕಷ್ಟಕ್ಕೆ ಸಿಲುಕಿರುವ ಈ ಪಾರಂಪರಿಕ ಉದ್ದಿಮೆಯು ನಲುಗಿ ಹೋಗಲಿದೆ. ಜಾಗತೀಕರಣ ಹಾಗೂ ಕೊಳ್ಳುಬಾಕ ಸಂಸ್ಕೃತಿಗಳಿಗೆ ಮಾರುಹೋಗಿರುವ ನಮ್ಮ ರಾಜಕೀಯ ಪಕ್ಷಗಳು ವಸ್ತುಸ್ಥಿತಿಗೆ ಸಂಪೂರ್ಣಕುರುಡಾಗಿವೆ ಎಂದು ಹೇಳದೇ ಗತ್ಯಂತರವಿಲ್ಲ.

ಸೂಚಿತ ಬದಲಾವಣೆಯು ಅಸಹ್ಯ ಹುಟ್ಟಿಸುವಷ್ಟು ಸರಳವಾಗಿದೆ. ಕೈಮಗ್ಗದ ಒಡಲಿಗೆ ಒಂದು ಮೋಟಾರು ಜೋಡಿಸುವುದು! ಗ್ರಾಮೀಣ ಬಡನೇಕಾರನ ಕೈಗಳು ನೂಲುತ್ತಿದೆ ಎಂಬ ಕಾರಣ ನೀಡಿ ಕೈಮಗ್ಗದೊಳಗೊಂದು ಸ್ವಯಂಚಾಲಿತ ಯಂತ್ರವನ್ನು ತೂರಿಬಿಡುವುದು. 2013ರ ಮೇ 28ರಂದು ಪ್ರಕಟವಾಗಿರುವ 'ಎ ವಾರ್ಪ್ ಇನ್ ಪಾಲಿಸಿ' ಎಂಬ ಲೇಖನದಲ್ಲಿ (www.cottonyarnmarket.in) ಉದ್ದೇಶಿತ ಬದಲಾವಣೆಯನ್ನು ಈರೀತಿಯಲ್ಲಿ ವಿವರಿಸಲಾಗಿದೆ. ಬಡನೇಕಾರನ ಬಾಳಿನಲ್ಲಿ ಆಶಾಕಿರಣವೊಂದನ್ನು ಮೂಡಿಸುವ ದೃಷ್ಟಿಯಿಂದ ಕೈ ಉದ್ದಿಮೆ ಪುನರ್ ವ್ಯಾಖ್ಯಾನ ಮಾಡುವುದು ಈಗ ಅನಿವಾರ್ಯವಾಗಿದೆ.

ನಮ್ಮ ದೇಶದ ಒಟ್ಟು ಜವಳಿ ಉತ್ಪಾದನೆಯನ್ನು ಮೂರು ಉತ್ಪಾದನಾ ಕ್ಷೇತ್ರಗಳು ನಿರ್ವಹಿಸುತ್ತಿವೆ. ಅವುಗಳೆಂದರೆ ಜವಳಿ ಮಿಲ್ಲುಗಳು, ಪವರ್‌ಲೂಮ್ ಎಂಬ ಹೆಸರಿನಲ್ಲಿ ಕರೆಯಲ್ಪಡುವ ವಿದ್ಯುತ್ ಮಗ್ಗಗಳ ಕಾರ್ಖಾನೆಗಳು ಹಾಗೂ ಕೈಮಗ್ಗ. ಕೈಮಗ್ಗ ಕ್ಷೇತ್ರದಲ್ಲಿ ಮತ್ತೆರಡು ಉಪ ವಿಭಾಗಗಳಿವೆ. ನೂಲುವುದನ್ನು ಸಹ ಕೈಯಿಂದ ಮಾಡಿ ತಯಾರಿಸಿದ ಕೈಮಗ್ಗ ಬಟ್ಟೆಯನ್ನು ಖಾದಿ ಎಂದು ಕರೆಯಲಾಗುತ್ತದೆ. ನೂಲುವಿಕೆ ಯಂತ್ರದಿಂದಾದ ಬಟ್ಟೆಗಳನ್ನು ಕೈಮಗ್ಗ ಬಟ್ಟೆ ಎಂದು ಕರೆಯಲಾಗುತ್ತದೆ.

ದೇಶದ ಜವಳೀ ಉತ್ಪಾದನೆಯ ಸಿಂಹ ಪಾಲು, ಅಂದರೆ ಪ್ರತಿಶತ 61.32ರಷ್ಟು ಉತ್ಪಾದನೆಯು ವಿದ್ಯುತ್ ಮಗ್ಗಗಳ ಕಾರ್ಖಾನೆಯಿಂದ ಬರುತ್ತದೆ.

ಮಿಲ್ಲುಗಳು ಕೇವಲ 3.32 ಪೂರೈಕೆ ಮಾಡಿದರೆ ಕೈಮಗ್ಗವು ಶೇಕಡ 11.28 ಪೂರೈಕೆ ಮಾಡುತ್ತಿದೆ.

ಕೈಮಗ್ಗ ನೇಕಾರರಿಗೆ, ಅವರು ಗ್ರಾಮೀಣ ಬಡವರು ಹಾಗೂ ಸಂಕಷ್ಟಕ್ಕೆ ಒಳಗಾದವರು ಎಂಬ ಕಾರಣಕ್ಕಾಗಿ ಈವರೆಗೆ ಸಿಕ್ಕುತ್ತಿದ್ದ ಅಲ್ಪಸ್ವಲ್ಪ ಸಹಾಯಧನ, ಸಾಲ ಸೌಲಭ್ಯ ಇತ್ಯಾದಿ ಎಲ್ಲಾ ಸೌಕರ್ಯಗಳೂ ಇನ್ನು ಮುಂದೆ ವಿದ್ಯುತ್ ಮಗ್ಗಗಳ ಕಾರ್ಖಾನೆ ಮಾಲೀಕರ ಪಾಲಾಗಲಿದೆ. ಹಳ್ಳಿಯ ಬಡವರನ್ನು ಪೇಟೆಗೆ ತರುವ ಹುನ್ನಾರದ ಮತ್ತೊಂದು ಉದಾಹಾರಣೆ. ಕೇಂದ್ರ ಸರಕಾರದ ಈ ಜವಳಿ ನೀತಿಯಾಗಿದೆ ಎನ್ನದೆ ಬೇರೆ ದಾರಿಯಿಲ್ಲ! ಇಷ್ಟಕ್ಕೂ ವಿದ್ಯುತ್ ಮಗ್ಗಗಳ ಕಾರ್ಖಾನೆ ಮಾಲೀಕರುಗಳು ಕೈಮಗ್ಗದ ಹೆಸರಿನಲ್ಲಿ ಸುಳ್ಳು ಲೆಟರ್ ಹೆಡ್‌ಗಳ ಮೂಲಕ ಸಹಾಯಧನ ಕಬಳಿಸುವ ಕೆಲಸವನ್ನು ಈಗಾಗಲೇ ಮಾಡುತ್ತಿದ್ದಾರೆ ಮಾತ್ರವಲ್ಲ ತಮ್ಮ ಕಲಬೆರಕೆ ಮಾಲುಗಳನ್ನು ಕೈಮಗ್ಗವೆಂದೇ ನಂಬಿಸಿ ಗ್ರಾಹಕರಿಗೆ ಮಾರುತ್ತಿದ್ದಾರೆ.

ದುರಂತವೆಂದರೆ ಕೈಮಗ್ಗ ಉದ್ದಿಮೆಯು ನಿಜದಲ್ಲಿ ಸೋಲುತ್ತಿಲ್ಲ. ಬೇಕೆಂದೇ ಅದನ್ನು ಸೋಲಿಸಲಾಗುತ್ತಿದೆ. ದೇಶದಲ್ಲಿ ಹಾಗೂ ವಿದೇಶಗಳಲ್ಲಿ ಕೈಮಗ್ಗ ಬಟ್ಟೆಗಳ ಬೇಡಿಕೆಯು ವರ್ಷದಿಂದ ವರ್ಷಕ್ಕೆ ಏರಿಕೆ ಕಾಣುತ್ತಿದೆ. ಕೈಮಗ್ಗ ಉದ್ದಿಮೆಯಲ್ಲಿ ಭಾಗವಹಿಸುತ್ತಿರುವ ಒಟ್ಟು ನೇಕಾರರ ಸಂಖ್ಯೆ ಕುಸಿಯುತ್ತಿರುವಾಗಲೂ ಕೈಮಗ್ಗದ ಉತ್ಪಾದನೆ ಹಾಗೂ ಮಾರಾಟ ಕುಸಿದಿಲ್ಲ. ಈ ಕ್ಷೇತ್ರದಲ್ಲಿ ಕೆಲಸಮಾಡುತ್ತಿರವ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಯಶಸ್ವಿ ಸಹಕಾರ ಸಂಘಗಳ ಅನುಭವದ ಮಾತಿದು. ಉದಾ:- ನಾವು ನಡೆಸುತ್ತಿರುವ ದೇಸಿ ಹಾಗೂ ಚರಕ ಸಂಸ್ಥೆಗಳ ಬೇಡಕೆಯು ತೀವ್ರ ಆರ್ಥಿಕ ಹಿನ್ನಡೆಯ ಇಂದಿನ ಸಂದರ್ಭದಲ್ಲಿಯೂ ಸಹ ಏರಿಕೆ ಕಂಡಿದೆ. ಗ್ರಾಹಕರಿಗೆ ಪೂರೈಸಲಾಗದಷ್ಟು ಬೇಡಿಕೆ ದೇಸಿ ಉಡುಪುಗಳಿಗಿದೆ. ಇಂದು ಅಧಿಕಾರಶಾಹಿಯ ಕಪಿಮುಷ್ಠಿಯ ಹಿಡಿತಕ್ಕೆ ಸಿಲುಕಿಕೊಂಡು ನಲುಗುತ್ತಿದೆ. ಕೈಮಗ್ಗ ಪರಂಪರೆ ದಿವಂಗತ ಪ್ರಧಾನಮಂತ್ರಿ ರಾಜೀವ ಗಾಂಧಿಯವರು ಹಿಂದೆ ಹೇಳಿದ್ದ ಮಾತು ಈಗಲೂ ಸತ್ಯವಾಗಿದೆ. ಗ್ರಾಮೀಣ ಕ್ಷೇತ್ರಕ್ಕೆಂದು ಖರ್ಚುಮಾಡುವ ಪ್ರತಿ ರೂಪಾಯಿಯಲ್ಲಿ ಕೇವಲ ಹತ್ತುಪೈಸೆ ಮಾತ್ರವೇ ಹಳ್ಳಿಗಳನ್ನು ತಲುಪುತ್ತಿದೆ.

ಇಷ್ಟಕ್ಕೂ ಕೈಮಗ್ಗ ಪುನರ್‌ವ್ಯಾಖ್ಯಾನ ಅಗತ್ಯವೇ? ಕೈಗಳಿಂದ ಚಾಲಿತವಾಗುತ್ತಿದ್ದ ಮಗ್ಗವನ್ನು ಕೈ ಮೀರಿದ ಯಂತ್ರವನ್ನಾಗಿಸುವುದು ನಿಜಕ್ಕೂ ಪ್ರಗತಿಪರವೇ? ಅಥವಾ ಕೃಷಿ, ಹೈನುಗಾರಿಕೆ, ತೋಟಗಾರಿಕೆ, ಕುಶಲಕರ್ಮ, ನೇಕಾರಿಕೆ ಇತ್ಯಾದಿ ಗ್ರಾಮೀಣ ಉದ್ದಿಮೆಗಳಲ್ಲಿ ಯಂತ್ರಗಳನ್ನು ತಂದು ಜೋಡಿಸುವುದು ಜಾಣತನವೇ ಅಥವಾ ಪ್ರಗತಿ ಪರವೇ? ಸ್ವಯಂ ಚಾಲಿತ ಯಂತ್ರಗಳು ಅವಿಷ್ಕಾರಗೊಂಡು ಇಂದಿಗೆ ಮೂರು ಶತಮಾನಗಳೇ ಕಳೆದು ಹೋಗಿದೆ. ಮೂರು ಶತಮಾನಗಳ ನಮ್ಮ ಅನುಭವದಲ್ಲಿ ಯಂತ್ರಗಳು ,ಯಂತ್ರೀಕರಣ,ನಗರೀಕರಣ, ಜಾಗತೀಕರಣ ಇತ್ಯಾದಿ ಎಲ್ಲ ಕರಣಗಳೂ ಶ್ರೀಮಂತರನ್ನು ಮತ್ತಷ್ಟು ದರಿದ್ರರನ್ನಾಗಿಸಿವೆ.ಜಾಗತೀಕರಣದ ದೆಸೆಯಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಶ್ರೀಮಂತ ವರ್ಗದ ಜೊತೆ ಮಧ್ಯಮ ವರ್ಗವೂ ಸೇರಿ

ಕೊಬ್ಬಿ ಬೆಳೆಯುತ್ತಿದೆ. ಹಾಗಾಗಿ ಯಂತ್ರೀಕರಣದ ಕೂಗಿಗೆ ಬೃಹತ್ ಉದ್ದಿಮೆ ಪತಿಗಳ ಜೊತೆಗೆ ಮಧ್ಯಮ ವರ್ಗವೂ ದನಿ ಸೇರಿಸತೊಡಗಿದೆ. ಇದೊಂದು ರೀತಿ ಮಸ್ಥಿತಿಯೇ ಸರಿ.[19]

ಇನ್ನು ಹೊಸಪೀಳಿಗೆಯ ನೇಕಾರರನ್ನು ಕೈಮಗ್ಗದತ್ತ ಸೆಳೆಯುವುದೇ ದೊಡ್ಡಸವಾಲು ಎನ್ನುತ್ತಾರೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಸೀಮಾಗರ್ಗ್. ಇವರು ಕೈಮಗ್ಗ ಕ್ಷೇತ್ರದಲ್ಲಿನ ಸವಾಲುಗಳು ಮತ್ತು ಅದನ್ನು ಎದುರಿಸಲು ನಿಗಮ ನಡೆಸುತ್ತಿರುವ ಪ್ರಯತ್ನಗಳ ಬಗ್ಗೆ ಮಾತನಾಡಿದ್ದಾರೆ. ಕೈಮಗ್ಗ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾವುವೆಂದರೆ, ಕೈಮಗ್ಗ ಕ್ಷೇತ್ರದಲ್ಲಿ ಈಗ ದುಡಿಯುತ್ತಿರುವ ನೇಕಾರರಲ್ಲಿ ಹೆಚ್ಚಿನವರು 40ರಿಂದ 60ರ ವಯಸ್ಸಿನವರು. ಅಧಿಕ ಶ್ರಮದ ಕೆಲಸಗಳನ್ನು ನಿರ್ವಹಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ. ಹೊಸ ತಲೆಮಾರಿನ ನೇಕಾರರು ಇದರತ್ತ ಆಸಕ್ತಿ ವಹಿಸುತ್ತಿಲ್ಲ. ಏಕೆಂದರೆ ಅದಕ್ಕೆ ಹೆಚ್ಚಿನ ಸಮಯಬೇಕು ಆದರೆ ಆದಾಯ ಕಡಿಮೆ.

ವಿದ್ಯುತ್ ಚಾಲಿತ ಮಗ್ಗವು ಕೈಮಗ್ಗಕ್ಕೆ ದೊಡ್ಡ ಹೊಡೆತ ನೀಡಿದಿಯೇ? ನಿಜ. ಕೈಮಗ್ಗ ಹೆಚ್ಚಿನ ಶ್ರಮ ತೆಗೆದುಕೊಳ್ಳುತ್ತದೆ. ಅಲ್ಲದೆ ಉತ್ಪಾದನಾ ವೆಚ್ಚವೂ ಹೆಚ್ಚು. ಸರ್ಕಾರವು ವಿದ್ಯುತ್ ಚಾಲಿತ ಮಗ್ಗಕ್ಕೆ ಆಧ್ಯತೆ ನೀಡುತ್ತಿದೆ. ಯುವ ಪೀಳಿಗೆಯ ಜನರನ್ನು ತನ್ನತ್ತ ಸೆಳೆಯಲು ಪ್ರತಿ ವರ್ಷ ಆರು ತಿಂಗಳಕಾಲ ನಾವು ಹೊಸಬರಿಗೆ ತರಬೇತಿ ನೀಡುತ್ತಿದ್ದೇವೆ ಮತ್ತು ಇತರ ಸಲಕರಣೆಗಳನ್ನು ಸಹ ಪೂರೈಸಿದರು ವಿಫಲರಾಗುತ್ತಿದ್ದೇವೆ. ಕೈಮಗ್ಗ ಪುನಃಶ್ಚೇತನಕ್ಕೆ ಹಿಂದುಳಿದ ವರ್ಗಗಳಿಗೆ ವಿಶೇಷ ಯೋಜನೆ ಜಾರಿಯಲ್ಲಿದೆ. ಅವರಿಗೆ ಉಚಿತ ತರಬೇತಿ, ಉಚಿತ ಸಲಕರಣೆಗಳ ಪೂರೈಕೆ ಮಾಡುವುದರ ಜೊತೆಗೆ ನೇಯ್ದ ಉಡುಪಿನಲ್ಲಿ ಸಮಸ್ಯೆಗಳಿದ್ದರೂ ಅವುಗಳನ್ನು ಖರೀದಿಸುತ್ತಿದ್ದೇವೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕೈ ಮಗ್ಗ ಪರಂಪರೆ ಉಳಿಸಬೇಕಾದರೆ ಸರ್ಕಾರ ಸುದೀರ್ಘಕಾಲೀನ ಯೋಜನೆಯನ್ನು ಹಾಕಿಕೊಳ್ಳಬೇಕು. ನಿರುದ್ಯೋಗಿ ಯುವಕ-ಯುವತಿಯರಿಗೆ, ಮಹಿಳೆಯರಿಗೆ, ಹಿಂದುಳಿದ ವರ್ಗದ ಜನರಿಗೆ ಸ್ವ-ಉದ್ಯೋಗ ಕಾರ್ಯದಲ್ಲಿ ತೊಡಗಿಕೊಳ್ಳವಂತೆ ಮಾಡುವ ಮೂಲಕ ಮೂಲ ಪರಂಪರೆ ಉಳಿಯಬೇಕು ಎಂಬುದು ಈ ಅಧ್ಯಯನದ ಒಲವು.

ಈ ಅಧ್ಯಯನದ ಗ್ರಹೀತಗಳು :

- ಈ ಅಧ್ಯಯನದಲ್ಲಿ ಯಂತ್ರಗಳ ಅತಿಯಾದ ಅವಲಂಬನೆ ಬೇಡ ಎಂಬ ನಿಲುವು ಇದಕ್ಕಾಗಿ ವೈಯಕ್ತಿಕ ಸಾಧನೆ ಮುಖ್ಯ ಎಂಬ ಧೋರಣೆ.
- ಬದಲಾವಣೆ ತರದ ವ್ಯಕ್ತಿಯ ಬದುಕು ಅತ್ಯಂತ ದುಸ್ತರ ಮತ್ತು ದುರ್ಬಲವಾಗುತ್ತಿದೆ. ಬದಲಾವಣೆಯು ತರುವ ಹಂತದಲ್ಲಿ ಸಾಕಷ್ಟು ಎಚ್ಚರ ವಹಿಸಬೇಕು ಎಂಬ ನಿಲುವು.
- ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವವರ ಬಗೆಗಿನ ಕಾಳಜಿ ಶ್ರಮಜೀವಿಗಳ ದುಡಿಮೆಯನ್ನು ನಿರಾಕರಿಸಬಾರದು ಎಂಬ ನಿಲುವು.
- ಪಾರಂಪರಿಕ ಉತ್ಪಾದನಾ ವ್ಯವಸ್ಥೆ ಗಟ್ಟಿಗೊಳಿಸುವ ತವಕ, ರಾಷ್ಟ್ರೀಯ ಹೋರಾಟದ ಮುಖ್ಯ ಅಸ್ತ್ರವಾದ ಕೈಮಗ್ಗ ಪರಂಪರೆಯನ್ನು ಅಭಿವೃದ್ಧಿ ಪಡಿಸುವ ಕುರಿತ ಚಿಂತನೆ.
- ಹಿಂದುಳಿದ, ನಿರುದ್ಯೋಗಿ, ಮಹಿಳೆ, ಯುವಕ ಯುವತಿಯರಿಗೆ ಸ್ವ-ಉದ್ಯೋಗ ಕಾರ್ಯದಲ್ಲಿ ತೊಡಗಿಕೊಳ್ಳಲು ಅಧಿಕಾರಿಗಳು ಸೂಕ್ತ ನೆರವನ್ನು ಕಲ್ಪಿಸಿಕೊಡುವ ಪ್ರಯತ್ನ ಮಾಡಬೇಕು ಎಂದು ಬಯಸುತ್ತಾರೆ.

ಕೊನೆ ಟಿಪ್ಪಣಿ :

1. ದೇಸಿ ಜೀವನ ಪದ್ಧತಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2005; ಪುಟ ಸಂಖ್ಯೆ 29
2. ಅದೇ – ಪುಟ ಸಂಖ್ಯೆ 28
3. ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು; ಪ್ರೊ॥ ಸುನಿಲ್ ಸಹಸ್ರಬುಧೆ; ಕನ್ನಡಕ್ಕೆ ಅನುವಾದ ಕೆ.ವಿ. ಪುಟ್ಟಸ್ವಾಮಿ; ಪುಟ ಸಂಖ್ಯೆ 28
4. ದೇಸಿ ಜೀವನ ಪದ್ಧತಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2005; ಪುಟ ಸಂಖ್ಯೆ 32
5. ಯಂತ್ರಗಳನ್ನು ಕಳಚೋಣ ಬನ್ನಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 30,31
6. ಹಿಂದ್ ಸ್ವರಾಜ್; ಮೋಹನ ಕರಮಚಂದ ಗಾಂಧಿ; ಕರ್ನಾಟಕ ಗಾಂಧೀ ಸ್ಮಾರಕ ನಿಧಿ; 2008; ಪುಟ ಸಂಖ್ಯೆ 3,4,5
7. ಕೊಂದವರಾರು; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 56
8. ಯಂತ್ರಗಳನ್ನು ಕಳಚೋಣ ಬನ್ನಿ; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 65
9. ಕೊಂದವರಾರು; ಪ್ರಸನ್ನ; ಒಂಟಿದನಿ ಪ್ರಕಾಶನ; 2009; ಪುಟ ಸಂಖ್ಯೆ 62
10. ಅದೇ – ಪುಟ ಸಂಖ್ಯೆ 56
11. ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು; ಪ್ರೊ॥ ಸುನಿಲ್ ಸಹಸ್ರಬುಧೆ; ಕನ್ನಡಕ್ಕೆ ಅನುವಾದ ಕೆ.ವಿ. ಪುಟ್ಟಸ್ವಾಮಿ; ಪುಟ ಸಂಖ್ಯೆ 48
12. ಅದೇ – ಪುಟ ಸಂಖ್ಯೆ 49
13. ಅದೇ – ಪುಟ ಸಂಖ್ಯೆ 51
14. ಅದೇ – ಪುಟ ಸಂಖ್ಯೆ 52
15. ಅದೇ – ಪುಟ ಸಂಖ್ಯೆ 52
16. ಅದೇ – ಪುಟ ಸಂಖ್ಯೆ 53
17. ಅದೇ – ಪುಟ ಸಂಖ್ಯೆ 60
18. ಸತ್ಯಾಗ್ರಹ ಏಕೆ?; ಅಖಿಲ ಭಾರತ ಕೈಮಗ್ಗ ಸಂಘಟನೆಗಳ ಒಕ್ಕೂಟ; ಪುಟ ಸಂಖ್ಯೆ 3,4
19. ವಿಜಯ ಕರ್ನಾಟಕ ವೃತ್ತ ಪತ್ರಿಕೆ–ಆಗಸ್ಟ್ 28,2013
20. ಪ್ರಜಾವಾಣಿ ವೃತ್ತ ಪತ್ರಿಕೆ–ಜನವರಿ 30.2014

ಅಧ್ಯಾಯ – 5

ಸಮಾರೋಪ :

ಪ್ರಸನ್ನರವರ ಯಂತ್ರಗಳನ್ನು ಕಳಚೋಣ ಬನ್ನಿ ಕೃತಿಯಲ್ಲಿನ ಸಾಂಸ್ಕೃತಿಕ ಅಂಶಗಳು ತನ್ನದೇ ಆದ ಸ್ವರೂಪವನ್ನು ಪಡೆದು ಕೊಂಡಿದ್ದು, ಯಂತ್ರನಾಗರೀಕತೆಯಿಂದ ಪಾಶ್ಚಾತ್ಯ ಸಂಸ್ಕೃತಿಯು ನಮ್ಮಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ಮೂರು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಬಂಡವಾಳಶಾಹಿ ವ್ಯವಸ್ಥೆಯಿಂದ ಉಂಟಾದ ಸಾಮಾಜಿಕ–ಧಾರ್ಮಿಕ ಅಧಃಪತನ ಎಂಬ ಅಧ್ಯಯನವು ಅಭಿವೃದ್ಧಿ ಮತ್ತು ಬಡತನದ ಸ್ವರೂಪ ಕಾಲದಿಂದ ಕಾಲಕ್ಕೆ ಹೇಗೆ ಭಿನ್ನ ಸ್ವರೂಪ ಪಡೆದುಕೊಳ್ಳುತ್ತಿದೆ. ಎಂಬುದನ್ನು ವಿವೇಚಿಸುತ್ತದೆ.ಹಾಗೆಯೇ ಬಂಡವಾಳಶಾಹಿ ವ್ಯವಸ್ಥೆ ಇತರ ವರ್ಗದ ಜನರನ್ನು ನಿಯಂತ್ರಿಸಲು ಮಾರುಕಟ್ಟೆಯನ್ನು ಸ್ಥಾಪಿಸಿಕೊಂಡಿದೆ ಅದರ ಮುಖ್ಯ ಉದ್ದೇಶವೇ ಸ್ವಾರ್ಥ ಮತ್ತು ಲಾಭಗಳಿಕೆಯಾಗಿದೆ ಅದನ್ನು ನಿಯಂತ್ರಿಸುವುದಕ್ಕೆ ನಾವು ಅಳವಡಿಸಿಕೊಳಗಳ್ಳಬೇಕಾದ ಮೌಲ್ಯಗಳು ಯಾವುವು ಎನ್ನುವುದನ್ನು ಚರ್ಚಿಸುತ್ತದೆ. ಧರ್ಮ ಮತ್ತು ದೇವರ ಬಗೆಗಿನ ಭಿನ್ನ ನಿಲುವುಗಳು ಕೃತಿಯಲ್ಲಿ ಹೇಗೆ ವ್ಯಕ್ತಗೊಂಡಿವೆ ಇದನ್ನು ಕೂಡ ಬಂಡವಾಳಶಾಹಿ ಪ್ರಭುತ್ವವು ತನ್ನ ಅಧಿಕಾರವನ್ನು ಸ್ಥರೀಕರಿಸಿಕೊಳ್ಳಲು ತನಗೆ ಪೂರಕವಾಗಿ ಬಳಸಿಕೊಳ್ಳುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಧಾರ್ಮಿಕ ಅಂಧಶ್ರದ್ಧೆ ಮತೀಯ ಗಲಭೆಗೆ ಮೂಲಕಾರಣವಾಗುತ್ತಿದೆಯೇ ಎಂಬುದರ ಕುರಿತು ಚರ್ಚಿಸಲಾಗಿದೆ.

ಜಾಗತೀಕರಣ ಪ್ರಕ್ರಿಯೆ ಒಂದು ವರ್ಗದ ಜನರಿಗೆ ಮಾತ್ರ ಅನುಕೂಲ ಮಾಡಿಕೊಡುತ್ತಿದ್ದು, ಕೂಲಿ ಕಾರ್ಮಿಕರನ್ನು ಕಡೆಗಣಿಸಲ್ಪಡುತ್ತಿದೆ ಎಂಬುದನ್ನು ಕುರಿತು ಈ ಅಧ್ಯಯನ ವಿಸ್ತರಿಸುತ್ತಾ ಹೋಗುತ್ತದೆ.

ಜೀವ ಪರಿಸರ ಮತ್ತು ಮಾನವ ಪರಿಸರದ ನಡುವಣ ಸಂಘರ್ಷ ಎಂಬ ಅಧ್ಯಯನವು ವೈಜ್ಞಾನಿಕ ಮೌಢ್ಯತೆ, ಜನರನ್ನು ಮರುಳು ಮಾಡುವ ತಂತ್ರಗಾರಿಕೆ, ವಾತಾವರಣದಲ್ಲಿ ಏರುಪೇರು, ಪರಿಸರ ನಾಶವಾಗಲಿಕ್ಕೆ ಮನುಷ್ಯನೇ ಕಾರಣ ಎಂಬ ಧೋರಣೆ. ಜನರ ಮನೋಭಾವಗಳಲ್ಲಿನ ಬದಲಾವಣೆ, ಪ್ರತಿಭಟನೆಯ ಸ್ವರೂಪವನ್ನು ಬಿನ್ನ ರೀತಿಯಲ್ಲಿ ತೋರಿಸುವ ಕ್ರಮ. ಇಂದಿನ ಯುವಕರ ವೇಷ ಭೂಷಣಗಳಲ್ಲಿನ ಬದಲಾವಣೆ, ಪರಿಸ್ಥಿತಿ ಮತ್ತಷ್ಟು ಹದಗೆಡುವ ಸಾಧ್ಯತೆ, ಸಂಚಾರ ವ್ಯವಸ್ಥೆ ಕಲ್ಪಿಸಲು ಕಾಡನ್ನು ಕಡಿಯುತ್ತಿರುವುದು, ಕಲುಷಿತಗೊಂಡ ಪರಿಸರ, ತ್ಯಾಜ್ಯ ವಸ್ತುಗಳಿಂದ ನಾನಾ ರೀತಿಯ ತೊಂದರೆಯುಂಟಾಗುತ್ತಿರುವುದು.

ಇತಿಹಾಸವನ್ನು ಗಮನಿಸಿದಾಗ, ಮನುಷ್ಯ ಮತ್ತು ಪ್ರಾಣಿ ಪಕ್ಷಿಗಳ ನಡುವಿನ ಸಂಬಂಧ ಸಾಮರಸ್ಯತೆಯಿಂದ ಕೂಡಿದ್ದು, ಅದು ಬರಬರುತ್ತ ಭಿನ್ನ ರೀತಿಯಲ್ಲಿ ಮಾರ್ಪಾಡಾಗುತ್ತಿದೆ. ಮನುಷ್ಯ ಮಾನವೀಯತೆ ಕಳೆದುಕೊಂಡು ಪ್ರಾಣಿಯ ಜೊತೆ

ಪ್ರಾಣಿಯಾಗಿ ವರ್ತಿಸುತ್ತಿರುವುದು. ಕಾಡುಗಳ ರಕ್ಷಣೆಗೆಂದೇ ಸ್ಥಾಪನೆಯಾದ ಅರಣ್ಯ ಇಲಾಖೆ ಮರ ಗಿಡಗಳ ರಕ್ಷಣೆಯಲ್ಲಿ ವೈಫಲ್ಯತೆ ಹೊಂದುತ್ತಿರುವುದು. ಈ ಮಧ್ಯೆ ಕಾಡಿನಲ್ಲಿ ವಾಸಿಸುತ್ತಿರುವ ಗಿರಿಜನರ ಅತಂತ್ರ ಸ್ಥಿತಿ, ಎತ್ತ ನೋಡಿದರತ್ತ ಪ್ಲಾಸ್ಟೀಕಿನ ಮಯ, ಕೊಳೆಯದೆ ನಾರುತ್ತಿರುವ ಕಸ, ಅಷ್ಟೇ ಅಲ್ಲದೆ ವಿಷ ಅನಿಲ ಗಾಳಿಯಲ್ಲಿ ಸೇರ್ಪಡೆಗೊಳ್ಳುತ್ತಿರುವುದು ಸಾಕಷ್ಟು ಜನರು ರೋಗ ರುಜಿನಗಳಿಗೆ ತುತ್ತಾಗುತ್ತಿರುವುದು. ಈ ಮದ್ಯೆ ಗಣಿಗಾರಿಕೆಗಾಗಿ ಭೂಮಿಯನ್ನು ಮತ್ತಷ್ಟು ಬರ್ಬರ ಗೊಳಿಸುತ್ತಿರುವುದನ್ನು ಕಾಣಬಹುದಾಗಿದೆ.

ಹೊಸ ತಂತ್ರಜ್ಞಾನ ಬಳಸಿಕೊಂಡರೂ ಸಹ ಅದು ಶಾಶ್ವತ ಪರಿಹಾರವಲ್ಲ ಎಂಬುದನ್ನು ವಿಜ್ಞಾನವೇ ನಮಗೆ ಹೇಳಿಕೊಟ್ಟಿರುವ ಪಾಠವಿದು. ಈ ಹಿನ್ನಲೆಯಲ್ಲಿ ಜೀವ ಪರಿಸರದ ಮೇಲೆ ಮಾನವ ಪರಿಸರವು ಯಾವರೀತಿಯ ಪ್ರಭಾವ ಬೀರಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

ದೇಸಿ ಜೀವನಕ್ಕೆ ಮರಳುವ ಮತ್ತು ಕೈಮಗ್ಗ ಪರಂಪರೆಯ ಬಗೆಗಿನ ಕಾಳಜಿ ಎಂಬ ಅಧ್ಯಯನವು ಪ್ರಸಕ್ತ ದಿನಗಳಲ್ಲಿ ಯಂತ್ರಗಳು ಮಾಡುವ ಕೆಲಸ ಸಹಜ ಕ್ರಿಯೆಯಾಗಿ ಬಿಟ್ಟಿದೆ. ಮನುಷ್ಯನ ಜೀವನವು ಯಂತ್ರಗಾರಿಕೆಯೊಂದಿಗೆ ಹೊಂದಿಕೊಂಡಿದ್ದು ಸರಳ, ಸುಲಭ, ಐಶರಾಮಿ ಬದುಕಿಗಾಗಿ ಹಾತೊರೆಯುವುದಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಸಹ ತಾನು ಮುಂದುವರೆಯಬೇಕು ಅದಕ್ಕಾಗಿ ಯಾವ ಮಾರ್ಗವನ್ನು, ಯಾವ ಯಂತ್ರವನ್ನು ಬಳಸಲು ಸಿದ್ದ ಎಂಬ ನಿಲುವನ್ನು ತಾಳಿ ವೈಯುಕ್ತಿಕ ಸ್ವಾರ್ಥತೆ, ಲಾಭ, ದುರಾಸೆಯಲ್ಲಿ ಮುಳುಗಿ ಹೋಗುತ್ತಿರುವುದನ್ನು ಕಾಣಬಹುದಾಗಿದೆ. ಬಹುಶಃ ಈ ರೀತಿಯ ದುರಾಸೆ ಲಾಭಗಳಿಕೆಯು ಪ್ರತಿಯೊಬ್ಬ ವ್ಯಕ್ತಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಯಂತ್ರಗಳನ್ನು ಬಳಸದ ವ್ಯಕ್ತಿಯ ಜೀವನ ಅತ್ಯಂತ ದುಸ್ತರವಾಗಿದೆ. ಹಾಗೆ ನೋಡಿದರೆ ಇಂದು ಒಬ್ಬ ಸಾಮಾನ್ಯ ರೈತನಿಂದ ಹಿಡಿದು ಜಮೀನ್ದಾರನವರೆಗೂ ಎಲ್ಲರೂ ಸಹ ಯಂತ್ರಗಳನ್ನು ಬಳಕೆ ಮಾಡುತ್ತಿದ್ದಾರೆ. ಹಾಗಾಗಿ ಯಂತ್ರನಾಗರೀಕತೆಯು ಮನುಷ್ಯ ಬದುಕಿನ ಎಲ್ಲಾ ಸ್ಥರಗಳನ್ನು ಆವರಿಸಿಕೊಂಡು ತನ್ನ ಕಾರ್ಯ ನಿರ್ವಹಿಸುತ್ತಿದೆ. ಒಂದು ವಿಪರ್ಯಾಸವೆಂದರೆ; ಬದಲಾವಣೆ ತರುವ ಭರದಲ್ಲಿ ಬದುಕಿನ ರೀತಿ ರಿವಾಜುಗಳನ್ನು ಪರಿವರ್ತಿಸುತ್ತಿದೆ. ಮೂಲತಃ ಪರಿವರ್ತನೆ ಮನುಷ್ಯನಿಗೆ ಪೂರಕವಾಗಿರಬೇಕೇ ಹೊರತು ಮನುಷ್ಯನ ನಾಶಕ್ಕೆ ಹವಣಿಸಬಾರದು.

ನಿಧಾನವಾಗಿ ಜೀವನದೊಂದಿಗೆ ಬೆರೆತ ಯಂತ್ರವು ಇಂದು ಜೀವನಕ್ಕೆ ಮಾರಕವಾಗಿದೆ ಕಾರಣವೇನೆಂದರೆ ಮನುಷ್ಯನ ಆಲಸ್ಯ, ಸೋಮಾರಿತನ, ಬೇಜವಾಬ್ದಾರಿತನ, ಸುಲಭ ಕಾರ್ಯ ಸಫಲತೆಗಾಗಿ ಹಾತೊರೆಯುವುದಾಗಿದೆ. ಅಂದರೆ ದೈಹಿಕ ಶ್ರಮ ವಹಿಸಿ ಕಾರ್ಯನಿರ್ವಹಿಸಲು ಇಷ್ಟವಿಲ್ಲದೆ ಇರುವುದು ಎಂದರ್ಥ.

ನಾವು ಉಡುವ ಬಟ್ಟೆ, ತಿನ್ನುವ ಆಹಾರ, ಬದುಕಿನ ಶೈಲಿ ಎಲ್ಲವು ಪರಿವರ್ತನೆಗೊಂಡಿದೆ. ಹಿಂದೆ ಮಾಡುತ್ತಿದ್ದ ಕೆಲಸಗಳಿಗೂ ಈಗ ಮಾಡುತ್ತಿರುವ ಕೆಲಸಗಳಿಗೂ ಸಾಕಷ್ಟು ವ್ಯತ್ಯಾಸವಿದೆ. ಈ ವ್ಯತ್ಯಾಸ ಅನಿವಾರ್ಯವೂ ಹೌದು. ಇಲ್ಲವಾದಲ್ಲಿ ಜಗತ್ತಿನ ಇತರ ರಾಷ್ಟ್ರಗಳ ಜೊತೆಗೆ ಸರಿಸಮಾನವಾಗಿ ಕಾರ್ಯನಿರ್ವಹಣೆ ಸಾಧ್ಯವಾಗುವುದಿಲ್ಲ. ಪರಿವರ್ತನೆ ಮಾಡ ಹೊರಟಿರುವ ನಾವು ಮುಂದಾಗಬಹುದಾದ ದುರಂತದ ಬಗ್ಗೆ ಯೋಚಿಸಿಲ್ಲವೆಂಬುದು ಪ್ರಸನ್ನರವರ ನಿಲುವು

ಈ ಕೃತಿಯಲ್ಲಿ ಯಂತ್ರನಾಗರೀಕತೆಯನ್ನು ಸಂಪೂರ್ಣವಾಗಿ ವಿರೋಧಿಸುವುದಿಲ್ಲ, ಆದರೆ ಅವುಗಳ ಅತಿಯಾದ ಅವಲಂಬನೆ ಬೇಡ ಎಂಬುದು ಅವರ ಮಾತುಗಳ ಮೂಲಕ ಸುಸ್ಪಷ್ಟವಾಗುತ್ತದೆ. ಹಾಗೆಯೇ ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿರುವವರ ಬಗ್ಗೆ ಕಾಳಜಿ ಹೊಂದಿದ ಇವರು ಅವರ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗಲು ಸರ್ಕಾರ ಸರಿಯಾದ ರೀತಿಯ ಕ್ರಮ ಕೈಗೊಳ್ಳಬೇಕು ಎಂಬ ಸೂಚನೆ ನೀಡುತ್ತಾರೆ. ಅನಕ್ಷರಸ್ಥ, ನಿರುದ್ಯೋಗಿಗಳಿಗೆ, ಮಹಿಳೆಯರಿಗೆ, ಯುವಕರಿಗೆ, ಸ್ವಉದ್ಯೋಗ ಕಾರ್ಯದಲ್ಲಿ ತೊಡಗಿಕೊಳ್ಳುವಂತೆ ಮಾಡುವ ಉದ್ದೇಶ ಮತ್ತು ಸ್ವದೇಶಿ ವಸ್ತುಗಳಿಗೆ ಬೆಂಬಲ ಬೆಲೆ ನೀಡಬೇಕು. ಅದೇ ರೀತಿ ಯಾವುದೇ ರೀತಿಯ ಬದಲಾವಣೆ ತರುವುದಿದ್ದರೂ ಅದು ಮೊದಲು ವೈಯಕ್ತಿಕ ಜೀವನದಲ್ಲಿ ನಂತರ ಅದು ತಾನೇ ತಾನು ಸಾರ್ವಜನಿಕರಂಗವನ್ನು ಪ್ರವೇಶ ಮಾಡಿದೀತು ಎಂಬುದು ಒಟ್ಟಾರೆಯಾಗಿ ತಿಳಿದು ಬರುವ ಸಂಗತಿಯಾಗಿದೆ.

ಪರಾಮರ್ಶನ ಗ್ರಂಥಗಳು

ಮೂಲ ಆಕರ ಗ್ರಂಥಗಳು :

1. *ಯಂತ್ರಗಳನ್ನು ಕಳಚೋಣ ಬನ್ನಿ*
   ಪ್ರಸನ್ನ – 2009 – ಒಂಟಿದನಿ ಪ್ರಕಾಶನ

ಇತರ ಆಕರ ಗ್ರಂಥಗಳು :

1. *ಅಮೃತ ಮತ್ತು ಗರುಡ*
   ಡಿ.ಆರ್ ನಾಗರಾಜ – 2006 – ಅಕ್ಷರ ಪ್ರಕಾಶನ
2. *ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು*
   ಪ್ರೊ.ಸುನಿಲ್ ಸಹಸ್ರ ಬುಧೆ (ಕನ್ನಡಕ್ಕೆ ಅನುವಾದ ಕೆ.ವಿ.ಪುಟ್ಟಸ್ವಾಮಿ) – 2003 – ಕನ್ನಡ ಪುಸ್ತಕ ಪ್ರಾಧಿಕಾರ
3. *ಕರ್ನಾಟಕ ಸಂಸ್ಕೃತಿ ಸಮೀಕ್ಷೆ*
   ಡಾ|| ಎಚ್.ತಿಪ್ಪೇರುದ್ರಸ್ವಾಮಿ – 1997 – ಡಿ.ಕೆ.ವಿ.ಮೂರ್ತಿ
4. *ಕೊಂದವರಾರು ನಾಟಕ ಕೃತಿ*
   ಪ್ರಸನ್ನ – 2009 – ಒಂಟಿದನಿ ಪ್ರಕಾಶನ
5. *ಜಾಗತೀಕರಣ ಒಂದು ಸಮಗ್ರ ಮಂಥನ*
   ರಾಜೇಂದ್ರ ಚನ್ನಿ (ಸಂ)
   2004 – ಕರ್ನಾಟಕ ಸಾಹಿತ್ಯ ಅಕಾಡೆಮಿ
6. *ದೇಸಿ ಜೀವನ ಪದ್ಧತಿ*
   ಪ್ರಸನ್ನ – 2005 – ಒಂಟಿದನಿ ಪ್ರಕಾಶನ
7. *ದೇಶೀ ದರ್ಶನಗಳು*
   ನ.ರವಿಕುಮಾರ – 1999 – ಅಭಿನವ ಪ್ರಕಾಶನ
8. *ಪರಂಪರೆಯೊಂದಿಗೆ ಪಿಸುಮಾತು*
   ಬರಗೂರು ರಾಮಚಂದ್ರಪ್ಪ – 2004 – ಅಂಕಿತ ಪ್ರಕಾಶನ
9. *ಪ್ರಸನ್ನ*
   ಡಾ|| ಹೇಮ ಪಟ್ಟಣ ಶೆಟ್ಟಿ – 2000 – ಕರ್ನಾಟಕ ನಾಟಕ ಅಕಾಡೆಮಿ
10. *ಪ್ರತಿ ಸಂಸ್ಕೃತಿ*
    ರಹಮತ್ ತರೀಕೆರೆ – 2010 ಅಭಿನವ ಪ್ರಕಾಶನ

11. *ಪ್ರಜಾವಾಣಿ*

ವೃತ್ತಪತ್ರಿಕೆ – ಜನವರಿ 30, ಜೂನ್ 15, 2014
ಮತ್ತು ಜೂನ್ 5, 6 ಮತ್ತು 16, 2014

12. *ಮೌಖಿಕ ಕಥನ*

ಡಾ॥ ಮೋಗಳ್ಳಿ ಗಣೇಶ್ – 2006 – ಕನ್ನಡ ವಿಶ್ವವಿದ್ಯಾಲಯ, ಹಂಪಿ

13. *ವಿಮರ್ಶೆಯ ಪರಿಭಾಷೆ*

ಓ.ಎಲ್.ನಾಗಭೂಷಣ – 2013 – ಸ್ವಪ್ನ ಬುಕ್ ಹೌಸ್

14. *ವಿಜಯಕರ್ನಾಟಕ*

ವೃತ್ತಪತ್ರಿಕೆ – 28, ಆಗಸ್ಟ್ 2013

15. *ಸಂಸ್ಕೃತಿ ಕಥನ*

ಡಿ.ಆರ್. ನಾಗರಾಜ – 2002 – ಅಕ್ಷರ ಪ್ರಕಾಶನ

16. *ಸಮಗ್ರ ಗದ್ಯ*

ಜಿ.ಎಸ್.ಶಿವರುದ್ರಪ್ಪ – 2009 – ಲಕ್ಷ್ಮಿ ಮುದ್ರಣಾಲಯ

17. *ಸತ್ಯಾಗ್ರಹ ಏಕೆ?*

ಅಖಿಲ ಭಾರತ ಕೈಮಗ್ಗ ಸಂಘಟನೆಗಳ ಒಕ್ಕೂಟ – 2014

18. *ಸಾಂಸ್ಕೃತಿಕ ಅಧ್ಯಯನ*
ರಹಮತ್ ತರೀಕೆರೆ – 2009 ಅಭಿನವ ಪ್ರಕಾಶನ

19. *ಸಾಹಿತ್ಯ ಕಥನ*

ಡಿ.ಆರ್. ನಾಗರಾಜ – 2002 – ಅಕ್ಷರ ಪ್ರಕಾಶನ

20. *ಸಾಹಿತ್ಯ ವಿಮರ್ಶೆ*

ಸಿ.ಎನ್. ರಾಮಚಂದ್ರನ್ – 2010 – ಕರ್ನಾಟಕ ಸಾಹಿತ್ಯ ಅಕಾಡೆಮಿ

21. *ಹಿಂದ್ ಸ್ವರಾಜ್*
ಮೋಹನ ಕರಮಚಂದ ಗಾಂಧಿ – 2008 – ಕರ್ನಾಟಕ ಗಾಂಧಿ ಸ್ಮಾರಕ ನಿಧಿ

22. *ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು*
ವಿನಯಲಾಲ್ ಮತ್ತು ಆಶೀಶ್‌ನಂದಿ ಸಂಪಾದಿಸಿರುವ

ಪರಿಭಾಷಾಕೋಶ 2007 – ಅಕ್ಷರ ಪ್ರಕಾಶನ